# ಕೊಡಗು ಸಂಗಾತಿ

ಡಿಸಂಬರ್ 1 ರಿಂದ 31, 2002 ಪಾಕ್ಷಿಕ ಪತ್ರಿಕೆ ( ಜಾರ್ಧೆ 15, ಪೆರಾರ್ದೆ 16 )

1055c, ದೊಡ್ಡಣ್ಣ ಬಿಲ್ಡಿಂಗ್ಸ್, ಹುಣಸೂರು ರಸ್ತೆ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

R. No. KA/SK/MYS-88/2002 ಸಂಪುಟ : 6 ಸಂಚಿಕೆ : 17-18 ಪುಟಗಳು : 24 ಬೆಲೆ ರೂ. : 12-00

ಕೊಡಗು ಸಂಗಾತಿ

ಸ್ಥಾಪನೆ
9-4-1997

ಲೇಖನ : ಒಳಪುಟದಲ್ಲಿ.

ಕೊಡಗು ಸಂಗಾತಿ - ನಾ ಕಂಡಂತೆ - ಶಿವಳ್ಳಿ ಕೆಂಪೇಗೌಡ

# "ಪುಣ್ಯ" ವಧು-ವರರ ಅನ್ವೇಷಣಾ ಕೇಂದ್ರ ಸುಂಟಿಕೊಪ್ಪ

***ಶುಭ ಕಾರ್ಯ್ಯ***

1. ಮೈಸೂರಿನ ರಾಘವೇಂದ್ರ ನಗರದಲ್ಲಿ ವಾಸವಾಗಿರುವ ಸುಬ್ಬಯ್ಯನವರ ಪುತ್ರ ಶಶಿಧರ ಮತ್ತು ಕುಶಾಲನಗರ ಹೋಬಳಿ ರಂಗ ಸಮುದ್ರದ ಮಾವಜಿ ಬೆಳ್ಯಪ್ಪನವರ ಪುತ್ರಿ ಕವಿತಾ ಇವರ ವಿವಾಹವು ತಾರೀಖು 21-10-2002 ರಂದು ಕುಶಾಲನಗರದ ಕಾಳೇಘಾಟ್ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನಡೆಯಿತು.
2. ನಾಪೋಕ್ಲುವಿನ ಅರೆಯಡ ಸೋಮಪ್ಪನವರ ಪುತ್ರಿ ಜಯಲಕ್ಷ್ಮಿ ಮತ್ತು ಭಾಗಮಂಡಲ ನಾಡು ಕುಡಿಯತ್ತೂರು ಗ್ರಾಮದ ಮಂದೇಟಿರ ಅಪ್ಪಣ್ಣನವರ ಪುತ್ರ ಹರೀಶ್ ಇವರ ವಿವಾಹವು ತಾರೀಖು 27-10-2002 ರಂದು ಮಡಿಕೇರಿಯ ಮೇಲಿನ ಕೊಡವ ಸಮಾಜದಲ್ಲಿ ವಿಜೃಂಭಣೆಯಿಂದ ನಡೆಯಿತು.
3. ಮೈಸೂರಿನ ಸಿದ್ಧಲಿಂಗಪುರದಲ್ಲಿ ವಾಸವಿರುವ ನಿಡುಬೆ ಕಾರ್ಯಪ್ಪನವರ ಪುತ್ರಿ ಮೀನಾ ಹಾಗೂ ಮದೆನಾಡು ಗ್ರಾಮದ ಹುದೇರಿ ಬೋಪಯ್ಯನವರ ಪುತ್ರ ಚಿತ್ರಕುಮಾರ್ ಇವರ ವಿವಾಹವೂ ತಾರೀಖು 22-11-2002 ರಂದು ಮಡಿಕೇರಿಯ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನಡೆಯಿತು.
4. ಮಡಿಕೇರಿ ತಾಲ್ಲೂಕು ಮದೆನಾಡು ಗ್ರಾಮದ ಕೊಲ್ಯದ ರಾಮಪ್ಪನವರ ಪುತ್ರ ಗಿರೀಶ್ ಮತ್ತು ಪುತ್ತೂರಿನ ಪಡೀಲ್ ಮನೆ ಕೃಷ್ಣಮೂರ್ತಿ ಗೌಡರ ಪುತ್ರಿ ಸುಷ್ಮಾ ಇವರ ವಿವಾಹವೂ ತಾರೀಖು 25-11-2002 ರಂದು ಮಡಿಕೇರಿಯ ಜೆ.ಯಿ.ಸಿ. ಯುಟಿಲಿಟಿ ಹಾಲ್‌ನಲ್ಲಿ ವಿಜೃಂಭಣೆಯಿಂದ ನಡೆಯಿತು.

*ಈ ಎಲ್ಲಾ ನವದಂಪತಿಗಳಿಗೆ ಶುಭ ಕೋರುವ,*

ಶ್ರೀಮತಿ ಕಡ್ಯದ ರತಿ ಅರುಣ್‌ಕುಮಾರ್
"ಪುಣ್ಯ" ವಧು-ವರರ ಅನ್ವೇಷಣಾ ಕೇಂದ್ರ, ಸುಂಟಿಕೊಪ್ಪ.
ದೂರವಾಣಿ - 0827, ಕಛೇರಿ - 662083, ಮನೆ - 662819

# ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ (ರಿ.) ಮೈಸೂರು.

ನವಂಬರ್ 24 ಮತ್ತು ಡಿಸಂಬರ್ 1 ರ ಭಾನುವಾರಗಳಂದು ಮೈಸೂರಿನ ಗೌಡ ಜನತೆಯ "ರಸಪ್ರಸ್ನೆ/ಕ್ವಿಜ್/ ಚಿತ್ರಕಲೆ/ ಸೋಭಾನೆ/ ಗೌಡ ಕ್ವಿಜ್ ಇತ್ಯಾದಿಗಳಲ್ಲಿ ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೂ ಹಾಗೂ ಆಮಂತ್ರಿತರಿಗೂ ಸಹಕರಿಸಿದ ಸರ್ವ ಗೌಡ ಬಾಂಧವರಿಗೂ ಈ ಮೇಲಿನ ಸಂಘದ ಎಲ್ಲಾ ಪದಾಧಿಕಾರಿಗಳಿಗೂ ಈ ಮೂಲಕ ವಂದನೆಗಳನ್ನು ಅರ್ಪಿಸುತ್ತಿದ್ದೇನೆ. ಹೆಚ್ಚಿನ ಮಾಹಿತಿಗಳು ಮುಂದಿನ ಸಂಚಿಕೆಯಲ್ಲಿ ಬರಲಿವೆ.

ಶ್ರೀ ತಡಿಯಪ್ಪನ ಕುಮಾರ ಜಯ
ಅಧ್ಯಕ್ಷರು.

# *ನಿಧನ*

ಭಾಗಮಂಡಲ ನಿವಾಸಿ ಪಾಣತ್ತಲೆ ದಿ|| ದೇವಯ್ಯನವರ ಮಗ ಆನಂದನವರು 1-11-2002 ರ ಶುಕ್ರವಾರ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 46 ವರ್ಷ ಪ್ರಾಯವಾಗಿತ್ತು. ಮೃತರು ತಾಯಿ, ಪತ್ನಿ ಇಬ್ಬರು ಪುತ್ರಿಯರು ಹಾಗೂ ಒಬ್ಬ ಪುತ್ರ, ಮೂವರು ಸಹೋದರರನ್ನು ಅಲ್ಲದೆ ಅಪಾರ ಬಂಧು ವರ್ಗದವರನ್ನು ಅಗಲಿರುವರು.

ವರದಿ : ಬಾರಿಕೆ ನಿತಿನ್ ಕುಮಾರ್

# ದಂಬೆಕೋಡಿ ಕುಟುಂಬದಿಂದ ಬಿಳಿಗೇರಿ ಶಾಲೆ ದತ್ತು ಸ್ವೀಕಾರ



ಮಾಜಿ ಸಚಿವ ಡಿ. ಎ. ಚಿಣ್ಣಪ್ಪ, ಹಾಗೂ ಇತರರು

ಇಲ್ಲಿಗೆ ಸಮೀಪದ ಬಿಳಿಗೇರಿಯ ಸರಕಾರಿ ಮಾದರಿ ಶಾಲೆಯ ಉಸ್ತುವಾರಿಯನ್ನು ಇತ್ತೀಚೆಗೆ ದಂಬೆಕೋಡಿ ಕುಟುಂಬದಿಂದ ದತ್ತು ಸ್ವೀಕರಿಸಲಾಯಿತು. ಈ ಪ್ರಯುಕ್ತ ಜರುಗಿದ ಸಮಾರಂಭದಲ್ಲಿ ಮಾಜಿ ಸಚಿವ ಡಿ. ಎ. ಚಿಣ್ಣಪ್ಪ, ಲೀಲಾವತಿ ಚಿಣ್ಣಪ್ಪ, ಕಾಂಗ್ರೆಸ್ ಮುಖಂಡ ಎನ್. ಮಹಾಬಲೇಶ್ವರ ಭಟ್, ಗ್ರಾ. ಪಂ. ಸದಸ್ಯ ಮಂಞ್ಞಿರ ತಿಮ್ಮಯ್ಯ, ಪರ್ಲಕೋಟಿ ಸುಬ್ಬಮ್ಮ, ಶಾಲಾ ಸಮಿತಿ ಅಧ್ಯಕ್ಷ ದಂಬೆಕೋಡಿ ಗೋಪಾಲ ಮೊದಲಾದವರು ಪಾಲ್ಗೊಂಡಿದ್ದರು. ಶಾಲಾ ಮಕ್ಕಳಿಗೆ ಪಠ್ಯ ಸಾಮಾಗ್ರಿ ವಿತರಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯಿನಿ ಶಾರದಾ ಅವರು ಸ್ವಾಗತಿಸಿ, ಶಿಕ್ಷಕಿ ಅನುರಾಧ ವಂದಿಸಿದರು.

- ಸಂಗಾತಿ

**2002,** ಡಿಸಂಬರ್ 1 ರಿಂದ 31ರ ತನಕ

## ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ರಾಜ್ಯದಲ್ಲಿ ಬರಪೀಡಿತ : | - ಸಂಪಾದಕೀಯ | 02 |
| ಶುಭ ವಿವಾಹ : | - ಸಂಗಾತಿ | 02 |
| ಕೋಟೆ ಆವರಣದಲ್ಲಿ ಸ್ಮಾರಕ ಮತ್ತು ವೀರವನ ಸ್ಥಾಪಿಸಲು ಒತ್ತಾಯ : | - ಪಟ್ಟಡ ಪ್ರಭಾಕರ | 03 |
| ಐಕೊಳ ಗ್ರಾಮದ ನೂತನ ಅಧ್ಯಕ್ಷರಾಗಿ ಪಾರೇರ ವಸಂತ / ಉಳುವಾರನ ಶೀಲಾ ಪೊನ್ನಪ್ಪ ಆಯ್ಕೆ : | - ಸಂಗಾತಿ | 04 |
| ನಾನು ಕಂಡಂತೆ ಕೊಡಗು ಸಂಗಾತಿ : | - ಶಿವಳ್ಳಿ ಕೆಂಪೇಗೌಡ | 05 |
| ಪತ್ರ ವಿಭಾಗ -1 ಈ ರೀತಿ ಭಿನ್ನ - ಬ್ಯಾದ ಬೇಡ : | - ಜೈನೀರ ವೆಂಕಟೇಶ್ | 07 |
| ಪತ್ರ ವಿಭಾಗ -2 ಕೊಡಗು ಗೌಡ ಸಮಾಜ (ರಿ) : | - ತೇನನ ರಾಜೇಶ್ ಸೋಮಣ್ಣ | 07 |
| ಗೌಡರ ಗೋತ್ರ - ಬೇಕೆ ಬೇಡ್ವೆ ? : | - ಪೂಜಾರಿ ಮೊಣ್ಣಪ್ಪ | 08 |
| ಮೈಸೂರಿನಲ್ಲಿ ಹುತ್ತರಿ ಆಚರಣೆ : | - ಪಟ್ಟಡ ನಿಶಾ | 09 |
| 14-9-2002 ರಂದು ಆಕಾಶವಾಣಿಯಲ್ಲಿ ಪ್ರಸಾರವಾದ ವಿಷ್ಯ : | - ಶ್ರೀಮತಿ ಬೈತಡ್ಕ ಜಾನಕಿ | 10 |
| ಗೌಡ ಮಹಿಳಾ ಸಮಾಜ, ಬೆಂಗಳೂರು - ಚಟುವಟಿಕೆಗಳು : | - ಬಿಟ್ಟೀರ ಚೊಂದಮ್ಮ, ಶಂಭು | 11 |
| ಭಯ - ಭಯವೆಂದರೇನು ? : | - ಸಂಗಾತಿ | 12 |
| ಸ್ವಾಭಿಮಾನಿ ಹುಡುಗಿ : | - ಶಿಪ್ರಾ, ಕೊಡಗು | 14 |
| ಗೌಡ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ : | - ಬಿ. ರೇವತಿ ಸಂದನ್ | 18 |
| **ಅರೆ ಗನ್ನಡ ಭಾಷಿಕ ವಿಭಾಗ :** | | |
| ಬಾಲಸಂಗಾತಿ ವಿಭಾಗ : ನ್ಯಾಯಾ ತಿರ್ಮಾನ | - ಬಿಟ್ಟೀರ ಚೊಂದಮ್ಮ | 02 |
| ಯಂ ಎ ಓದಿದ ಗೂಡೆ | - ಪಟ್ಟಡ ಪ್ರಭಾಕರ | 16 |
| **ಕವನ** | | |
| ಕಾವೇರಿ ಸಿರಿ | - ಊರುಬೈಲು ಲೋಕೇಶ | 04 |
| ಸುಳ್ಯದ ಸಂಪಿಗೆ | - ಮಂಡೆಕೋಲು ವಾಣಿ ಕುಮಾರ್ | 09 |


| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | ಕೊಡಗು ಸಂಗಾತಿ, 1055c, ದೊಡ್ಡಣ್ಣ ಬಿಲ್ಡಿಂಗ್, ಹುಣಸೂರು ರಸ್ತೆ, ಅಂಚೆ ಕಛೇರಿ ಎದುರು, ಹಿನಕಲ್ ಅಂಚೆ, ಮೈಸೂರು - 17.ಫೋನ್:0821/404290 |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಪ್ಪೆ, ಹಸೆಮಣೆ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್ ಕೀ ಚೈನ್ ಲಭ್ಯ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : 08272/228047<br>ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/229620 |
| ವಿರಾಜಪೇಟೆ | ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/456591 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ ಕುಶಾಲನಗರ - 571 234 ಫೋನ್ : 08276/673370 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 12ರೂ.

ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ರಾಜ್ಯದಲ್ಲಿ ಬರಪೀಡಿತ ಸಮಸ್ಯೆ

ಈ ವರ್ಷದ ಬರಗಾಲ ಬಹಳ ಭೀಕರವಾಗಿದೆ. ಹಿಂದಿನ ಕಾಲದಲ್ಲಿ ಒಂದು ಪ್ರದೇಶಕ್ಕೆ ಬರ ಬಂದಾಗ ಅಲ್ಲಿನ ಜನರು ಊಟವಿಲ್ಲದೆ ಸತ್ತ ಎಷ್ಟೋ ಉದಾಹರಣೆಗಳಿವೆ. 1943-45ರ ಸಮಯದಲ್ಲಿ ಬಂಗಾಳದಲ್ಲಿ ಬರಗಾಲ ಬಂದು ಸಾವಿರಾರು ಜನರು ಮೃತರಾದರು ಅದೆಷ್ಟೋ ಮಂದಿ ಸಂಕಷ್ಟಕ್ಕೀಡಾದರು.

ಆದರೆ ಈ ವರ್ಷದ ಬರಗಾಲವು ಅತೀ ತೀವ್ರ ಸ್ವರೂಪವಾಗಿದ್ದರೂ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಬರಗಾಲಕ್ಕೆ ತುತ್ತಾದ ಜನರಿಗೆ ಜೀವನ ಸಾಗಿಸುವುದಕ್ಕೆ ಕೂಲಿಗಾಗಿ ಕಾಳು ಯೋಜನೆಯ ಮುಖಾಂತರ ಜನರಿಗೆ ಕೆಲಸ ಕೊಟ್ಟು ಅವರಿಗೆ ಆಹಾರ ಧಾನ್ಯಗಳನ್ನು ವಿತರಿಸಿ ಜನರು ಸಾಯುವುದನ್ನು ತಪ್ಪಿಸಿ ಆಪತ್ಬಾಂದವನ ಪಾತ್ರ ವಹಿಸಿದೆ.

ಹಿಂದಿನ ಕಾಲದಲ್ಲಾದರೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಆಹಾರವನ್ನು ಸಾಗಿಸಲು ಕಷ್ಟ ಪಡಬೇಕಾಗುತ್ತಿತ್ತು. ಆದರೀಗ ಹಾಗಿಲ್ಲ. ಸಾರಿಗೆ ಸೌಕರ್ಯ ಬಹಳ ಉತ್ತಮ ರೀತಿಯಲ್ಲಿ ಸುಧಾರಣೆ ಆಗಿರುವುದರಿಂದ ಆಹಾರ ಧಾನ್ಯಗಳನ್ನು ಸಾಗಿಸುವ ಕಷ್ಟವೂ ಬಹಳ ಕಡಿಮೆಯಾಗಿ ಅನುಕೂಲವಾಗಿದೆ.

ಈಗ ತುರ್ತಾಗಿ ಆಗಬೇಕಾದ ಕೆಲಸವೆಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬರ ಪರಿಹಾರಕ್ಕೆ ಮಂಜೂರು ಮಾಡಿದ ಹಣ ಮತ್ತು ಧಾನ್ಯಗಳು ಮಧ್ಯವರ್ತಿಗಳ ಕೈ ಸೇರದೆ ನೇರವಾಗಿ ಫಲಾನುಭವಿಗಳಿಗೆ ದೊರಕುವಂತಾದರೆ ಬರ ಪರಿಹಾರ ಸಮರ್ಪಕವಾಗಿ ನಡೆದಿದೆ ಎಂದರ್ಥ.

## ಶುಭ ವಿವಾಹ



1) ಮೈಸೂರು ನಿವಾಸಿ ನಂಗಾರು ರಾಮಯ್ಯನವರ ಪುತ್ರಿ ರೇಖಾ (B.Sc., B.A.M.S.,)ಳಿಗೂ ಮತ್ತು ಕುಂದಾಪುರ ತಾಲ್ಲೂಕು ಬೈಂದೂರು ಗ್ರಾಮದ ಶ್ರೀ ಆರ್. ಸುಬ್ರಾಯನವರ ಪುತ್ರ ದೀಪಕ್ M.B.B.S. ಇವರಿಗೂ ದಿನಾಂಕ 28-10-2002 ರಂದು ಮಡಿಕೇರಿಯಲ್ಲಿರುವ ಕೆಳಗಿನ ಗೌಡ ಸಮಾಜದಲ್ಲಿ ನಡೆಯಿತು.

2) ಬೆಂಗಳೂರು ನಿವಾಸಿ ಕುಯ್ಯುಮುಡಿ ಸೋಮಣ್ಣನವರ ಪುತ್ರಿ ಪೂರ್ಣಿಮಾಳಿಗೂ ಮತ್ತು ಹೊಸ್ಕೇರಿ ಗ್ರಾಮದ ಬೊಳ್ಳೂರು ಚೆಂಗಪ್ಪನವರ ಪುತ್ರ ದಿನೇಶ್ ಕುಮಾರ್‌ನಿಗೂ ದಿನಾಂಕ 20-10-2002ರಂದು ಮಡಿಕೇರಿಯ ಕೆಳಗಿನ ಗೌಡ ಸಮಾಜ ಕಲ್ಯಾಣ ಮಂಟಪದಲ್ಲಿ ವಿವಾಹವು ನಡೆಯಿತು.

3) ಬೆಂಗಳೂರು ನಿವಾಸಿ ಕರ್ಣೇಯ್ಯನ ಎ. ರಾಜುನವರ ಪುತ್ರಿ ದೀಪಿಕಾಳಿಗೂ ಮಡಿಕೇರಿ ನಗರದಲ್ಲಿ ವಾಸವಿರುವ ಶ್ರೀ ವರದರಾಜ್ (ಅಡ್ವಕೇಟ್) ಇವರ ಪುತ್ರ ಭಗತ್‌ರಾಜ್‌ನಿಗೂ ದಿನಾಂಕ 27-10-2002 ರಂದು ಕುಶಾಲನಗರ ಗೌಡ ಸಮಾಜದಲ್ಲಿ ಆರತಕ್ಷತೆಯೊಂದಿಗೆ ನಡೆಯಿತು.

4) ಪಿರಿಯಾಪಟ್ಟಣ ತಾಲ್ಲೂಕು ಕೋಗಿಲೆವಾಡಿ ಗ್ರಾಮದ ಕರೆಮನೆ ಪೂವಯ್ಯನವರ ಮಗಳು ಲತಾಳಿಗೂ ಕುಂದಾಚೇರಿ ಗ್ರಾಮದ ಕೇಕಡ ಮುತ್ತಪ್ಪನವರ ಪುತ್ರ ಲವಕುಮಾರನ ವಿವಾಹವು ದಿನಾಂಕ 18-11-2002 ರಂದು ಮೇಲಿನ ಗೌಡ ಸಮಾಜದಲ್ಲಿ ನಡೆಯಿತು.

*ಬಾಲ ಸಂಗಾತಿ ವಿಭಾಗ - ಮುಂದುವರ್ದದೆ.*

*ಕತೆ -6*

### ನ್ಯಾಯಾ ತೀರ್ಮಾನ:

ಬಾಳ ಹಿಂದೆ ಸಗರಂತೇಳುವ ಒಬ್ಬ ರಾಜ ಇತ್ತ್. ಅವಂಗೆ ಇಬ್ಬರು ಹೆಣ್ಣ್‌ಗ ಇದ್ದೊ. ಆದರೆ ಏನ್ ಮಾಡ್ದು. ಒಬ್ಬ ಮಗಂಸನ ಇತ್ತ್‌ಲೆ. ಅದರ್‌ಂದ ಸಗರಗೆ ತುಂಬಾ ದುಃಖಿ ಆಗಿತ್ತ್. ಆಮೇಲೆ ಅಂವ ಒಬ್ಬ ಮುನಿಯ ಹತ್ರ ಹೋಗಿ ಅವನ ಸೇವೆ ಮಾಡ್ತ್. ಮುನಿಗೆ ತುಂಬಾ ಸಂತೋಷ ಆತ್. ಸಗರಂಗೆ ವರ ಕೊಟ್ಟತ್. ಈ ವರದ ಕಾರಣಂದಾಗಿ ಸಗರನ ಹಿರಿಯ ಹೆಂಣ್ಣ್‌ಗೆ ಒಬ್ಬ ಮಗ ಹುಟ್ಟಿತ್. ಅವನ ಹೆಸ್‌ರ್ ಅಸಮಂಜಸತ. ಕಿರಿಯ ಹೆಂಣ್ಣ್‌ಗೆ ಅರುವತ್ತು ಸಾವಿರ ಮಕ್ಕ ಹುಟ್ಟಿದ್ದೊ. ಕಾಲ ಕಳ್ದಂಗೆ ಎಲ್ಲಾ ಮಕ್ಕ ಬೆಳ್ದ್ ದೊಡ್ಡವಾದೊ. ರಾಜಕುಮಾರನಾದ ಅಸಮಂಜಸ ತುಂಬಾ ದುಃಷ್ಟ ಆಗಿತ್ತ್. ಅಂವ ತಮಾಷೆಗೆತ್ತೇಳಿ ನಗರದ ಬೇರೆ ಮಕ್ಕಳ್ನ ನೀರಿಗೆ ಬಿಸಾಡ್‌ತ್ತಿತ್ತು. ಮತ್ತೆ ನೋಡಿ ಆನಂದಲಿ ಕೇಕೆ ಹಾಕಿ ನೆಗಾಡ್‌ತ್ತಿತ್ತ್. ಹಿಂಗೆ ಅಸಮಂಜಸ ಸುಮಾರ್ ಮಕ್ಕಳ್ನ ಕೊಂದ್‌ಬುಡ್ತ್.


ಜನಂಗ ಬಹಳ ದುಃಖಿತರಾದೊ. ಅವು ಎಲ್ಲಾ ಸೇರಿ ರಾಜನ ಹತ್ರ ಬಂದೊ. ಅಸಮಂಜಸ ಮಾಡ್ದ ದುರಾಚಾರನ ಎಲ್ಲಾ ಹೇಳ್ದೊ. ಆಗ ರಾಜ ಮಂತ್ರಿಗಳ್ನ ಕರ್ದ್ ಮಗನ ವಿಷಯನ ಹೇಳ್ತ್. ಆಗ ಏನ್ ಮಾಡಲಿತ ಕೇಳ್ತ್. ಮಂತ್ರಿಗ ಹೇಳ್ದೊ ಪ್ರಜಾ ಪೀಡಕನಾದ ಅಸಮಂಜಸ ಈ ರಾಜ್ಯಂದ ಹೊರ ಹಾಕಕುಂತ. ರಾಜ ಮಂತ್ರಿಗಳ ತೀರ್ಮಾನನ ಒಪ್ಪಿತ್. ಮಗ ಆದರೂ ಅಸಮಂಜಸನ ಅಂವ ಹೊರಗೆ ಹಾಕಿತ್. ರಾಜನ ನ್ಯಾಯ ತೀರ್ಮಾನನ ನೋಡಿ ನಗರದ ಜನ ತಲೆ ಬಾಗಿದೊ.


ಅದ್‌ಕೆ ಹಿರಿಯರ್ ಹೇಳುವೆ - "ಕುಲದ ಹಿತದೃಷ್ಟಿಲಿ ಒಬ್ಬ ಅವಿವೇಕಿ ಇದ್ದರೆ ಅಂವನ ಹೊರಗೆ ಹಾಕಕು." "ಗ್ರಾಮಕೆ ಹಿತವಾಗುವುದಾದರೆ ಒಂದು ಕುಲನೇ ದೂರ ಇಡಕು". "ದೇಶಕ್ಕೆ ಹಿತ ಆಗುದಾದರೆ ಒಂದು ಗ್ರಾಮನೇ ಬಿಡಕ್". "ಆತ್ಮ ಸಾಕ್ಷಾತ್ಕಾರಕ್ಕಾದರೆ ಈ ಭೂಮಿನೇ (ಸಂಸಾರ) ಬಿಡೊಕು."

-ಬಿಟ್ಟೀರ ಚೊಂದಮ್ಮ, ಶಂಭು.

ನಾನಿಲ್ಲದಿದ್ದರೆ ಏನೂ ಅಲ್ಲಾ, ಆದರೆ ಸಮಾಜಕ್ಕೆ ನಾನು ಬೇಕೆ ಬೇಕು.

# ಕೋಟೆ ಆವರಣದಲ್ಲಿ ಸ್ಮಾರಕ ಮತ್ತು ವೀರವನ ಸ್ಥಾಪಿಸಲು ಒತ್ತಾಯ :





ಗಣ್ಯರ ಸಮ್ಮುಖದಲ್ಲಿ ಸಂಚಾಲಕ ಗುಡ್ಡೆ ಮನೆ ರಮೇಶ್ ಅವರಿಂದ ಸಾಧನೆ ವಿವರಣೆ

ಬ್ರಿಟಿಷರ ವಿರುದ್ಧ "ಕೊಡಗಿನ ಸ್ವಾತಂತ್ರ್ಯಕ್ಕಾಗಿ" ದಂಗೆಎದ್ದು ಹೋರಾಡಿ 1837ರ ಅಕ್ಟೋಬರ್ 31 ರಂದು ಮಡಿಕೇರಿ ಕೋಟೆ ದ್ವಾರದ ಸಮೀಪವಿರುವ ಬಾವಿ ಕಟ್ಟೆಯಲ್ಲಿ ಗಲ್ಲಿಗೇರಿಸಲ್ಪಟ್ಟು ಕೊಡಗಿನ ಬಲಮುರಿಯ ಗುಡ್ಡೆ ಮನೆ ಅಪ್ಪಯ್ಯ ಗೌಡರ 165 ನೇ ಪುಣ್ಯ ತಿಥಿಯನ್ನು ಅಕ್ಟೋಬರ್ 31 ರಂದು ನಗರದ ಕೋಟೆ ಆವರಣದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಹುತಾತ್ಮ ಸುಭೇಧಾರ್ ಗುಡ್ಡೆಮನೆ ಅಪ್ಪಯ್ಯಗೌಡ ಸಂಸ್ಮರಣಾ ಸಮಿತಿವತಿಯಿಂದ ಏರ್ಪಡಿಸಲಾಗಿದ್ದ ಅಪ್ಪಯ್ಯಗೌಡ ಅವರ ಸಂಸ್ಮರಣಾ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಬಿ. ಎಸ್.ಪಾಲಾಕ್ಷ, ಪೊಲೀಸ್ ಉನ್ನತಾಧಿಕಾರಿ ಉಮೇಶ್ ಕುಮಾರ್, ಪುರಸಭಾಧ್ಯಕ್ಷೆ ಕೂಡಕಂಡಿ ಕಾವೇರಮ್ಮ ಸೋಮಣ್ಣ ಅವರುಗಳು ಪಾಲ್ಗೊಂಡಿದ್ದರು.

ಅಂದು ಬೆಳಿಗ್ಗೆ 11-30 ಕ್ಕೆ ಕೋಟೆ ಆವರಣದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಮಿತಿ ಸಂಚಾಲಕ ಗುಡ್ಡೆ ಮನೆ ರಮೇಶ್ ಬೆಳ್ಯಪ್ಪನವರು ಅಪ್ಪಯ್ಯ ಗೌಡ ಮತ್ತು ಅವರೊಂದಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ 12 ಮಂದಿಯ ಸಾಧನೆಯನ್ನು ವಿವರಿಸಿದರಲ್ಲದೆ ಸರ್ಕಾರದ ಮುಂದೆ ತಮ್ಮ ಬೇಡಿಕೆಗಳನ್ನು ಮುಂದಿಟ್ಟರು.

1.ಈಗಾಗಲೇ ನಾಮಕರಣಗೊಂಡ ರಸ್ತೆಯ ಫಲಕವನ್ನು ಅಮೃತ ಶಿಲೆಯಲ್ಲಿ ಬರೆಯಿಸುವುದು (2)ದಿನಾಂಕ 31-10-1837ರ ದಿನವನ್ನು "ಕೊಡಗಿನ ಸ್ವಾತಂತ್ರ್ಯ ಹುತಾತ್ಮರ" ದಿನಾಚರಣೆಯಾಗಿ ಸರಕಾರದ ವತಿಯಿಂದ ಆಚರಿಸುವುದು (3) ಹುತಾತ್ಮರಾದ ಸುಭೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡ ಮತ್ತು ಇತರ 12 ಮಂದಿಗೆ ಸ್ಮಾರಕ ನಿರ್ಮಾಣ ಹಾಗೂ ಮಡಿಕೇರಿ ಕೋಟೆ ಮುಂಭಾಗದಲ್ಲಿ ಬಾವಿ ಪಕ್ಕ "ವೀರ ವನ" ನಿರ್ಮಾಣ ಮಾಡುವುದು (4) ಕೊಡಗಿನ ಸತ್ಪ್ರಜೆಗಳು ತೋರುವ ಧೈರ್ಯ ಸಾಹಸಕ್ಕೆ ಪ್ರತಿವರ್ಷ "ಶೌರ್ಯ ಪ್ರಶಸ್ತಿ" ಪುರಸ್ಕಾರ ನೀಡುವುದು. (5) ಇತರೆ 12 ಮಂದಿ ಶಿಕ್ಷೆಗೊಳಗಾದವರಲ್ಲಿ ಸದ್ರಿಯವರುಗಳ ಜನ್ಮ ಸ್ಥಳಗಳಲ್ಲಿ ಸ್ಮಾರಕ ನಿರ್ಮಾಣ ಮಾಡುವುದು. (6) ಈ ಹೋರಾಟದಲ್ಲಿ ಭಾಗವಹಿಸಿ ಮಂಗಳೂರಿನ ಬಿಕ್ರನ ಕಟ್ಟೆಯಲ್ಲಿ ಗಲ್ಲು ಶಿಕ್ಷೆಗೊಳಗಾದ ಶ್ರೀ ಪುಟ್ಟಬಸಪ್ಪ, ಹೆಮ್ಮಾನ ಗ್ರಾಮದಲ್ಲಿ ಸ್ಮಾರಕ ನಿರ್ಮಾಣ ಮಾಡುವಂತೆ ಆಗ್ರಹಿಸಿದರು.

ತದ ನಂತರ ಬೇಡಿಕೆ ಪತ್ರವನ್ನು ಹಿರಿಯ ಮುತ್ಸದ್ದಿ ಸ್ವಾತಂತ್ರ್ಯಯೋಧ ಎಂ. ಯು. ಅಚ್ಚಣ್ಣನವರು ಹಾಗೂ ಬೈತಡ್ಕ ದೇವಯ್ಯನವರು ಜಿಲ್ಲಾಧಿಕಾರಿ ಬಿ. ಎಸ್.ಪಾಲಾಕ್ಷ, ಅವರಿಗೆ ಅರ್ಪಿಸಿದರು. ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಅವರು ಸರಕಾರದೊಡನೆ ವ್ಯವಹರಿಸಿ ಬೇಡಿಕೆಯನ್ನು ಈಡೇರಿಸಲು ಪ್ರಯತ್ನಿಸುವುದಾಗಿ ಭರವಸೆಯಿತ್ತರು. ಈ ಸಂದರ್ಭಗಳಲ್ಲಿ ಸ್ವಾತಂತ್ರ್ಯ ಯೋಧ ಎಂ. ಯು ಅಚ್ಚಣ್ಣನವರು ಹುತಾತ್ಮರ ಬಗ್ಗೆ ಮಾತನಾಡಿದರಲ್ಲದೆ ಹಲವಾರು ಮಂದಿ ಮಾತನಾಡಿದರು.

ಈ ಸಂದರ್ಭದಲ್ಲಿ ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷರಾದ ಹೊಸೂರು ರಮೇಶ್, ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್, ಮಹಿಳಾ ಒಕ್ಕೂಟ ಅಧ್ಯಕ್ಷಿಣಿ ಚಿಯಂಡಿ ರಾಧ ಯಾದವ, ಮಾಜಿ ಶಾಸಕ ದಂಬೆಕೋಡಿ ಮಾದಪ್ಪ, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಊರುಬೈಲು ಜಯಪ್ರಕಾಶ್, ಹಾಲಿ ಬಿಜೆಪಿ ಜಿಲ್ಲಾಧ್ಯಕ್ಷ ಕೊಂಬಾರನ ಬೋಪಯ್ಯ, ಜಿಲ್ಲಾ ಪಂಚಾಯತಿ ಸದಸ್ಯೆ ಕೋರನ ಗಂಗಮ್ಮ ಪೂಣಚ್ಚನವರು ಹಾಗೂ ಸಂಘದ ಪದಾಧಿಕಾರಿಗಳಲ್ಲದೆ 300 ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

ಹುತಾತ್ಮ ಅಪ್ಪಯ್ಯಗೌಡರ ಸ್ಮಾರಕ ಮತ್ತು ವೀರವನದ ಬಗ್ಗೆ ಕೊಡಗು ಸಂಗಾತಿ ಪತ್ರಿಕೆಯ ಅಕ್ಟೋಬರ್ ಸಂಚಿಕೆಯಲ್ಲಿ ಸಂಪಾದಕೀಯದಲ್ಲಿ ವಿನಂತಿಸಿದ್ದಲ್ಲದೆ ಈ ಪ್ರಯುಕ್ತ ಜಿಲ್ಲಾಧಿಕಾರಿಗಳೊಡನೆ ಪತ್ರ ವ್ಯವಹಾರ ನಡೆಸಿ ಗಮನ ಸೆಳೆದಿರುವುದನ್ನು ಸ್ಮರಿಸಬಹುದು. ಅಂತೆಯೇ ಹಲವು ಸಂಘ ಸಂಸ್ಥೆಗಳ ನಾಯಕರುಗಳನ್ನು ಸಂದರ್ಶಿಸಿ ಸಂಸ್ಮರಣ ಸಮಿತಿ ಅಧ್ಯಕ್ಷರನ್ನು ಖುದ್ದು ಭೇಟಿ ನೀಡಿ ಚರ್ಚಿಸಿದ್ದಲ್ಲದೆ ದಿನಾಂಕ 1-11-2002 ರಂದು ಖುದ್ದು ಬಲಮುರಿ ಗ್ರಾಮದ ಗುಡ್ಡೆ ಮನೆಯ "ಐನ್‌ಮನೆ"ಗೆ ಭೇಟಿ ನೀಡಿರುವರು. ಅಲ್ಲಿ "ಅಪ್ಪಯ್ಯಗೌಡ"ರಿಗೆ ಕಾರಣಕ್ಕೆ ಇಟ್ಟು ನಂತರ ಹಿರಿಯರಾದ ಗುಡ್ಡೆ ಮನೆ ಬೆಳ್ಯಪ್ಪನವರ ಸಮ್ಮುಖದಲ್ಲಿ ಪ್ರಾರ್ಥಿಸಿದಲ್ಲದೆ ಮುಂಬರುವ 31-10-2003ರ ಒಳಗಡೆ ಹುತಾತ್ಮರ ಹೆಸರಿನಲ್ಲಿ ಬರೆಯತಕ್ಕ ಲೇಖನಕ್ಕೆ ಯಾವುದೇ ಅಡೆ ತಡೆಯಿಲ್ಲದೆ ನಿರ್ವಿಘ್ನವಾಗಿ ನಡೆಸಿ ಕೊಡು ವಂತೆ ಕಾರಣರನ್ನು ಪ್ರಾರ್ಥಿಸಲಾಯಿತು.

ಕೊಡಗು ಸಂಗಾತಿ ಪತ್ರಿಕೆಯ ಗೌರವ ಸಂಪಾದಕ ಪಟ್ಟಡ ಪ್ರಭಾಕರನವರ ನೇತೃತ್ವದ ಈ ತಂಡದಲ್ಲಿ ಮಂಡ್ಯ ಜಿಲ್ಲೆಯ ಲೇಖಕ, ಸಾಹಿತಿ, ಬರಹಗಾರ, ಕವಿ ಶ್ರೀ ಶಿವಳ್ಳಿ ಕೆಂಪೇಗೌಡರು,

ಗುಡ್ಡೆಮನೆ ರಮೇಶ ಬೆಳ್ಯಪ್ಪ ಹಾಗೂ ನಿವೃತ್ತವಾಯು ಸೈನಿಕ ಮತ್ತುಹಾಲಿ ಜೀವ ವಿಮಾ ನಿಗಮದಲ್ಲಿ ಉದ್ಯೋಗಿಯಾಗಿರುವ ಬರಹಗಾರ ಬೈತಡ್ಕ ಅಯ್ಯಪ್ಪ ಬೆಳ್ಯಪ್ಪನವರು ಹಾಜರಿದ್ದು, ಅಪ್ಪಯ್ಯ ಗೌಡರು ಬಾಳಿ ಬದುಕಿದ ಮಂಣಿನ ಬದುಕನ್ನು ಕಂಣಾರೆ ಪರಿಶೀಲಿಸುವುದರ ಮೂಲಕ ಪುಸ್ತಕವನ್ನು ಹೊರ ತರುವುದಕ್ಕೆ ಮುಂದಾಗಿರುವುದು ಅಲ್ಲದೆ ಇಲ್ಲಿಂದಲೆ ಗೌಡರ ಪ್ರಗತಿಗೆ ಬೆಳಕು ಚೆಲ್ಲುವಂತ ಹಲವಾರು ಅಂಶಗಳು ಖಂಡಿತವಾಗಿ ಹೊರ ಹೊಮ್ಮುವುದನ್ನು ನಾವೆಲ್ಲರೂ ನಿರೀಕ್ಷಿಸೋಣಾ

- ಪಟ್ಟಡ ಪ್ರಭಾಕರ, ಕೊಡಗು ಸಂಗಾತಿ ಗೌರವ ಸಂಪಾದಕ,ಮೈಸೂರು,

## ಐಕೊಳ ಗ್ರಾಮದ ಶ್ರೀ ಅಯ್ಯಪ್ಪ ಯುವಕ/ಯುವತಿ ಮಂಡಳಿಯ ನೂತನ ಅಧ್ಯಕ್ಷರಾಗಿ ಪಾರೇರ ವಸಂತ / ಉಳುವಾರನ ಶೀಲಾ ಪೊನ್ನಪ್ಪ, ಆಯ್ಕೆ



ದಿನಾಂಕ 4-10-02 ರಂದು ಯುವಕ ಮಂಡಳಿ ಅಧ್ಯಕ್ಷರಾಗಿ ಪಾರೇರ ವಸಂತರವರನ್ನು ಸರ್ವಾನುಮತದಿಂದ ಆರಿಸಲಾಯಿತು. ಉಪಾಧ್ಯಕ್ಷರಾಗಿ ತಡಿಯಪ್ಪನ ಚಂದ್ರಶೇಖರ, ಪ್ರಧಾನ ಕಾರ್ಯದರ್ಶಿಯಾಗಿ ಪುಣೆಕಂಡ್ರ ರಮೇಶ್,ಸಹ ಕಾರ್ಯದರ್ಶಿಯಾಗಿ ಕೊಂಪುಳೀರ ಧನುಂಜಯರವರನ್ನು ಆರಿಸ ಲಾಯಿತು. ದೇವಿಪ್ರಸಾದ್,ಪಣೆಕಂಡ್ರ ಪಳಂಗಪ್ಪ ಮತ್ತು ಕೊಂಪುಳೀರ ಧನು ಪೊನ್ನಪ್ಪರವರನ್ನು ಆರಿಸಲಾಯಿತು. ಸಲಹೆಗಾರರಾಗಿ ಕೊಂಪುಳೀರ ಗಣೇಶ್ ಬೋಪಯ್ಯ ಕೊಂಪುಳೀರ ಉಶ್ವಪತಿ, ಕೊಂಪುಳೀರ ಸುಬ್ಬಯ್ಯ ಉಳುವಾರನ ಪೊನ್ನಪ್ಪ ಮತ್ತು ಕಲ್ಲುಮುಟ್ಲ ಚನ್ನಬಸಪ್ಪರವರನ್ನು ಸರ್ವಾನುಮತದಿಂದ ಆರಿಸಲಾಯಿತು.

ಯುವತಿ ಮಂಡಳಿ ಅಧ್ಯಕ್ಷೆಯಾಗಿ ಉಳುವಾರನ ಶೀಲಾ ಪೊನ್ನಪ್ಪ, ಉಪಾಧ್ಯಕ್ಷೆರಾಗಿ ಕೊಂಪುಳೀರ ನಿರ್ಮಲ ಉಲ್ಲಾಸ, ಕಾರ್ಯದರ್ಶಿಯಾಗಿ ಕೊಂಪುಳೀರ ಗೀತಾ ಅರುಣ ಖಜಾಂಚಿಯಾಗಿ ಕೊಂಪುಳೀರ ಸುನಿ ದಿನೇಶ್, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ತಡಿಯಪ್ಪನ ರೇಷ್ಮ ಚಂದ್ರಶೇಖರ, ಕ್ರೀಡಾ ಕಾರ್ಯದರ್ಶಿಯಾಗಿ ಪಾರೇರ ದೇವಕ್ಕಿ ಯತೀಶ್‌ರವರನ್ನು ಆರಿಸಲಾಯಿತು. ನಿರ್ದೇಶಕರುಗಳಾಗಿ ಪಾರೇರ ಸುಮಿ ಸುಬಾಷ್, ಅಪ್ಪೆಯಂಡ್ರ ಸುಶೀಲಾ ಸೋಮಣ್ಣ ಮತ್ತು ಕೊಂಪುಳೀರ ಲೇಖಾ ಸುಬ್ಬಯ್ಯರವರನ್ನು ಸರ್ವಾನು ಮತದಿಂದ ಆರಿಸಲಾಯಿತು.

ಅಲ್ಲದೆ ನೂತನವಾಗಿ ಆಯ್ಕೆಗೊಂಡ ಯುವಕ/ಯುವತಿ ಮಂಡಳಿಯ ಸದಸ್ಯರು ಐಕೊಳದ ಶ್ರೀ ಅಯ್ಯಪ್ಪ ದೇವಸ್ಥಾನ ಮತ್ತು ಮಾಚಿಕಡು ರಸ್ತೆಯ ರಸ್ತೆ ಬದಿಯ ಕಾಡನ್ನು ಶ್ರಮದಾನದ ಮೂಲಕ ಕಡಿದು ಶುಚಿಗೊಳಿಸಿ ಈ ಮೂಲಕ ತಮ್ಮಸಾಮಾಜಿಕ ಮನೋಭಾವವನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮದ ನೈತೃತ್ವವನ್ನು ನೂತನ ಅಧ್ಯಕ್ಷರಾದ ಪಾರೇರ ವಸಂತ ವಹಿಸಿದ್ದರು.

- ಸಂಗಾತಿ

## ಕಾವೇರಿ ಸಿರಿ

ಕೊಡಗಿನೊಡಲ ಬೆಡಗ ನೋಡಿ
ಕಡಲ ತಡಿಯೆ ನಾಚಿದೆ........?
ಮೂಡಣದಿ ಪಡುವಣದಿ
ಕೀರ್ತಿ ಕಡಲು ಹರಡಿದೆ........!
ಕೊಡಗ ಸೊಬಗ ಸವಿದ ಜನರ
ದಣಿದ ಮನವು ತಣಿದಿದೆ.
ಕನ್ನಡದ ಕದವ ತೆರೆದು
ನುಡಿಯೆ ಮಿಡಿದು ಕುಣಿದಿದೆ....?
ರಾಜರಾಡಳಿತದ ಮೋಡಿ
ನಾಡ ವೈಭವವನು ನೋಡಿ
ತಾಯಿ ಕಾವೇರಿಯನು ಹೊಗಳಿ ಹಾಡಿ
ಜನತೆ ಧನ್ಯವಾಗಿದೆ......!
ಸುತ್ತ ಮುತ್ತ ಬಯಲು ತೋಟ
ನೋಡಲದೆಂಥ ಮಾಟ.......!
ಕುಕಿಲ ಹಾಡ ಗಾನ ಕೇಳಿ
ಮನವು ಮೌನ ಧ್ಯಾನ ತಾಳಿ
ಬಿಡದ ಮಡಿಲು ಬಿಟ್ಟುಗೂಡಿ
ಸುಖದೊಳಿಂದು ನಲಿದಿದೆ....!
ಬನ್ನಿರಣ್ಣ, ಒಂದು ಗೂಡಿ
ನಾಡ ಮುಡಿಗೆ ಗುಡಿಯ ಕಟ್ಟಿ,
ಮಾತೆಯನ್ನ ಮನನ ಮಾಡಿ
ಕೊಡಗಿನೇಳಿಗೆಗೆ ಇಂದು
ಒಡಲ ಸವೆಸುವ.
ಮಾತೆ ಮನದಣಿಗೆ ಇಂದು
ಮಣಿದು ನಮಿಸುವ.......!!

ಕವನ : ಊರುಬೈಲು,ಲೋಕೇಶ,.

## ನುಡಿ ಮುತ್ತುಗಳು

1 ಆಹಾರ ದೇಹಕ್ಕೆ ಎಷ್ಟು ಅವಶ್ಯವೋ ಹಾಗೆಯೇ ದೇವರ ಧ್ಯಾನ ನಮ್ಮ ಆತ್ಮದ ವಿಕಾಸಕ್ಕೆ ಅತ್ಯವಶ್ಯಕ. -ಮಹಾತ್ಮಗಾಂಧೀಜಿ

2 ಮೀನನ್ನು ಕೊಟ್ಟರೆ ತಾತ್ಕಾಲಿಕವಾಗಿ ಒಂದು ದಿನದ ಹಸಿವನ್ನು ನೀಗಿಸಬಹುದು. ಆದರೆ ಮೀನನ್ನು ಹಿಡಿಯುವುದನ್ನೇ ಕಲಿಸಿಕೊಟ್ಟರೆ ಶಾಶ್ವತವಾಗಿ ಅನುದಿನದ ಹಸಿವನ್ನು ನೀಗಿಸಬಹುದು. -ಸ್ವಾಮಿ ವಿವೇಕಾನಂದ

3 ಪ್ರಾರ್ಥನಾ ಮಂದಿರಗಳಿಗೆ ಮತ್ತು ನ್ಯಾಯಾಧಿಪತಿಗಳ ಹಾಗೂ ದೇಶಾಧಿಕಾರಿಗಳ ಮುಂದೆ ನಿಮ್ಮನ್ನು ಎಳೆದೊಯ್ಯುವಾಗ ಹೇಗೆ ವಾದಿಸುವದು, ಏನು ಹೇಳುವದು ಎಂದು ಚಿಂತಾಕ್ರಾಂತರಾಗಬೇಡಿ, ಏಕೆಂದರೆ ನೀವು ಹೇಳತಕ್ಕದನ್ನುಪವಿತ್ರಾತ್ಮ. ಅದೇ ಗಳಿಗೆಯಲ್ಲಿ ನಿಮಗೆ ಕಲಿಸಿಕೊಡುವನು -ಬೈಬಲ್

4 ಕಳೆದು ಹೋದ ಸಮಯವನ್ನು ನೆನಪಿಸಿಕೊಳ್ಳುವುದೇ ದುಃಖಗಳಲ್ಲಿ ದುಃಖ - ಶೇಕ್ಸ್‌ಪಿಯರ್

5 ಆರೋಗ್ಯವೇ ಪರಮಲಾಭ, ತೃಪ್ತಿಯೇ ಪರಮಧರ್ಮ, ವಿಶ್ವಾಸವೇ ಪರಮ ಬಂಧು, ಶಾಂತಿಯೇ ಪರಮ ಸುಖ -ಭಗವಾನ್ ಬುದ್ಧ.

6 ಸಮಯವೂ ಅಲೆಗಳೂ ಯಾರನ್ನೂ ಕಾಯುವುದಿಲ್ಲ, ಬದುಕಿನಲ್ಲಿ ಸಮಯಕ್ಕಿರುವ ಮಹತ್ವ ಇನ್ನಾವುದೇ ವಸ್ತು ಹಣ ಇವುಗಳಿಗೆ ಇರುವುದಿಲ್ಲ. -ಸ್ವಾಮಿ ವಿವೇಕಾನಂದ,

7 ಐಶ್ವರ್ಯ ಇದ್ದವರು ಯಾವತ್ತು ಸುಖಿಗಳಲ್ಲ, ಮನೋ ನೆಮ್ಮದಿ ಇದ್ದವರೇ ನಿಜವಾದ ಸುಖಿಗಳು -ಗೌತಮ ಬುದ್ಧ

8 ನಿನ್ನ ಆತ್ಮವೊಂದೇ ನಿನಗೆ ಸ್ವಂತದ್ದು, ಮತ್ತ್ಯಾವದೂ ಅಲ್ಲ, ಮತ್ತೇಕೆ ನಾನು ನನ್ನದು ಎನ್ನುವ ಬಯಕೆ?
-ಸದ್ಗುರು ಸಾಯಿ ಶಂಕರ

(ಸಂಗ್ರಹ) - ಸಬ್ಬಂಡ್ರ ಶರತ್ ಕುಮಾರ್, ಮಕ್ಕಂದೂರು.

ಮೊದಲು ಸಮಾಜವನ್ನು ಪ್ರೀತಿಸು, ನಂತರ ಇತರರನ್ನು ಸಮಾನವಾಗಿ ಕಾಣು

# ನಾನು ಕಂಡಂತೆ ಕೊಡಗು ಸಂಗಾತಿ : ಶಿವಳ್ಳಿ ಕೆಂಪೇಗೌಡ

ಆ ದಿನದ ವರ್ಣರಂಜಿತ ಸಮಾರಂಭ ನನ್ನ ನೆನಪಿನಲ್ಲಿ ಇನ್ನೂ ಹಚ್ಚ ಹಸಿರಾಗಿದೆ. 9-4-1997 ರಂದು ಮೈಸೂರಿನ ಜಯ ಲಕ್ಷ್ಮೀ ಪುರಂನಲ್ಲಿರುವ ಕೊಡಗುಗೌಡ ವಿದ್ಯಾರ್ಥಿ ನಿಲಯದಲ್ಲಿ "ಕೊಡಗು ಸಂಗಾತಿ" ಪಾಕ್ಷಿಕ ಪತ್ರಿಕೆಯ ಬಿಡುಗಡೆ ಸಮಾರಂಭ.

ಮಾಜಿ ಶಾಸಕ ದಿ||ಪಾಂಡನ ಸುಬ್ಬಯ್ಯ, ಮಡಿಕೇರಿ ಪುರಸಭೆ ಮಾಜಿ ಅಧ್ಯಕ್ಷ ಹಾಗೂ ವಕೀಲರಾದ ಮುಕ್ಕಾಟಿ ವಾಸುದೇವ, ಪೈಕೇರ ಅನಂತರಾಮ್ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದು, ಪತ್ರಿಕೆಯನ್ನು ಬಿಡುಗಡೆ ಮಾಡಿ ಶುಭ ಹಾರೈಸಿದರು. ಪತ್ರಿಕೆಯ ಗೌರವ ವ್ಯವಸ್ಥಾಪಕರೂ ಲೇಖಕರೂ ಆದ ಪಟ್ಟಡ ಎಂ. ಪ್ರಭಾಕರರವರು ಕಿರಿಯನಾದ ನನ್ನನ್ನೂ ಸಹ ಆತ್ಮೀಯತೆಯಿಂದ ವೇದಿಕೆಗೆ ಆಹ್ವಾನಿಸಿ ನನ್ನಿಂದ ನಾಲ್ಕು ಮಾತುಗಳನ್ನಾಡಿಸಿದ್ದನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

1994 ರಲ್ಲಿ ಮಂಡ್ಯದ ಮುದ್ರಣಾಲಯ ಒಂದರಲ್ಲಿ ಪಟ್ಟಡ ಎಂ. ಪ್ರಭಾಕರ್ ಅವರ "ನನ್ನ ಕನಸಿನ ಮಡಿಕೇರಿ" ಎಂಬ ಕೃತಿ ಅಚ್ಚಾಗುತ್ತಿದ್ದ ಕಾಲದಿಂದಲೂ ಅವರು ನನಗೆ ಸುಪರಿಚಿತರು. ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸಿ ಪ್ರಸ್ತುತ ಮಹದೇವಪುರದ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಉದ್ಯೋಗಿಯಾಗಿರುವ ಪ್ರಭಾಕರ್‌ರವರು ಮಡಿಕೇರಿಯ ಸರ್ವಾಂಗೀಣ ಅಭಿವೃದ್ಧಿ ಯೋಜನೆ ಕುರಿತು ಬರೆದಿರುವ "ನನ್ನ ಕನಸಿನ ಮಡಿಕೇರಿ" ನನ್ನನ್ನು ಬಹುವಾಗಿ ಆಕರ್ಷಿಸಿತು. ಕನಸುಗಳೇ ಕಮರಿಹೋಗಿ, ತಾನುಂಟೋ ಮೂರು ಲೋಕವುಂಟೋ ಎಂದು ಸ್ವಹಿತ ಚಿಂತನೆ, ಸ್ವಾರ್ಥಲಾಲಸೆಯಲ್ಲಿ ಮುಳುಗಿ ಹೋಗಿರುವವರ ನಡುವೆ ಪ್ರಭಾಕರ್ ನನಗೆ ವಿಶಿಷ್ಟ ವ್ಯಕ್ತಿಯಾಗಿ ಸ್ನೇಹಜೀವಿಯಾಗಿ ಕಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಅವರ ಆಲೋಚನೆ, ಚಿಂತನಾಲಹರಿಯೇ ಹಾಗೆ. ತಾನು ಹುಟ್ಟಿ ಬೆಳೆದ ನೆಲದ ಋಣವನ್ನು ಕೈಲಾದ ಮಟ್ಟಿಗೆ ತೀರಿಸಬೇಕೆಂಬ ಹಂಬಲ ಅವರ ಧಮನಿ ಧಮನಿಗಳಲ್ಲಿ ಹರಿಯುತ್ತಿದೆ. ತನ್ನ ಜನಾಂಗ, ಸಮಾಜದ ಹಿತಚಿಂತನೆ ನಡೆಸುತ್ತಿರುವ ಅವರ ಹೃದಯ ವೈಶಾಲ್ಯತೆಯನ್ನು ಕಂಡು ನಾನು ನಿಬ್ಬೆರಗಾದೆ.

ಪ್ರಬಾಕರ್ ಅವರ "ನನ್ನ ಕನಸಿನ ಮಡಿಕೇರಿ" ಕೃತಿ ಮಡಿಕೇರಿಯಲ್ಲಿ ಬಿಡುಗಡೆಯಾದ ನಂತರ ನಾನು ಅವರನ್ನು ಕುರಿತು "ಕಿತ್ತಳೆ ನಾಡಿನ ಕನಸುಗಾರ" ಎಂಬ ಶೀರ್ಷಿಕೆ ನೀಡಿ ಅವರ ಬಗ್ಗೆ ವ್ಯಕ್ತಿಪರಿಚಯ ಬರೆದು ಮಂಡ್ಯ ನಗರದ ನಾಲ್ಕಾರು ಪತ್ರಿಕೆಗಳಿಗೆ ನೀಡಿದೆ. ಆ ಎಲ್ಲಾ ಪತ್ರಿಕೆಗಳ ಸಂಪಾದಕರೂ ಸಹ ಆ ಲೇಖನವನ್ನು ಪ್ರಕಟಿಸಿದರು. ಇಷ್ಟಾದರೂ ಸಹ ನನಗೆ ತೃಪ್ತಿಯಾಗಲಿಲ್ಲ. ನಾನು ಹತ್ತಾರು ಮಂದಿ ಗೆಳೆಯರು ಸೇರಿ ಕಟ್ಟಿ ಕೊಂಡಿದ್ದ ಗ್ರಾಮ ಬೆಳಕು ಸಾಂಸ್ಕೃತಿಕ ವೇದಿಕೆ ವತಿಯಿಂದ ಪ್ರಭಾಕರ್ ಅವರಿಗೆ ಅಭಿನಂದನಾ ಸಮಾರಂಭವನ್ನು ಮಂಡ್ಯ ಜಿಲ್ಲಾ



ಪಟ್ಟಡ ಎಂ. ಪ್ರಭಾಕರ

ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಏರ್ಪಡಿಸಿದ್ದೆವು. ಅವರನ್ನು ಸನ್ಮಾನಿಸಿ ಸಂತೋಷ ಪಟ್ಟೆವು. ಓರ್ವ ಸಾಧಕನನ್ನು ಗೌರವಿಸಿದ ತೃಪ್ತಿ ನಮಗಿದೆ.



ಶಿವಳ್ಳಿ ಕೆಂಪೇಗೌಡ

ಪ್ರಭಾಕರ್ ಅವರ ಕನಸುಗಳ ಸಾಕಾರಕ್ಕೆ ಪತ್ರಿಕೆಯೊಂದರ ಅಗತ್ಯವಿದೆ ಎಂದು ನನಗೆನ್ನಿಸಿತು. ನನ್ನ ಮನದಿಂಗಿತವನ್ನು ನಾಲ್ಕಾರು ಬಾರಿ ಅವರಲ್ಲಿ ವ್ಯಕ್ತ ಪಡಿಸಿದೆ. ಕೊನೆಗೊಂದು ದಿನ ಅವರು ಪತ್ರಿಕೆಯೊಂದನ್ನು ಪ್ರಕಟಿಸಬೇಕೆಂಬ ನಿರ್ಧಾರಕ್ಕೆ ಬಂದರು. ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ ಅವರಿಂದ "ಕೊಡಗು ಸಂಗಾತಿ" ಎಂಬ ಟೈಟಲ್‌ನಿಂದ ಪತ್ರಿಕೆ ಪ್ರಾರಂಬಿಸಬಹುದೆಂದು ಪರವಾನಗಿ ದೊರೆತಾಗ ನನಗಾದ ಆನಂದ ಅಷ್ಟಿಷ್ಟಲ್ಲ.

"ಕೊಡಗು ಸಂಗಾತಿ" ಪ್ರಥಮ ಸಂಚಿಕೆಯ ಪ್ರಕಟಣೆ ಹಾಗೂ ಪೂರ್ವ ಸಿದ್ಧತೆಗಾಗಿ ಪ್ರಭಾಕರ್ ಅರ್ಧ ಕೊಡಗು ಜಿಲ್ಲೆಯನ್ನು ಸ್ಕೂಟರ್‌ನಲ್ಲೇ ಸುತ್ತಿದರು. ಜೊತೆಗೆ ನನ್ನನ್ನೂ ಕರೆದೊಯ್ದಿದ್ದರು. ನಾವು ಭೇಟಿ ಮಾಡಿದ ಗಣ್ಯ ವ್ಯಕ್ತಿಗಳು ಸಂಗಾತಿಗೆ ಪ್ರೋತ್ಸಾಹ ನೀಡುವುದಾಗಿ ಆಶ್ವಾಸನೆ ನೀಡಿದರು. ಮೊದಲ ಸಂಚಿಕೆ ಹೊರಬಂತು. ಅದರಲ್ಲಿ ನನ್ನ ಒಂದೆರಡು ಲೇಖನಗಳು ಪ್ರಕಟವಾದವು. ಶ್ರೀಮತಿ ಪಟ್ಟಡ ಶೀಲಾಮಣಿ ಅವರ ಸಂಪಾದಕತ್ವದಲ್ಲಿ "ಸಂಗಾತಿ" ಆರನೇ ವರ್ಷದಲ್ಲಿ ಮುನ್ನಡೆಯುತ್ತಿರುವುದನ್ನು ಕಂಡು ನಾನು ದೂರದಿಂದಲೆ ಹರ್ಷಪಟ್ಟಿದ್ದೇನೆ. ಶೀಲಾಮಣಿ ಅವರ ಈ ಪ್ರಯತ್ನದಲ್ಲಿ ಬೆಂಬಲವಾಗಿ ನಿಂತಿರುವ ಪ್ರಭಾಕರ್ ಅವರ ಹೋರಾಟ, ಸಾಧನೆ ನನ್ನನ್ನು ಮೂಕ ವಿಸ್ಮಿತನನ್ನಾಗಿ ಮಾಡಿದೆ.

ಸಂಗಾತಿಯ ಪ್ರಥಮ ಸಂಚಿಕೆಯಿಂದ ಮೊದಲ್ಗೊಂಡು ಇತ್ತೀಚಿನ ಸಂಚಿಕೆವರೆಗೆ ಮತ್ತೊಮ್ಮೆ ಕಣ್ಣಾಡಿಸಿದಾಗ ಹೊಸದೊಂದು ಲೋಕವೇ ತೆರೆದುಕೊಂಡಿತು. ಪತ್ರಿಕೆಯ ಅಗಾಧ ಸಾಧನೆಯ ಬಗ್ಗೆ ಹೆಮ್ಮೆ ಎನಿಸಿತು. ಸಂಗಾತಿ ಕೊಡಗು ಗೌಡ ಜನಾಂಗದ ಗೆಜೆಟಿಯರ್ ಆಗಿ ಹೊರ ಹೊಮ್ಮಿರುವುದನ್ನು ಕಂಡು ಅಚ್ಚರಿಯಾಯಿತು. ಮುಂದೊಂದು ದಿನ ಯಾರಾದರೂ ಆಸಕ್ತ ವಿದ್ವಾಂಸರು ಗೌಡ ಜನಾಂಗವನ್ನು ಕುರಿತು ಅಧ್ಯಯನ ಮಾಡಲು ಹೊರಟರೆ ಸಂಗಾತಿಯ ಹಳೆಯ ಸಂಚಿಕೆಗಳ ಮೇಲೆ ಕಣ್ಣಾಡಿಸಲೇ ಬೇಕಾಗುತ್ತದೆ. ಈ ಪತ್ರಿಕೆ ಗೌಡ ಜನಾಂಗದ ಆಕರ ಗ್ರಂಥವಾಗುವಂತೆ ಹೊರ ಹೊಮ್ಮಿರುವುದು ಶ್ಲಾಘನೀಯ. ವಿಷಯ ವೈವಿಧ್ಯತೆ ಪತ್ರಿಕೆಯ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದೆ.

ಕ್ರಿ. ಶ. 1950 ರ ಹಿಂದೆ ಅರೆಗನ್ನಡ ಭಾಷೆ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಗೌಡ ಜನಾಂಗದ ಮನೆ ಮಾತಾಗಿ ಬಳಕೆಯಲ್ಲಿತ್ತು. ಶೈಕ್ಷಣಿಕ ರಂಗದಲ್ಲಿ ಪ್ರಗತಿಯಾದಂತೆಲ್ಲಾ ಇಲ್ಲಿನ ಮಕ್ಕಳು ಕನ್ನಡ, ಇಂಗ್ಲೀಷ್, ಹಿಂದಿ ಭಾಷೆಗಳಲ್ಲಿ ವ್ಯಾಸಂಗ ಮಾಡುವ ಪರಿಸ್ಥಿತಿ

ನಿರ್ಮಾಣವಾಯಿತು. ಅರೆಗನ್ನಡ ಭಾಷೆ ತಾತ್ಸಾರಕ್ಕೊಳಗಾಗಿ ಹಿಂದೆ ಸರಿಯಿತು. ಈ ನಿಟ್ಟಿನಲ್ಲಿ ಅರೆಗನ್ನಡ ಭಾಷೆಯನ್ನು ಪುನಶ್ಚೇತನಗೊಳಿಸಿ, ಆ ಭಾಷೆಯ ಬಗ್ಗೆ ಜನಾಂಗದವರಲ್ಲಿ ಅಭಿಮಾನ ಮೂಡಿಸಲು ಪತ್ರಿಕೆ ತನ್ನ ಪ್ರತಿ ಸಂಚಿಕೆಯಲ್ಲೂ ನಾಲ್ಕರಿಂದ ಐದು ಪುಟಗಳನ್ನು ಮೀಸಲಾಗಿಟ್ಟಿರುವುದು ಸಂಪಾದಕೀಯ ಮಾತೃಭಾಷಾ ಪ್ರೇಮವನ್ನು ಎತ್ತಿ ತೋರುತ್ತದೆ.

ಇದಲ್ಲದೆ "ಸಂಗಾತಿ" ಸಾಹಿತ್ಯಿಕ, ಸಾಂಸ್ಕೃತಿಕ ಸಭೆ ಸಮಾರಂಭಗಳನ್ನು ನಡೆಸಿ ಅರೆಗನ್ನಡ ಭಾಷೆಯಲ್ಲಿ ಮಾತನಾಡುವಂತೆ ಪ್ರೇರೇಪಿಸಿರುವುದು ಕಡಿಮೆ ಸಾಧನೆ ಏನಲ್ಲ. ಈ ರೀತಿಯ ಪ್ರಯೋಗದಿಂದ ಗೌಡ ಜನಾಂಗದವರಲ್ಲಿ ಸ್ವಲ್ಪ ಮಟ್ಟಿಗಾದರೂ ನಮ್ಮತನ, ನಮ್ಮ ಭಾಷೆ, ನಮ್ಮ ಸಂಸ್ಕೃತಿ ಎಂಬ ಅರಿವು ಮೂಡಿದ್ದು, ಆ ಶ್ರೇಯಸ್ಸು ಸಂಗಾತಿಗೆ ಸಲ್ಲುತ್ತದೆ.

ಗೌಡ ಜನಾಂಗದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಅಭಿವ್ಯಕ್ತಿಗೆ ಸೂಕ್ತ ವೇದಿಕೆಯೇ ಇಲ್ಲದಿದ್ದ ಕಾಲದಲ್ಲಿ ಸಂಗಾತಿ ಜನ್ಮ ತಾಳಿದೆ. ಜನಾಂಗದ ಭಾವನೆಯನ್ನು ಅಭಿವ್ಯಕ್ತಿಸುವ ಮಹತ್ತರ ಹೊಣೆಗಾರಿಕೆಯನ್ನು ಪ್ರತಿಕೂಲ ಪರಿಸ್ಥಿತಿಯಲ್ಲೂ ಸಂಗಾತಿ ಸಮರ್ಥವಾಗಿ ನಿಭಾಯಿಸಿರುವುದು ದೃಗ್ಗೋಚರ ವಾಗುತ್ತದೆ.

ಕೊಡಗು ಜಿಲ್ಲೆಯಲ್ಲಿ ಪ್ರತ್ಯೇಕತೆಯ ಕೂಗು ಕೇಳಿ ಬರುತ್ತಿದ್ದಾಗ ಸಂಗಾತಿ ಪತ್ರಿಕಾ ಪ್ರಪಂಚದಲ್ಲಿ ಅಂಬೆಗಾಲಿಕ್ಕಿತು. ಗೌಡ ಜನಾಂಗವನ್ನು ತಿರಸ್ಕಾರ, ತಾತ್ಸಾರ ಮನೋಭಾವದಿಂದ ಕಾಣುತ್ತಿದ್ದ ಕಾಲದಲ್ಲಿ ಸಂಗಾತಿ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಪ್ರತ್ಯೇಕತೆಯ ವಿರುದ್ಧ ದನಿಯೆತ್ತಿ ಜನ ಜಾಗೃತಿ ಮೂಡಿಸಿದ್ದು ಪ್ರಜ್ಞಾವಂತರಿಗೆಲ್ಲಾ ಗೊತ್ತಿರುವ ಸಂಗತಿ. ಕೊಡಗು ಎಂದೆಂದಿಗೂ ಕನ್ನಡ ತಾಯಿಯ ಕಂಠೀಹಾರ ಎಂದು ಸಾರಿದ ಪತ್ರಿಕೆ ಸಂಗಾತಿ!

ಪತ್ರಿಕೆ ಕೇವಲ ಒಂದು ಜನಾಂಗಕ್ಕೆ ಮಾತ್ರ ಸೀಮಿತವಾಗದೆ "ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು" ಎಂಬ ಕವಿವಾಣಿಯನ್ನು ಆದರ್ಶವಾಗಿಟ್ಟುಕೊಂಡು ಸಮಾಜದ ಎಲ್ಲಾ ಜನಾಂಗದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವುದು ಸ್ವಾಗತಾರ್ಹ. ಸಂಗಾತಿಯಲ್ಲಿ ಸಮಾಜ ಸೇವೆ ಹಾಗೂ ಕ್ರೀಡೆಯಲ್ಲಿ ಸಾಧನೆ ಗೈದವರ, ಪ್ರಶಸ್ತಿ ವಿಜೇತರ ಕಿರು ಪರಿಚಯವನ್ನು ಅವರ ಭಾವ ಚಿತ್ರ ಸಮೇತ ನೀಡುತ್ತಿರುವುದು ಹರ್ಷ ಎನ್ನಿಸುತ್ತದೆ. ಇದಲ್ಲದೆ ಸಮಾಜದ ಏಳಿಗೆಗಾಗಿ ದುಡಿದು ವಿಧಿ ವಶರಾದ ಪ್ರಾತಃ ಸ್ಮರಣೀಯರ ಸಾಧನೆಯ ಹಿನ್ನೋಟವನ್ನು ಇಂದಿನ ಪೀಳಿಗೆಗೆ ರವಾನಿಸಿ ಪರಿಚಯಿಸುತ್ತಿರುವುದು ಕಡಿಮೆ ಸಾಧನೆಯೇನಲ್ಲ.

ಕೊಡಗಿನಲ್ಲಿ ಕೊಡವರಲ್ಲದೆ ಗೌಡ ಹಾಗೂ ಇತರೆ ಜನಾಂಗದವರೂ ಸಹ ಇದ್ದಾರೆ ಎಂಬುದನ್ನು ಹೊರ ಜಗತ್ತಿಗೆ ಪ್ರಚುರ ಪಡಿಸಬೇಕೆಂಬ ಪತ್ರಿಕೆಯ ಮೂಲೋದ್ದೇಶ ಈಡೇರಿದೆ. ಯಾರನ್ನೂ ದೂಷಿಸದೆ ಗೌಡ ಜನಾಂಗದವರಲ್ಲಿ ಜಾಗೃತಿ ಮೂಡಿಸುವ ಮಹತ್ಕಾರ್ಯ ಸಂಗಾತಿಯ ಮುಖಾಂತರ ನಡೆಯುತ್ತಿರುವುದು ಅಭಿನಂದನೀಯ.

ಸೂಕ್ತ ವೇದಿಕೆಯಿಲ್ಲದೆ ತೊಳಲಾಡುತ್ತಿದ್ದ ಹಲವಾರು ಮಂದಿ ಉದಯೋನ್ಮುಖ ಲೇಖಕರಿಗೆ ಅವರ ಬರಹಗಳನ್ನು ಸಂಗಾತಿ ಪ್ರಕಟಿಸಿ ಪ್ರೋತ್ಸಾಹಿಸಿದೆ. ಹಿರಿಯ ಬರಹಗಾರರ ವಿದ್ವತ್ಪೂರ್ಣ ಲೇಖನಗಳು ಸಂಗಾತಿಯಲ್ಲಿ ಪ್ರಕಟವಾಗುತ್ತಿದ್ದು, ಉದಯೋನ್ಮುಖ ಲೇಖಕರು ಅಂತಹ ಬರಹಗಳಿಂದ ಸ್ಫೂರ್ತಿ, ಪ್ರೇರಣೆ ಪಡೆದು ಕನ್ನಡ ಸಾರಸ್ವತ ಲೋಕದಲ್ಲಿ ಅಂಬೆಗಾಲಿಡಲು ಸಂಗಾತಿ ಸಹಕರಿಸಿದೆ.

ಕಳೆದ ಐದು ಮುಕ್ಕಾಲು ವರ್ಷಗಳಿಂದ ಸಂಗಾತಿ ಯಲ್ಲಿ 150 ಕ್ಕೂ ಹೆಚ್ಚು ಯುವ ಕವಿ, ಕವಿಯಿತ್ರಿಯರ ಬರಹಗಳು ಬೆಳಕು ಕಂಡಿವೆ ಎಂಬ ಸಂಗತಿಯನ್ನು ತಿಳಿದಾಗ ಪತ್ರಿಕೆ ಇರಿಸಿಕೊಂಡಿರುವ ಧ್ಯೇಯ, ಧೋರಣೆಗಳಿಗೆ ಪೂರಕ ಪ್ರತಿಕ್ರಿಯೆ ದೊರೆತಿದೆ ಎಂದೇ ನನ್ನ ಅಭಿಮತ. ಸಂಗಾತಿಗೆ ಬರೆಯುತ್ತಿರುವ ಈ ಎಲ್ಲಾ ಲೇಖಕರನ್ನೂ ಒಂದೆಡೆ ಕಲೆಹಾಕಿ ವೇದಿಕೆಯೊಂದನ್ನು ಸ್ಥಾಪಿಸಬೇಕೆಂಬ ಸಂಪಾದಕರ ಆಸೆ ಈಡೇರಲಿ ಎಂದು ಹಾರೈಸುವವರಲ್ಲಿ ನಾನೂ ಒಬ್ಬ.

ಗೌಡ ಜನಾಂಗದ ಆಚಾರ, ವಿಚಾರ ಸಂಪ್ರದಾಯಗಳ ಪ್ರಚಾರಕ್ಕೆ ಸಂಗಾತಿ ಹೆಚ್ಚು ಒತ್ತು ಕೊಟ್ಟಿದೆ. ಪತ್ರಿಕೋದ್ಯಮ ತಂತಿಯ ಮೇಲಿನ ಕಸರತ್ತು. ಹೊರ ನೋಟಕ್ಕೆ ಆಕರ್ಷಕವಾಗಿ ಕಾಣುವ ಪತ್ರಿಕಾ ಬೇಸಾಯದ ನೋವು, ಸಂಕಷ್ಟ ಅನುಭವಿಸಿದವರಿಗೆ ಮಾತ್ರ ಗೊತ್ತು ! ಪತ್ರಿಕೋದ್ಯಮ ನಷ್ಟದ ಬಾಬ್ತು. ಪತ್ರಿಕಾ ಪ್ರಕಟಣೆಯ ಖರ್ಚು ವೆಚ್ಚವನ್ನು ಸರಿದೂಗಿಸಲು ಹರ ಸಾಹಸ, ಭಗೀರಥ ಪ್ರಯತ್ನ ಮಾಡ ಬೇಕಾಗುತ್ತದೆ. ವಸ್ತು ಸ್ಥಿತಿ ಹೀಗಿದ್ದರೂ 'ಸಂಗಾತಿ' ಜನ ಜಾಗೃತಿಗೆ ಪತ್ರಿಕಾ ಮಾಧ್ಯಮವೇ ಸೂಕ್ತ ವೆಂದು ನಂಬಿ ಕಷ್ಟ- ನಷ್ಟಗಳಿಗೆ ಎದೆಗುಂದದೆ ತ್ಯಾಗ ಮನೋಭಾವದಿಂದ ಮುನ್ನಡೆಯುತ್ತಿರು ವುದು ಶ್ಲಾಘನೀಯ.

ಸಮಾಜದ ಎಲ್ಲಾ ವರ್ಗದವರೂ ಅದರಲ್ಲೂ ವಿಶೇಷವಾಗಿ ಅರೆ ಭಾಷಿಕ ಗೌಡ ಜನಾಂಗದವರು ಭವಿಷ್ಯತ್ತಿನ ದೃಷ್ಟಿಯಿಂದ ಈ ಪತ್ರಿಕೆಯನ್ನು ಉಳಿಸಿ ಬೆಳೆಸುವ ಸಂಕಲ್ಪ ಮಾಡಬೇಕಾಗಿದೆ.



ಪಟ್ಟಡ ಶೀಲಾಮಣಿ

ಪಟ್ಟಡ ಮುತ್ತಣ್ಣ ಪ್ರಭಾಕರ್ ಅವರು ಪತ್ರಿಕೆಯ ಬೆನ್ನೆಲುಬಾಗಿದ್ದಾರೆ. ಅವರ ಧರ್ಮಪತ್ನಿ ಶ್ರೀಮತಿ ಪಟ್ಟಡ ಶೀಲಾಮಣಿ ಕರ್ಣೇಯ್ಯನ ಚಿಣಪ್ಪನವರ ಮಗಳು 'ಸಂಗಾತಿ' ಯ ಸಂಪಾದಕಿಯಾಗಿ ಎಲೆಮರೆಯ ಕಾಯಿಯಂತೆ ಸೇವೆ ಸಲ್ಲಿಸುತ್ತಿದ್ದಾರೆ. ಈ ಆದರ್ಶ ದಂಪತಿಗಳಿಗೆ ಇಬ್ಬರು ಮಕ್ಕಳು. ಮಗ ದೀಪಕ್, ಬಿ. ಎ. ತರಗತಿಯಲ್ಲಿ ಪತ್ರಿಕೋದ್ಯಮವನ್ನೇ ಐಚ್ಛಿಕ ವಿಷಯವಾಗಿ ತೆಗೆದುಕೊಂಡು ವ್ಯಾಸಂಗ ಮಾಡುತ್ತಿದ್ದಾರೆ. ಮಗಳು ನಿಶಾ ಕೂಡ ಎರಡನೆ ವರ್ಷದ ಬಿ. ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು ಪತ್ರಿಕೋದ್ಯಮವನ್ನೇ ಐಚ್ಛಿಕ ವಿಷಯವಾಗಿ ಆರಿಸಿಕೊಂಡಿದ್ದಾರೆ. ಮಕ್ಕಳು ತಂದೆ ತಾಯಿಯರ ಹಾದಿಯಲ್ಲೇ ಹೆಜ್ಜೆ ಹಾಕುತ್ತಿದ್ದು, ಪಟ್ಟಡ ಎಂ. ಪ್ರಭಾಕರ್ ಅವರ ಇಡೀ ಕುಟುಂಬವೇ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡಿರುವುದು ಕಂಡು ಬರುತ್ತಿದೆ. ಭವಿಷ್ಯವನ್ನು ಬಲ್ಲವರಾರು?

ಕರ್ನಾಟಕದ ಕೇವಲ ಕೈ ಬೆರಳೆಣಿಕೆ ಯಷ್ಟಿರುವ ಮಹಿಳಾ ಸಂಪಾದಕೀಯರಲ್ಲಿ 'ಕೊಡಗು ಸಂಗಾತಿ' ಪಾಕ್ಷಿಕ ಪತ್ರಿಕೆಯ ಸಂಪಾದಕಿ ಪಟ್ಟಡ ಶೀಲಾಮಣಿ ಅವರು ಒಬ್ಬರು. ಕರ್ನಾಟಕ ಪತ್ರಿಕಾ ಅಕಾಡೆಮಿ ಪಟ್ಟಡ ಶೀಲಾಮಣಿ ಅವರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಿ.

# ಪತ್ರ ವಿಭಾಗ : ಪತ್ರ -1

To,
Kodagu
Sangathi

## ಈ ರೀತಿ ಭಿನ್ನ-ಬ್ಯಾದ ಬೇಡ.

ಗೌಡ ಜನಾಂಗಕ್ಕೆತ್ತೇಳಿ ನಡ್ಪುವ ಸಭೆ-ಸಮಾರಂಭಲಿ ಜನಾಂಗದ ಮುಖಂಡರ್‌ಗ ಗೌಡ ಜನಾಂಗದ ಭಾಷೆ, ಕಲೆ , ಸಾಹಿತ್ಯ, ಸಂಸ್ಕೃತಿ ಮತ್ತೆ ಆಚಾರ-ವಿಚಾರದ ವಿಷ್ಯ ವೇದಿಕೆಲಿ ಕನ್ನಡಲಿ ಉದ್ದುದ್ದ ಭಾಷಣ ಮಾಡುವೆ. ಇದ್ ಎಷ್ಟರ ಮಟ್ಟಿಗೆ ಸರಿ? ಗೌಡ ಜನಾಂಗದವು ಮನೆ ಮಾತ್ "ಅರೆಗನ್ನಡ"ಯಾ "ಅರೆಭಾಷೆಲಿ"ಮಾತಾಡಕ್ಕಲ್ಲ? ಅರೆಬಾಷೆಲಿ ಮಾತಾಡಿಕೆ ನಾಚಿಕೆ ಆದ್ಯೋ ಇಲ್ಯೊ ಅರೆಭಾಷೆಲಿ ಮಾತಾಡ್ರೆ ಮರಿಯಾದಿ ಕಮ್ಮಿನಾ? ಇದರ್ನ ನಾವು ಎಷ್ಟೋ ಗೌಡ ಜನಾಂಗದ ಸಭೆ-ಸಮಾರಂಭಗಳ್ಲಿ ಕೇಳ್ತೊ ಒಳ ನೋಡ್ತೊ ಒಳೊ.

ಕೊಡಗ್ ಜಿಲ್ಲೆಲಿ ಯಾವುದಾದ್ರ್ ಗೌಡ ಕುಟುಂಬಲಿ ಕಷ್ಟ ಕಾಲಲಿ ನಮ್ಮ ಜನಾಂಗದ ಮುಖಂಡರ್‌ಗ ಸೇರ್ದು ಬಾಳ ಕಮ್ಮಿ. ಉದಾರ್ಣೆಗೆ ಅಕ್ಟೋಬರ್ ತಿಂಗ, ತಾರೀಖ್ ಆರಂದ್ ಜಮ್ಮು-ಕಾಶ್ಮೀರದ ಬಾರಮುಲ್ಲಾ ಜಿಲ್ಲೆನ ಉರಿ ಎಂಬ ಜಾಗಲಿ ಪಾಕಿಸ್ಥಾನದವರ ಕುಮ್ಮಕ್‌ನ ಮ್ಯಾಲೆ ಉಗ್ರಗಾಮಿಗ ನಡ್ಸಿದ ಶೆಲ್‌ಧಾಳಿಲಿ ಮಡಿಕೇರಿ ತಾಲೋಕು, ಐಕೋಳ ಗ್ರಾಮದ ಮಂಞಂಡ್ರ ಉತ್ತಯ್ಯನವ್ರ ಮಂಙ ಹವಾಲ್‌ದಾರ್ ಕುಟ್ಟಪ್ಪ ಎಂಬವು ದೇಶಕ್ಕಾಗಿ ಅವ್ರ ಪ್ರಾಣನ ಬಲಿದಾನ ಗೈದೊಳ. ಅವರ ಹೆಣ ಭಾರತ ಸರ್ಕಾರದ ಮುಖಾಂತರ ಕೊಡಗ್ ಜಿಲ್ಲೆಗೆ ತಾರೀಖ್ 10-10-02 ರ ಬೆಳಿಗ್ಗೆ 5-20 ಕ್ಕೆ ಜಿಲ್ಲೆದ್ ಗಡಿ ಕೊಪ್ಪ ಗೇಟ್ಗೆ ಬಾತ್. ಆ ಸಮಯಲಿ ಜಿಲ್ಲೆದ್ ಗಡಿ ಕೊಪ್ಪಗೇಟ್ಗೆ ಆ ಯೋಧನ ಶರೀರನ ಬರಮಾಡಿ ಕಂಬಕೆ ನಮ್ಮ ಜಿಲ್ಲೆದ್ ನಮ್ಮ ಜನಾಂಗದ ಮುಖ್ಯ ಸಂಸ್ಥೆಗಾದ ಮಡ್ಕೇರಿ ಗೌಡ ಸಮಾಜ, ಕೊಡಗ್ ಗೌಡ ವಿದ್ಯಾ ಸಂಘ ಹಂಗೆ ಅಲ್ಲಿದೇ ಆದ ಕುಶಾಲನಗರ ಗೌಡ ಸಮಾಜ ಇವ್ರ ಪರವಾಗಿ ಅಲ್ಲಿ ಯಾರೂ ಬಾತಿಲ್ಲೆ. ಇದಿಕ್ಕೆ ಕಾರಣಯೇನ್? ಸತ್ತೋದ ವೀರ ಯೋಧ ಗರೀಬ ಕುಟುಂಬಕ್ಕೆ ಸೇರ್‌ದವತ್ತೇಳಿಯೋ? ಅಲ್ಲ ಸತ್ತ ವೀರ ಯೋಧ ಗೌಡ ಜನಾಂಗಕ್ಕೆ ಸೇರ್‌ದಂವ ಅಲ್ಲತ್ತೇಳಿಯೋ? "ಮಂಞಂಡ್ರ" ಕುಟುಂಬ ಗೌಡ ಜನಾಂಗಕ್ಕೆ ಸೇರ್ದವುತ್ತೇಳಿ "ಪೊನಿಧ್ವನಿ" ಕ್ಯಾಸೆಟ್ಟ್‌ಲಿ ಮತ್ತೆ ಕೊಡಗು ಸಂಗಾತಿ ಪ್ರಕಟ ಮಾಡ್ದ ಗೌಡ ಜನಾಂಗದ ಹೆಸರ್ನ ಪಟ್ಟಿಲಿ ಉಟ್ಟು. ಹಿಂಗಿದ್ರುಸ ಈ ಉದಾಸೀನ ಯಾಕೆ? ಜಿಲ್ಲೆದ್ ಗಡಿಗೆ ಬಂದ್ ಮೃತ ವೀರ ಯೋಧನ ಶರೀರನ ಬರಮಾಡಿಕಂಬ್ಕೆ ಬಾರದಿದ್ರು ಮಾರ್ನೆ ದಿನ ದಫನ ಮಾಡ್‌ಕಾಕನ ಜನಾಂಗದ ಮಾತ್ರ ಸಂಸ್ಥೆದ್ ಯಾರಾದರ್ ಪ್ರತಿನಿಧಿಗ ಬರಕಾಯಿತ್ತಲ್ಲಾ? ಈ ರೀತಿ ಭಿನ್ನ-ಭೇಧ ಯಾಕೆ ಮಾಡ್ದುತ ಗೊತ್ತಾದುಲೆ? ಪೇಪರ್‌ಲಿ ಗೊತ್ತಾದುಲ್ಯೊ?

ನಿಜ ಹೇಳೊಕುತ್ತಾದರೆ ಇನ್ನ್ ಮುಂದೆ ಹಿಂಗೆ ಸಾಯಕನ ಗೌಡ ಜನಾಂಗದ ಯಾವ್ದೇ ಯೋಧನ ಶರೀರ ಬೆಂಗ್ಳೂರ್‌ಗೆ ಬಾಕಾಕನ ಅಲ್ಲಿರುವ ನಮ್ಮ ಗೌಡ ಜನಾಂಗದ ಸಂಘ-ಸಂಸ್ಥೆಗ ಆ ಶರೀರನ ಬರಮಾಡಿಕಂಡ್ ಕೊಡಗ್ ಜಿಲ್ಲೆ ಕಡೆಗೆ ಕಳ್ಸಿಕೆ ಏರ್ಪಾಡ್ ಮಾಡಿ, ಸಮ್ಮಂದ ಪಟ್ಟವುಕೆ ತಿಳುವಳಿಕೆ ಕೊಡಕು. ಹಂಗೆ ಬೆಂಗ್ಳೂರು ಬುಟ್ಟ ಮ್ಯಾಲೆ ದಾರಿಲಿ ಸಿಕ್ವ ಮಂಡ್ಯ, ಮೈಸೂರು, ಹುಣಸೂರು, ಪಿರಿಯಾಪಟ್ಟಣ ಮತ್ತೆ ಕುಶಾಲನಗರ ಮುಟ್ಟ ಅಂತಹ ಯೋಧನ ಶರೀರ ಬಾಕಾಕನ ಅದರ್ನ ಬರಮಾಡಿಕಂಡ್ ಮುಂದೆ ಕಳ್ಸಿ ಕೊಡಿಕೆ ಏರ್ಪಾಡ್ ಮಾಡ್ದು ಒಳ್ಳೆದೆ. ಹಿಂಗೆ ಮಾಡ್ರೆ ಜನಾಂಗಲ್ಲಿ ಅಭಿಮಾನ ಹೆಚ್ಚಿದೆ ಮತ್ತೆ ನಮ್ಮ ಜನಾಂಗದ ಒಗ್ಗಟ್‌ನ ತೋರ್ಸಿದಂಗೆ ಆದೆ. ಮುಂದೆ ಇಂತ ಅಚಾತುರ್ಯಗ ನಡಿಯದಂಗೆ ಜನಾಂಗದ ಸಂಘ ಸಂಸ್ಥೆಗ ಎಚ್ಚರ ವಹಿಸುದು ಒಳ್ಳೆದ್‌ತ್ತೇಳಿ ನಾವು ಈ ಮೂಲಕ ಕೇಳಿ ಕಂಡವೆ.

ಆಡಳಿತ ಮಂಡಳಿ ಅಪ್ಪಣೆ ಉಟ್ಟು : ಜೈನೀರ ವೆಂಕಟೇಶ್

---

# ಪತ್ರ - 2

## ಕೊಡಗು ಗೌಡ ಸಮಾಜ (ರಿ.) ಬೆಂಗಳೂರು

ಇದರ ಸ್ಥಾಪಕ ಅಧ್ಯಕ್ಷರು ಯಾರು? ಯುವಕರಲ್ಲಿ ಮೂಡಿರುವಂತಹ ಪ್ರಶ್ನೆ?

ಮಾನ್ಯರೇ,

ಕೊಡಗು ಸಂಗಾತಿ (Oct. 1ರಿಂದ 31, 02) ರ ಸಂಚಿಕೆಯಲ್ಲಿ ಪ್ರಕಟವಾದ ಕೊಡಗು ಗೌಡ ಸಮಾಜ (ರಿ) ಬೆಂಗಳೂರು ಕೈಲುಮೂಹೂರ್ತ ಹಬ್ಬದ ಪಕ್ಷಿನೋಟವನ್ನು ಓದಿ ತುಂಬಾ ಸಂತೋಷವಾಯಿತು. ಆದರೆ ಕುದುಪಜೆ ಸೀತಾಗಣಪತಿಯವು ಸ್ಥಾಪಕ ಅಧ್ಯಕ್ಷರಾದ ತೋಟಂಬೈಲು ಬೆಳ್ಳಿಯಪ್ಪನವರು ಎಂದು ಹೇಳಿರುವ ಬಗ್ಗೆ ನಮ್ಮಲ್ಲಿ ಮೂಡಿರುವ ಸಂಶಯ.

ದಿನಾಂಕ 2-01-1966 ಭಾನುವಾರ ಸಂಜೆ ಸರಿಯಾಗಿ ಸುಮಾರು 6-05, ಸ್ಥಳ : New Krishna Bhavan ಮಲ್ಲೇಶ್ವರಂ, ಬೆಂಗಳೂರುನಲ್ಲಿ, ನಮ್ಮ ಹಿರಿಯರು ಸಭೆ ಸೇರಿ ಕೊಡಗು ಗೌಡ ಸಮಾಜವನ್ನು ಅಸ್ತಿತ್ವಕ್ಕೆ ತಂದರು. Adhoc Commitee ಯನ್ನು ರಚಿಸಲಾಯಿತು.

ಕೊಡಗು ಗೌಡ ಸಮಾಜದ ಪ್ರಥಮ ಅಧ್ಯಕ್ಷರಾಗಿ ಶ್ರೀ ಕೆದಂಬಾಡಿ ಮುದ್ದಪ್ಪ, ಉಪಾಧ್ಯಕ್ಷರಾಗಿ ಶ್ರೀ ಚೆರಿಯಮನೆ ಪೊನ್ನಪ್ಪ ಕಾರ್ಯದರ್ಶಿಯಾಗಿ ಶ್ರೀ ತೋಟಂಬೈಲು ಬೆಳ್ಳಿಯಪ್ಪ ಸಹಕಾರ್ಯದರ್ಶಿಯಾಗಿ ಶ್ರೀ ಅಮೆ ಶಿವರಾಯ ಇವರುಗಳು ಆಯ್ಕೆಯಾದರು.

ದಿನಾಂಕ 20-2-1966 ಭಾನುವಾರ ಸಮಯ : 4-00

ಸ್ಥಳ : New Krishna Bhavan, ಮಲ್ಲೇಶ್ವರಂ, ಬೆಂಗಳೂರು ತಮ್ಮ ಸಮಾಜದ ಪ್ರಥಮ ಸೌಹಾರ್ದ ಕೂಟವನ್ನು ಏರ್ಪಡಿಸಲಾಯಿತು.

ಮುಖ್ಯ ಅತಿಥಿಯಾಗಿ : ಶ್ರೀ ಟಿ.ಕೆ. ಚಂಗಪ್ಪ, Advocate, Marcara, ಇವರು ಭಾಗವಹಿಸಿದರು.

ಈ ಕಾರ್ಯಕ್ರಮವು ಭಾರೀ ವಿಜೃಂಭಣೆಯಿಂದ ನಡೆಯಿತು ಎಂಬ ವರದಿ ಇರುತ್ತದೆ.

ನಂತರ ದಿನಾಂಕ : 12-3-1967 ರಲ್ಲಿ ಎರಡನೇ ವರ್ಷದ ಸೌಹಾರ್ದ ಕೂಟವು ಅದೇ ಸ್ಥಳದಲ್ಲಿ ಏರ್ಪಡಿಸಲಾಯಿತು. ಸಮಾಜದ ಅಧ್ಯಕ್ಷರಾಗಿ ಚೆರಿಯಮನೆ ಪೊನ್ನಪ್ಪ, ಕಾರ್ಯದರ್ಶಿಯಾಗಿ ತೋಟಂಬೈಲು ಬೆಳ್ಳಿಯಪ್ಪನವರು ಹಾಗೂ ಅನೇಕ ಸದಸ್ಯರುಗಳು ಆರಿಸಲ್ಪಟ್ಟರು, 15-12-1969 ರಲ್ಲಿ ನೋಂದಣಿಯಾಗಿರುತ್ತದೆ. ಈ ರೀತಿಯಾಗಿ ಬೆಳೆದು ಬಂದ ನಮ್ಮ ಸಮಾಜವು ಇಂದು ಸುಮಾರಾಗಿ ಎಲ್ಲಾ ಕೊಡಗಿನ ಗೌಡರನ್ನು ಒಂದು ಗೂಡಿಸುವಲ್ಲಿ ಯಶಸ್ವಿಯಾಗಿದೆ. ಹಾಗಾದರೆ ನಮ್ಮ ಸಂಘದ ಸ್ಥಾಪಕ ಅಧ್ಯಕ್ಷರು ಯಾರೆಂಬುದನ್ನು ಹಿರಿಯರಾದ ತಾವು ತಿಳಿಸಬಲ್ಲಿರಾ?

- ತೇನನ ರಾಜೇಶ್ ಸೋಮಣ್ಣ, ಬೆಂಗಳೂರು.

# ಗೌಡರ ಗೋತ್ರ - ಬೇಕೆ ಬೇಡ್ವೆ ?

*ಲೇಖನ : ಪ್ರೊ|| ಪೂಜಾರಿ ಮೊಣ್ಣಪ್ಪ, ಬೆಂಗಳೂರು.*

ನವ ನಾಗರೀಕತೆಯ ಪ್ರಭಾವದಿಂದಾಗಿ ಗೋತ್ರದ ಬಗ್ಗೆ ಅಸಡ್ಡೆ ಭಾವನೆ ತಳೆದಿರುವುದು ಸರಿಯಲ್ಲವೆಂಬುದಕ್ಕಾಗಿ ಈ ಲೇಖನವನ್ನು ಬರೆಯಲಾಗಿದೆ.

ಗೋತ್ರ ಎಂದರೆ ಏನು? ಹೇಗೆ? ಯಾರು ?ಯಾಕಾಗಿ? ಯಾವಾಗ? ಎಲ್ಲಿ? ಏತಕ್ಕೆ ಎಂದು ಪರಿಶೀಲಿಸಿದಾಗ ಪ್ರತಿಯೊಬ್ಬರ ಮೂಲ ಪುರುಷದಿಂದ ವಂಶ ಪಾರಂಪರ್ಯವಾಗಿ ಮುಂದುವರಿದ ಸ್ಥಿತಿಗೆ ಗೋತ್ರವೆಂದು ಕರೆಯುತ್ತಾರೆ. ಹಿಂದೂ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೂ ಹೀಗಿದ್ದು ಅವರವರ ಗೋತ್ರಗಳು ಅವರವರ ಮೂಲ ಪುರುಷ (ಕಾರೋಣ) ರಿಂದ ಋಷಿಗಳ ಹೆಸರಿನ ಮೇಲೆ ಕರೆಯಲ್ಪಡುತ್ತದೆ. ಮೇಲೆಹೇಳಿದ ಜಾತಿಗಳು ಗೋತ್ರಗಳು ಭಾರಧ್ವಜ, ಆತ್ರಿ, ಜಮದಗ್ನಿ, ಯಜ್ಞವಲ್ಕ್ಯ, ಗೌತಮ, ವಿಶ್ವಾಮಿತ್ರ, ಕಶ್ಯಪ, ವತ್ಸಾರ, ನೈಗ್ರವಾ..........ಎಂಬುದಾಗಿದೆ.

ಆದರೆ ಗೌಡರ ಗೋತ್ರಕ್ಕೆ ಈ ರೀತಿಯ ಋಷಿಗಳ ಹೆಸರನ್ನಿಡದೆ ಬೇರೆ ರೀತಿಯಲ್ಲಿ ಅಂದರೆ ಒಂದೊಂದು ಜನಾಂಗಕ್ಕೆ ಸಂಬಂಧಿಸಿದ ಹೆಸರುಗಳನ್ನು ಇಟ್ಟಿರುವುದು ಗೋಚರಿಸುತ್ತದೆ. ಅಂದರೆ ನಂದರ, ಹೆಮನ, ಬಂಗಾರ, ಕಬರ್, ಬಳಸನ್ನ ನಾಯರ್, ಚಾಲ್ಯರ್, ಮೌಲ್ಯರ, ಸೆಟ್ಟೆ, ಗೌಡಸಾಲೆ, ಗೋಳಿ, ಲಿಂಗಾಯಿತ, ಗುಂಡರ, ಚಿತ್ತೇರ, ಕರೆಂಬೆರ್, ಕರ್ಬನ್ನ, ಶೆರ್ದನ್ನ ಗೋತ್ರ ಎಂದು 18 ಗೋತ್ರಗಳು ಇತ್ಯಾದಿಗಳು.

ಒಕ್ಕಲಿಗರಲ್ಲಿ ಮರಗಳ ಹೆಸರಿನಿಂದಲೂ, ಒಕ್ಕಲಿ ಗೌಡರಲ್ಲಿ ಸಸ್ಯ ಮತ್ತು ಇತರೆ ಹೆಸರನ್ನೂ ಇಟ್ಟುಕೊಂಡಿದ್ದಾರೆ. ಈ ಗೋತ್ರದ ಸಿದ್ಧಾಂತವನ್ನು ಸಾಧಾರಣ ಮೂರು ಸಾವಿರ ವರ್ಷಗಳಿಂದಲೇ ಖಡಾ ಖಂಡಿತವಾಗಿ ಅನುಸರಿಸಿಕೊಂಡು ಬರಲಾಗಿದೆ. ಆಯಾಯ ಜಾತಿಗಳ ಧರ್ಮ ಗುರುಗಳ ಆದೇಶದಂತೆ ಅಳವಡಿಸಿಕೊಂಡು ಕಾಪಾಡಿಕೊಂಡು ಬರಲಾಗುತ್ತಿದೆ. 1911, 1912 ಮತ್ತು 1913 ನೇ ಇಸವಿಯಲ್ಲಿ ಕೊಡಗಿನ ಮತ್ತು ಕನ್ನಡ ಜಿಲ್ಲೆಯ ಗೌಡರ ಮುಖಂಡರೆಲ್ಲಾ ಸೇರಿ ಶೃಂಗೇರಿ ಜಗದ್ಗುರು ಶಂಕರಾಚಾರ್ಯರ ಆಗಿನ ಶಿಷ್ಯರ ಆದೇಶದಂತೆ ಪುನಃಹ ತಯಾರಿಸಿದ ನಿರೂಪದಲ್ಲೂ ಸಹ ಸಗೋತ್ರ ಹೆಣು ಯಾ ಗಂಡಿನ ವಿವಾಹವನ್ನು ನಿಷೇದಿಸಲಾಗಿದೆ. ಈ ರೀತಿಯಾಗಿ ಹಿಂದೂ ಸಮಾಜದಲ್ಲಿ ಗೋತ್ರದ ಬಳಕೆಯು ಸಾಧಾರಣ 3000 ವರ್ಷಗಳಿಂದಲೂ ಚಾಲನೆಯಲ್ಲಿರುವುದು ಸಂಶೋಧಕರಿಂದ ದೃಢಪಟ್ಟಿದೆ.

ಈ ಗೋತ್ರದ ಸಿದ್ಧಾಂತವನ್ನು ಋಷಿ ಮುನಿವರ್ಯರ ತಪಸ್ಸಿನ ಫಲವಾಗಿ ಸೃಷ್ಟಿಸಿದ್ದಾರೆ. ಈ ಗೋತ್ರಗಳ ಸಿದ್ಧಾಂತವನ್ನು ಸಮಾಜದ ವ್ಯಕ್ತಿಗಳ ಆರೋಗ್ಯ ಹಾಗೂ ನೈತಿಕ ಸಿದ್ಧಾಂತಗಳಿಂದ ಕೂಡಿದೆ. ಮನುಷ್ಯ ಹುಟ್ಟುವಾಗಲೂ ಮತ್ತು ಆನಂತರವೂ ಆರೋಗ್ಯವಾಗಿರಬೇಕೆಂದು ಈ ಗೋತ್ರದ ಸಿದ್ಧಾಂತವನ್ನು ಅಳವಡಿಸಿದ್ದಾರೆ.

ಅಂದರೆ ಗಂಡು ಹೆಂಣಿನ ಮೂಲವೆಲ್ಲಾ ಒಂದೇ ಆಗಿರುತ್ತದೆ. ಈ ರೀತಿ ಗೋತ್ರಗಳ ವಿಷಯದಲ್ಲಿ ಪುರಾತನ ಹಿಂದೂ ಕಾನೂನು ಹಾಗೂ ಹಿಂದೂ ವಿವಾಹ ಕಾನೂನಿನಲ್ಲಿ ಅಳವಡಿಸಲಾಗಿದೆ.ಹಿಂದೂ ವಿವಾಹ ಕಾನೂನು ವಿಧಿ 5 ರ ಪ್ರಕಾರ ಈ ಕೆಳಗೆ ಕಾಣಿಸಿರುವ ಜನರ ವಿವಾಹ ನಿಷೇಧಿಸಲಾಗಿದೆ.

1) ಗಂಡು ಯಾ ಹೆಣ್ಣುಗಳಲ್ಲಿ ತನ್ನ ತಲೆ ಮಾರಿನವರಾಗಿದ್ದರೆ,
2) ಒಬ್ಬ ವ್ಯಕ್ತಿ ಇನ್ನೊಂದು ವ್ಯಕ್ತಿಯ ತಲೆ ಮಾರಿನವರಾಗಿದ್ದರೆ,
3) ಒಬ್ಬ ಹೆಣ್ಣು ತನ್ನ ತಂದೆಯಾ ತಾಯಿಯ ಸಹೋದರ ಯಾ ಅಜ್ಜನ ಯಾ ಅಜ್ಜಿಯ ಸಹೋದರನ ಹೆಂಡತಿಯಾಗಿದ್ದರೆ,
4) ಹೆಂಡತಿ ಯಾ ಗಂಡ ತನ್ನ ಸಹೋದರಿ ಸಹೋದರ ಅಥವಾ ಚಿಕ್ಕಪ್ಪ ಯಾ ಸೋದರ ಮಾವ ಯಾ ಸೋದರ ಸೊಸೆ, ಸೋದರ ಅತ್ತೆ, ಸೋದರ ಅಳಿಯ ಯಾ ಸೋದರ ಸೊಸೆ ಸಹೋದರನ ಯಾ ಸಹೋದರಿಯ ಮಕ್ಕಳು ಸಪಿಂಡರಾಗುತ್ತಾರೆ.

ಉದಾಹರಣೆ:- ಒಬ್ಬ ಯುವಕ ಸಪಿಂಡದ ಹುಡುಗಿಯನ್ನು ಮದುವೆಯಾಗಬಾರದು. ಒಂದೆ ಗೋತ್ರದವರನ್ನು ಸಪಿಂಡ ಎಂದು ಕರೆಯುತ್ತಾರೆ. ಒಬ್ಬ ವ್ಯಕ್ತಿಯು ತನ್ನ ತಾಯಿಯ 3 ನೇ ತಲೆಮಾರಿನ ಮೇಲಿನವರೆಗೂ ಅಥವಾ ತನ್ನ ತಂದೆಯಿಂದ 5 ನೇ ಮೇಲಿನ ತಲೆ ಮಾರಿನವರೆಗಿನವರು ಸಪಿಂಡ ಸಂಬಂಧವೆಂದು ಕರೆಯುತ್ತಾರೆ.

ಈ ರೀತಿಯ ಸಂಬಂಧವನ್ನು 3 ಸಾವಿರ ವರ್ಷಗಳ ಹಿಂದೆಯೇ ಸಿದ್ಧಾಂತವಾಗಿ ನಿರ್ಣಯಿಸಿದ್ದಾರೆ. ಇದೇ ಸಿದ್ಧಾಂತವನ್ನು ಶಾಸ್ತ್ರಜ್ಞರು ಇದೇ ತತ್ವವನ್ನು ಒಪ್ಪುವ ರೀತಿಯಲ್ಲಿ ವಿವರಿಸುತ್ತಾರೆ. ಮನಶಾಸ್ತ್ರಜ್ಞರ ಪ್ರಕಾರ ಒಂದು ಮಗುವು ಹುಟ್ಟಿದಾಗ ಅರ್ಧದಷ್ಟು ದೈಹಿಕ ಹಾಗೂ ಮಾನಸಿಕ ಗುಣವು ತಂದೆ ತಾಯಿಗಳಿಂದಲೂ, 1/4 ಭಾಗದಷ್ಟು ತಂದೆಯ ಗುಣದಷ್ಟು ಮತ್ತು ತಾಯಿಯ ಗುಣದಷ್ಟು ಇನ್ನುಳಿದ ಗುಣಗಳು ಮೇಲಿನ ತಲೆಮಾರಿನವರಿಂದ ಬರುತ್ತದೆ ಎಂಬ ಸಿದ್ಧಾಂತವನ್ನು ತಳೆದಿದ್ದಾರೆ.

ಆದ್ದರಿಂದ ಹಿಂದೂ ಮತದಲ್ಲಿ ಗೋತ್ರದ ಪದ್ಧತಿ ವೈಜ್ಞಾನಿಕವಾಗಿ ತುಂಬಾ ಪ್ರಾಮುಖ್ಯವಾಗಿದೆ. ಇದೂ ಅಲ್ಲದೆ ಹಿಂದೂ ಸಮಾಜವು ಒಕ್ಕುಟುಂಬ (Joint Family) ತತ್ವದ ಮೇಲೆ ಬೆಳೆದು ಬಂದುದರಿಂದ ಎಳೆಯ ಹುಡುಗಿಯರನ್ನು ಸ್ವೇಚಾಚಾರದ ದವಡೆಯಿಂದ ಪಾರುಮಾಡಲು ಸಗೋತ್ರ ಪಿಂಡದ ಸಿದ್ಧಾಂತವನ್ನು ಅಳವಡಿಸಿದ್ದು ಹಿಂದೂ ಸಮಾಜದ "ನೈತಿಕತೆ" ಯನ್ನು ಕಾಪಾಡಲು ಅತಿ ಮುಖ್ಯ ಮೂಲ ಕಾರಣ ವಾಗಿದೆ. ಒಂದು ವೇಳೆ ಸಪಿಂಡದ ತತ್ವವನ್ನು ಅನುಸರಿಸದೆ ಇದಿದ್ದರೆ ಪ್ರಾಣಿಗಳಿಗೂ ಮನುಷ್ಯರಿಗೂ ದೈಹಿಕ ಕಾಮವಾಸನೆಯನ್ನು ತೀರಿಸಿಕೊಳ್ಳುವುದರಲ್ಲಿ ಯಾವುದೇ ವ್ಯತ್ಯಾಸ ಇಲ್ಲದೆ ಒಂದು ಸುಸಂಸ್ಕೃತ ಸಮಾಜವನ್ನೂ ಕಟ್ಟಲು ಸಾಧ್ಯ ಆಗುತ್ತಿರಲಿಲ್ಲ.

ಈ ರೀತಿಯ ಸಪಿಂಡದ ಸಿದ್ಧಾಂತ ಒಂದು ಒಕ್ಕುಟುಂಬದ ಸದಸ್ಯರ ಪ್ರೀತಿ ವಿಶ್ವಾಸವನ್ನು ಹೆಚ್ಚಿಸಿ ಒಂದು ಸದೃಢವಾದ ಹಾಗೂ ಬಲವಾದ ತಳಹದಿಯ ಸಮಾಜವನ್ನು ಕಟ್ಟಲು ಸಾಧ್ಯವಾಗಿ ಇಂದಿಗೂ ಪ್ರಪಂಚದ ಎಲ್ಲಾ ಸಮಾಜಗಳಿಗಿಂತ ಸರ್ವಶ್ರೇಷ್ಠ ಸಮಾಜವನ್ನು ಸ್ಥಾಪಿಸಲು ಸಾಧ್ಯವಾಗಿದೆ.

ಈ ಕಾರಣಗಳಿಂದ ಈಗಿನ ನವ ನಾಗರೀಕತೆಯ ಮತ್ತಿನಲ್ಲಿ "ಗೋತ್ರ"ವೆಂಬ ಮಹಪಾತ್ರದ ಅರಿವನ್ನು ನಮ್ಮ ಋಷಿ ಮುನಿಗಳು ಹಾಕಿ ಕೊಟ್ಟ ಸಿದ್ಧಾಂತವನ್ನು ಅಲ್ಲಗಳಿಯುದಾಗಲಿ ಅಥವಾ ಅಸಡ್ಡೆಯಿಂದ ವರ್ತಿಸಿದರೆ ಮುಂದೊಂದು ದಿನ ಖಂಡಿತವಾಗಿ ಹಲವಾರು ಕಾಯಿಲೆ ಕಸಗಳಿಗೆ, ರೋಗ

ರುಜಿನಗಳಿಗೆ "ಏಡ್ಸ್" ದಂತಹ ಮಾರಕ ರೋಗಗಳಿಗೆ ತುತ್ತಾಗಿ ನಮ್ಮ ಸಮಾಜದ ಅಡಿಪಾಯವೇ ಕಿತ್ತು ಹೋದೀತು. ಮುಂದಿನ ಯುವ ಪೀಳಿಗೆಯ ಪ್ರತಿಯೊಬ್ಬರು ಚಿಂತಿಸಬೇಕಾದ ಮಹಾ ವಿಷಯವೇ ಸರಿ.

*ವಿ.ಸೂ:* ಇದು ಯುವ ಪೀಳಿಗೆಯವರಿಗೆ ಉತ್ತಮವಾದ ಮಾರ್ಗದರ್ಶನದ ಲೇಕನವಾಗಿದೆ. ಉದಾ: ನಾಲ್ಕೈದು ವರ್ಷಗಳ ಹಿಂದೆ ಮರಗೋಡು ಗೌಡ ಸಮಾಜದ ಸಮಾರಂಭದಲ್ಲಿ ಗಣ್ಯಾತಿಗಣ್ಯ ವ್ಯಕ್ತಿಯೊಬ್ಬರು ಸಭೆಯ ಭಾಷಣದಲ್ಲಿ ಹೇಳಿದ್ದನ್ನು ಇಲ್ಲಿ ಹೇಳಬೇಕಿದೆ- ಮಾತನ್ನಾಡುತ ಗೋತ್ರ ಗೀತ್ರ ಎಲ್ಲಾ ಯಾಕೆ? ಅದನ್ನು ಕಟ್ಟಿಕ್ಕೊಂಡು ನಮಗೇನಾಗಬೇಕು. ನಮಗ್ಯಾಕ್‌ದ್? ಆದರೆ ನಾವ್ ಮುಂದುವರಿಯಕ್ಕು ಎಂದು, ಮುಂದುವರಿಯುದೆಂದರೇನು? ಹಿಂದಿನದನ್ನು ಬಿಡದೆ ಜೊತೆ ಜೊತೆ ಯಲ್ಲಿಯೇ ಕೊಂಡೊಯ್ಯುವುತ್ತಾ ಮುಂದುವರಿಯುದು ಸರಿಯಲ್ಲವೆ? ಡಾ|| ಬಿಳಿಮಲೆ ಪುರುಷೋತ್ತಮ್‌ನವರ ಸಂಶೋಧನೆ ಪ್ರಕಾರ ಐಗೂರು ಸೀಮೆಯಿಂದ ಪುಷ್ಪಗಿರಿ ಬೆಟ್ಟದ ಮೇಲ್ಭಾಗದಲ್ಲಿ ಕನ್ನಡ ಜಿಲ್ಲೆ ಕಡೆಗೆ ಗೌಡ ಜಾತಿಯವರು ನೆಲೆಸಿದ್ದಾರೆ ಅನ್ನುವ ಅಂಶಕ್ಕೆ ಈ ಗೋತ್ರವೇ ಪೂರಕವಾಗಿದೆ. ಹೀಗೆ ಗೋತ್ರದ ಪಾತ್ರ ಮಹಾ ಪಾತ್ರವೇ ಸರಿ. ಕಿರಿಯರಾದ ನಾವೆಲ್ಲರೂ ವಿಧಿ ವತ್ತಾಗಿ ಪಾಲಿಸುವಂತಾಗಬೇಕು. ಆಗಲೇ ಲೋಕಕ್ಕೆ ಕ್ಷೇಮ.

-ಸಂಪಾದಕಿ.

## ಮೈಸೂರಿನಲ್ಲಿ ಹುತ್ತೇರಿ ಆಚರಣೆ

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ ದಿನಾಂಕ 21-11-2002 ರಂದು ಹುತ್ತೇರಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸುಮಾರು 500 ಕ್ಕಿಂತಲೂ ಹೆಚ್ಚು ಸಮಾಜ ಬಾಂಧವರು ಸಂಜೆ 7 ಗಂಟೆಗೆ ಸೇರಿ 8-30 ಗಂಟೆಗೆ ನೆರೆಕಟ್ಟಿ 9-15 ಗಂಟೆಗೆ ಕದಿರನ್ನು ಕುಯ್ಯಲಾಯಿತು.

ಸಮಾಜದ ಹಿರಿಯರಾದ ಕುಯ್ಯುಮುಡಿ ರಾಮಪ್ಪನವರು ಕುಲಗುರು ವೆಂಕಟರಮಣ, ತಾಯಿ ಕಾವೇರಿ, ಇಗ್ಗುತಪ್ಪರನ್ನು ನೆನೆಯುವುದರ ಮೂಲಕ ಪಟ್ಟಡ ಪ್ರಭಾಕರರವರು ಕದಿರು ಗುತ್ತಿಯನ್ನು ಹಿರಿಯಾದ ನೆಯ್ಯಣ್ಣೀರ ಕುಶಾಲಪ್ಪನವರ ಹೆಗಲಿಗೇರಿಸಿದರು. ಶ್ರೀಮತಿ ಕಡ್ಯದ ಸರೋಜ ಚುಂಡಯ್ಯನವರು ಕಂಪಿನಿ ಹಿಡಿದು, ಪೊಲಿ ಪೊಲಿಯೇ ಬಾ ಅನ್ನುವ ವೇದಘೋಷದೊಂದಿಗೆ ನೆಟ್ಟ ಬೆಳೆಗೆ ನೆರೆಕಟ್ಟಿ ದೇವರನ್ನು ನೆನೆದು ಅಕ್ಕಿ ಹಾಕಿ ಪ್ರಾರ್ಥಿಸಿ ಕದಿರು ಕುಯ್ಯಲಾಯಿತು. ಆಕಾಶಕ್ಕೆ ಗುಂಡನ್ನು ಹೊಡೆಯಲಾಯಿತು. ಪಟಾಕಿಗಳ ಆರ್ಭಟ ಗಗನ ಮುಟ್ಟುವಂತಿತ್ತು.

ಒಲೆಗೆರಡರಂತೆ ನೆರೆಯನ್ನು ಮತ್ತು ಕದಿರನ್ನು ಹಂಚಲಾಯಿತು. ಕೊಡಗಿನ ಪದ್ಧತಿಯಂತೆ ತಂಬಿಟ್ಟು ಮತ್ತು ಅವಲಕ್ಕಿಯನ್ನು ಪ್ರಸಾದವಾಗಿ ಹಂಚಲಾಯಿತು.

ಈ ವರ್ಷದ ಆಕರ್ಷಣೆಯಾಗಿ ಮನೋರಂಜನಾ ಕಾರ್ಯಕ್ರಮವಿತ್ತು. ಕಡ್ಯದ ಜ್ಯೋತಿ ತಾರಾಣಯ್ಯ ಹಾಗೂ ಬಟ್ಯನ ಕೀರ್ತಿ ಚಂದ್ರಪ್ಪನವರು ನೃತ್ಯ ಮಾಡುವುದರ ಮೂಲಕ ಜನರ ಗಮನ ಸೆಳೆದರು ಹಾಗೂ ಮೋಂಟಡ್ಕ ಗೀತಾ ಗಣೇಶ್ ಮತ್ತು ಕತ್ರಿಕೊಲ್ಲಿ ನಿತ್ಯಾ ವಸಂತ್ ಹಾಡಿ ಮನತಣಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಗೀತಾ ಮೋಂಟಡ್ಕ ನೆರವೇರಿಸಿದರು.

ವರದಿ : ನಿಶಾ ಪಟ್ಟಡ.

## ಸುಳ್ಯದ ಸಂಪಿಗೆ

ಪತ್ನಿ : ಓ ಇನಿಯಾ....ಬಾ ಬಾ ಎಲ್ಲಿದೆ ನವ ಸುಮವು
ಮುಡಿಸೈ ಎನಗೆ ಕಂಪಿನ ಸಂಪಿಗೆ ಹೂವಾ
ಅಮರ ಸುಳ್ಯದ ತೋಟದಿ ಬೆಳೆದಾ
ಸಂಪಿಗೆ ಮರದ ಸೊಂಪಿನ ಸುಮವ
ತಾರೋ ಇಲ್ಲಿಗೆ ಈ ಕ್ಷಣದಲ್ಲಿ, ಆಸೆಯು ಮಿತಿ ಮೀರಿದೆ
ಮನ ಮನವು ಕಾತರಿಸುತಿದೆ, ಓ ಇನಿಯ
ಮಂಗಳೂರ ಮೈಸೂರ ಮಲ್ಲಿಗೆ ಹೂಗಳ
ಮುಡಿದಿಹೆ ನಾ ಹಿಂದಿನ ಶಿಶಿರದಿ
ಸೌರಭ, ಸೂಸುವ ಸಂಪಿಗೆ ಸುಮವ
ಸಖಿಯ ಶಿರಸಿನ ತುರುಬಿಗೆ ಹಚ್ಚು
ತಂದಿಹನೆ ಬೆತ್ತದ ಬುಟ್ಟಿಯಲಿ ಬಾಲಕನು
ತರುವಿನಿಂ ಕೊಯ್ದು ನವ ಸುಮಗಳನು

ಪತಿ : ಚಿಂತಿಸಬೇಡಿನ್ನು ಓ ಪ್ರಾಣ ಸಖಿ
ನಿನ್ನೆಯ ಸೂಚನೆ ಕೊಟ್ಟಿಹೆ ನೀನು
ಇದೊ ಈ ಕೊಠಡಿಗೆ ಪೋಗೋಣ
ಸಂಪಿಗೆ ಮುಡಿಸುವೆ, ಮುತ್ತನು ನೀಡುವೆ
ಸುಳ್ಯದ ಸಂಪಿಗೆ ಮುಡಿದಾಗ!
ಸೊಂಪಿನ ಸೌರಭ, ಎಲ್ಲೆಡೆಯು
ಕೃಷ್ಣನು ಭಾಮೆಗೆ ಮುಡಿಸಿದಾ ಈ ಸಂಪಿಗೆ
ನಿನಗಿದೋ ಅರ್ಪಣೆ, ಸ್ವರ್ಣಸಂಪಿಗೆ
ಸುಳ್ಯದ ಸಂಪಿಗೆ ಬೆಳಗಲಿ ಮುಂದೆ
ಸೂಸಲಿ ಕಂಪನು ವಿಶ್ವದಲಿ
ಸುಳ್ಯದ ಸಂಸ್ಕೃತಿ ಮಾದರಿಯಾಗಲಿ
ಸರ್ವರು ಬೆಳಗಲಿ ಕಂಪು ಪೆಂಪಿನಲಿ

-ಮಂಡೆಕೋಲು ವಾಣಿ ಕುಮಾರ್, ಉಬರಡ್ಕ, ಸುಳ್ಯ.

## ಮನುಷ್ಯ ಎಂಬ ಮೂರಕ್ಷರದವನ ಕಥೆ

ಮನುಷ್ಯ ಎಂಬ ಮೂರಕ್ಷರದವನು
ಜನನಿ ಎಂಬ ಮೂರಕ್ಷರದವಳ ಮಗನಾಗಿ
ಜಗತ್ತು ಎಂಬ ಮೂರಕ್ಷರಕ್ಕೆ ಬಂದು
ಶಿಕ್ಷಕ ಎಂಬ ಮೂರಕ್ಷರದ ಸಹಾಯದಿಂದ
ಶಿಕ್ಷಣ ಎಂಬ ಮೂರಕ್ಷರವನ್ನು ಕಲಿತು
ಯವ್ವನ ಎಂಬ ಮೂರಕ್ಷರಕ್ಕೆ ಕಾಲಿಟ್ಟು
ಮದುವೆ ಎಂಬ ಮೂರಕ್ಷರವನ್ನು ಹೊಂದಿ
ಮಡದಿ ಎಂಬ ಮೂರಕ್ಷರದವಳ ಜೊತೆ
ಸಂಸಾರ ಎಂಬ ಮೂರಕ್ಷರದ
ಸಾಗರ ಎಂಬ ಮೂರಕ್ಷರದಲ್ಲಿ ಈಜಿ
ಮಕ್ಕಳು ಎಂಬ ಮೂರಕ್ಷರದ ಮುತ್ತುಗಳನ್ನು
ನಾಡಿಗೆ ಎಂಬ ಮೂರಕ್ಷರಕ್ಕೆ ಕಾಣಿಕೆ ಕೊಟ್ಟು
ಮುದುಕ ಎಂಬ ಮೂರಕ್ಷರದ ಪಟ್ಟ ಹೊತ್ತು
ಮರಣ ಎಂಬ ಮೂರಕ್ಷರವನ್ನು ಹೊಂದುತ್ತಾನೆ
ಮನುಷ್ಯ ಎಂಬ ಮೂರಕ್ಷರದವನ ಕಥೆ ಇಲ್ಲಿಗೆ ಮುಗಿಯಿತು.

ವಿಮಲ ಎಂಬ ಮೂರಕ್ಷರದ
ಹುಡುಗಿ ಎಂಬ ಮೂರಕ್ಷರದವಳು
ಮನುಷ್ಯ ಎಂಬ ಮೂರಕ್ಷರದವನ ಕಥೆಯನ್ನು
ಕವನ - ಎಂಬ ಮೂರಕ್ಷರವನ್ನು ಬರೆದವಳು.ಜೈನೀರ ವಿಮಲ,ಬೆಂಗಳೂರು.

ಅತೀ ಟೀಕಾ ಪ್ರಹಾರ ಸಮಾಜದ ಅಭಿವೃದ್ಧಿಗೆ ಮಾರಕ

## 14-9-2002 ರಂದು ಮಡಿಕೇರಿ ಆಕಾಶವಾಣಿಯಲ್ಲಿ ಪ್ರಸಾರವಾದ ವಿಷ್ಯ.: ಗೌಡ ಜನಾಂಗ ಯಾರ್?

(ಕೇವಲ ಕನ್ನಡ ಜಿಲ್ಲೆ ಅಲ್ಲ - ಅದಕ್ಕೂ ಹಿಂದೆದ್ ಬೇಕು ಅದರ್ನ ಪ್ರಸಾರ ಮಾಡೋಣ. ಅಂತದೊಂದು ಕಾರ್ಯಕ್ರಮ ಬೇಕುತ ನಮ್ಮನ ಹುರಿದುಂಬಿಸಿದರ್‌ಂದ ನಾವು ಈ ಒಂದು ಉತ್ತಮ ಕಾರ್ಯಕ್ರಮನ ಗೌಡ ಮಹಿಳಾ ಒಕ್ಕೂಟದ ಮೂಲಕ ಎಲ್ಲವುಕ್ಕು ಗೊತ್ತಾಗಲಿತ ಗೊತ್ತಿರುವಂತ ಶಾಶ್ವತವಾದ ವಿಸಯನ ನಡ್ಸಿ ಕೊಟ್ಟವೆ. ನಮ್ಮ ಸಂಸ್ಕೃತಿನ ಪ್ರಸಾರ ಮಾಡಿಕೆ ಸಹಾಯ ಮಾಡ್ತಾಯಿರುವ ನಿರ್ದೇಶಕರಿಗೆ ನಾವು ಚಿರಋಣಿ ಆಗಿರೋಕು.)

*ಪ್ರಶ್ನೆ :* ಗೌಡ ಜನಾಂಗ ತೇಳ್ರೆ ಯಾರ್ ಮತ್ತೆ ಅವರ ಹಿನ್ನಲೆ ಏನ್ ಮೂಲ ಎಲ್ಲಿತ ಹೇಳಿಕೆ ಸಾಧ್ಯವುಟ್ಟಾ?

*ಉತ್ತರ:* ಗೌಡ ಎಂದರೆ ಕನ್ನಡ ನಾಡಿನ ಒಂದು ಜನಾಂಗ ಸೂಚಕ ಪದವೆಂದು ಹಿರಿಯ ಪರಂಪರೆಯ ಸತ್ಯಯಿದೆ. ಗೌಡ ಎಂಬ ಶಬ್ದಕ್ಕೆ ಹಿರಿಯ, ಅನುಭವಿ, ಬುದ್ಧಿವಂತ, ಗುರಿಕಾರ, ಯಜಮಾನ, ಊರಿಗೆ ಮುಖಂಡ, ಪಟೇಲ ಹೀಗೆ ಹಲವು ಅರ್ಥಗಳಿವೆ. ಪಂಡಿತ ಮಂಡಳಿಯ ಚರ್ಚಾಧಾರಿತ ನಿರ್ಣಯದಂತೆ ಗ್ರಾಮವೃದ್ಧ, ಗ್ರಾಮುಂಡ, ಗಾವುಡ, ಗವುಡ ಆಗಿ ಗೌಡ ಎಂಬ ಪದ ಬಂದಿದೆ. ಈ ಗೌಡ ಸಮಾಜವು 20 ಸಾವಿರ ವರ್ಷಗಳ ಹಿಂದೆ ಕನ್ನಡ ನಾಡಿನಲ್ಲಿದ್ದು ಸಂಸ್ಕೃತಿಯಿಂದ ಗ್ರಾಮ ವೃದ್ಧ ಎಂಬುವುದರಿಂದ ಗಾಮುಂಡನೆಂದಾದುದಕ್ಕೆ ಕ್ರಿ.ಶ.7 ನೇ ಶತಮಾನದ ಶಾಸನ ಆಧಾರ ಎಂದೂ ತಮಿಳು ಪ್ರಾಂತದಲ್ಲಿ ಗೌಂಡರ್ ಎಂದೂ ಆಂಧ್ರದಲ್ಲಿ ರೆಡ್ಡಿ ಎಂದೂ ಇನ್ನು ಹಲವು ಕಡೆ ಬೇರೆ ಬೇರೆ ಹೆಸರಿನಿಂದ ಗುರುತಿಸಿದ್ದಾರೆ. ತುಳು ಜನರು ಈಗಲೂ ಗೌಡರೆ ಎಂದು ಕರೆಯುವುದು ರೂಡಿಯಲ್ಲಿದೆ.

ಪ್ರಾಚೀನ ಕಾಲದಲ್ಲಿ ಬಂಗಾಳಕ್ಕೆ "ಗೌಡ ದೇಶ" ಎಂದು ಹೆಸರಿತ್ತು. ಗೌಡ ಜನಾಂಗದ ಮೂಲ ದ್ರಾವಿಡ ಜನಾಂಗ ಬಂಗಾಳದಲ್ಲಿ ನೆಲೆಸಿದ್ದು ಆರ್ಯನರ ಒತ್ತಡದಿಂದ ದಕ್ಷಿಣಕ್ಕೆ ವಲಸೆ ಬಂದು ಕರ್ನಾಟಕದ ಹೆಚ್ಚಿನ ಭಾಗದಲ್ಲಿ ನೆಲೆಸಿದರು. ಗೌಡ ಎಂಬ ಪದವು ಒಂದು ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದ್ದುದರಿಂದ ಗೌಡ ಎಂಬುದು ಒಂದು ಜನಾಂಗದ ಸಂಸ್ಕೃತಿ ಸೂಚಕವಾಗಿದೆ. ಇಂದಿಗೂ ಗೌಡ ಸಂಸ್ಕೃತಿ ಇತರ ಸಂಸ್ಕೃತಿಗಿಂತ ಭಿನ್ನ ಮತ್ತು ವಿಶಿಷ್ಟ ಹಾಗೂ ಬಲಾಢ್ಯವಾಗಿದೆ.

ಆರ್ಯನರಿಂದ ಗೌಡ ಜನಾಂಗ ಒಂದು ಕಲಿತದ್ದೆಂದರೆ ಅಲ್ಲಿ ವೀರರಿಗೆ ಮಾತ್ರ ಸ್ಥಾನ. ಹೇಡಿಗಳಿಗೆ ಅಲ್ಲಿ ಉಳಿಗಾಲವಿಲ್ಲ. ಅದರಂತೆ ಕನ್ನಡ ನಾಡಿನಲ್ಲಿ ನೆಲೆಸಿದ ಇವರು ಕಾಲಕ್ಕೆ ತಕ್ಕಂತೆ ವೀರ ಗುಣಗಳನ್ನು ಬೆಳೆಸಿಕೊಂಡು ಶಾಂತಿಯ ಕಾಲದಲ್ಲಿ ವ್ಯವಸಾಯಗಾರರಾಗಿ ಬಾಳಿದರು. ಗೌಡರು ಕಷ್ಟ ಸಹಿಷ್ಣುಗಳು. ಕೃಷಿ ಪ್ರಧಾನ ವೃತ್ತಿ ಜೀವನವು ಶೌರ್ಯ ಧೈರ್ಯ ಪ್ರವೃತ್ತಿಯವರು ಆಗಿದ್ದರು ಎಂಬುದಕ್ಕೆ ಜಾನಪದ ಕತೆ, ಹಾಡು, ಲಾವಣಿಗಳು, ಹೊನ್ನಮ್ಮನ ಕೆರೆ ಸಾಕ್ಷಿಗಳಾಗಿವೆ. ದಾನಿಗಳೂ, ಗುಣಶೀಲರೂ, ನಿಷ್ಠೆಯುಳ್ಳವರೂ ಮತ್ತು ಸ್ವಾಮಿ ಕಾರ್ಯದಲ್ಲಿ ಮೇಲ್ಪಟ್ಟದಲ್ಲಿದ್ದರು ಎಂಬುವುದಕ್ಕೆ ಸಾಕ್ಷ್ಯಾಧಾರಗಳಿವೆ. ಇವರು ಪರಾಕ್ರಮವನ್ನು ಮೈಗೂಡಿಸಿಕೊಂಡು ಕೃಷಿ ವಿದ್ಯೆಯ ಮೂಲಕ ತಮ್ಮ ಸಾಮಾಜಿಕ ಆರ್ಥಿಕ ನೈತಿಕ ಮತ್ತು ರಾಜಕೀಯ ಅಸ್ತಿತ್ವವನ್ನು ಪಡೆದವರಾಗಿದ್ದಾರೆ.

ಗೌಡ ಜನಾಂಗದವರು ಕನ್ನಡ ನಾಡಿನಲ್ಲಿ ನೆಲೆಸುವ ಮೊದಲು ಬಂಟರು, ಜೈನರು, ಬಂಗರು, ಅಜಿಲರು, ಬಲ್ಲಾಳರು ಇವರೆಲ್ಲಾ ಆರ್ಥಿಕ ಸಾಮಾಜಿಕ ಸ್ಥಾನಮಾನಗಳಲ್ಲಿ ಬಹಳ ಬಲಿಷ್ಟರಾಗಿದ್ದರು. ಹೀಗಾಗಿ ತುಳು ನಾಡಿನ ಗೌಡರಿಗೆ ಅವರನ್ನು ಎದುರಿಸಿ ತಮ್ಮ ನೆಲೆಯನ್ನು ಪಡೆಯುವಲ್ಲಿ ಅಸಮರ್ಥರಾದರು. ತಮ್ಮ ಉಳಿವಿಗಾಗಿ ಅವರ ಕೈಕೆಳಗೆ ಒಕ್ಕಲು ತನವನ್ನು ಮಾಡುತ್ತಾ ಅವರ ಸ್ಥಾನವನ್ನು ಭದ್ರ ಪಡಿಸಿಕೊಂಡರು. ಕ್ರಮೇಣ ಸ್ವಂತ ಭೂಮಿ ಕೃಷಿ ಮಾಡಿಕೊಳ್ಳುವಲ್ಲಿ ಚೇತರಿಸಿಕೊಂಡರು. ಮಲೆನಾಡ ಪ್ರದೇಶದಲ್ಲಿ ವಾಸಿಸುತ್ತಿದ್ದ ಕುಡಿಯರು, ಸೋಲಿಗರು ಇತ್ಯಾದಿ ವರ್ಗದವರನ್ನು ಸುಲಭವಾಗಿ ಸೋಲಿಸಿ ಆ ಭೂ ಪ್ರದೇಶಕ್ಕೆ ತಾವು ಒಡೆಯರಾದರು. ಹೀಗೆ ಬಯಲು ಸೀಮೆಯಲ್ಲಿ ನೆಲೆಸಿದ ಗೌಡರು ಒಕ್ಕಲಿಗರಾಗಿದ್ದು ರಾಜಾಶ್ರಯವನ್ನು ಪಡೆದು ಬಾಳಿದರು.

***ಧಾರ್ಮಿಕ ಪರಂಪರೆ :***

ಗೌಡ ಜೀವನ ಸಂಸ್ಕೃತಿಯಲ್ಲಿ ಇವರು ಸರಳ ಮತ್ತು ಪರಿಶ್ರಮದವರಾದ್ದರಿಂದ ಪ್ರಾದೇಶಿಕ ವೈವಿಧ್ಯತೆಗಳಿಂದ ಬಯಲು ಸೀಮೆಯ ಗೌಡರು ಕನ್ನಡ ಮಾತನಾಡಿದರೆ ತುಳು ನಾಡಿನಲ್ಲಿ ತುಳು ಮತ್ತು ಅರೆಗನ್ನಡ ಭಾಷೆ ಮಾತನಾಡಿದರು.

ಗೌಡ ಜನಾಂಗದ ಧಾರ್ಮಿಕ ಪರಂಪರೆಯಲ್ಲಿ ಧೈವೀಶಕ್ತಿಯ ಆರಾಧನೆ ಉತ್ತಮ ಮಾನವನ ನಡವಳಿಕೆ ಧರ್ಮ, ದಯೆ, ಮತ್ತು ಪರೋಪಕಾರ ಬುದ್ಧಿ, ಊರ ಹಿರಿಯರ ಸಮ್ಮುಖದಲ್ಲಿ ನ್ಯಾಯ ತೀರ್ಮಾನಗಳಲ್ಲಿ ವ್ಯಕ್ತವಾಗುತ್ತಿತ್ತು. ಉದಾತ್ತ ಮಾನವನ ಗುಣಗಳನ್ನು ಜನಾಂಗದಲ್ಲಿ ಬಿತ್ತಿ ಹಿರಿತನದ ಸಿರಿವಂತಿಕೆ ತಪ್ಪು ಒಪ್ಪುಗಳನ್ನು ಸ್ವೀಕರಿಸಬೇಕಾದ ಧರ್ಮ, ಗೌಡ ಜನಾಂಗದ ಧರ್ಮ.

ಕೇರಳದ ಕಾಸರಗೋಡು, ಸುಳ್ಯ, ಪುತ್ತೂರು ಮತ್ತು ಕೊಡಗಿನ ಭಾಗಗಳಲ್ಲಿ ಅರೆಗನ್ನಡ ಅಥವಾ ಗೌಡ ಕನ್ನಡ ಭಾಷೆಯ ಕನ್ನಡ ಭಾಷೆಯ ಮೂಲ ರೂಪವನ್ನು ಹೊಂದಿದೆ. ಇವರ ಪರಂಪರೆಯಲ್ಲಿ ಉಳಿದು ಬಂದುದೆಂದರೆ ಅರೆಗನ್ನಡ ಭಾಷೆ ಮತ್ತು ಸೋಬಾನೆ ಹಾಡುಗಳು ಗೌಡರ ಅಮೂಲ್ಯ ಸೊತ್ತಾಗಿದೆ. ವಿಜಯನಗರ ವಿಸ್ತರಣೆ, ಗೌಡ ಪಾಳೆಯಗಾರರ ದಂಡು ತುಳು ನಾಡಿನ ಸಿರಿ ಸಂಪತ್ತನ್ನು ಕಂಡು ಇಲ್ಲಿಯ ಆಡಳಿತದ ಹಿಡಿತಕ್ಕಾಗಿ ಬಂದರೂ ಮುಂದೆ ಇಲ್ಲೇ ನೆಲೆಸುವಂತಾದರು. ಹೀಗೆ ಶಿರಾಡಿ ಮಾರ್ಗ, ಚಾರ್ಮುಡಿ ಮಾರ್ಗ, ಮತ್ತು ಬಿಸಿಲೆ ಮಾರ್ಗವಾಗಿ ಬಂದ ಗೌಡರು ಸುಳ್ಯ ಪುತ್ತೂರು ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಬೇಸಾಯವನ್ನು ಮುಂದಿಟ್ಟುಕೊಂಡರು. ಇವರು ತಮ್ಮ ಜಾತಿ ಬಾಂಧವ್ಯವನ್ನು ಉಳಿಸಲು ಸಂಘಟಿತರಾಗಿ ಹತ್ತು ಕುಟುಂಬ ಹದಿನೆಂಟು ಗೋತ್ರ ಎಂಬ ನುಡಿಕಟ್ಟನ್ನು ಅನುಸರಿಸಿ ತಮ್ಮ ಶುಭ ಕಾರ್ಯವನ್ನು ಮಾಡತೊಡಗಿದರು. ಅಲ್ಲದೆ ಇವರು ಶೃಂಗೇರಿ ಜಗದ್ಗುರುಗಳನ್ನು ತಮ್ಮ ಗುರುಗಳಾಗಿ ಒಪ್ಪಿಕೊಂಡರು. ಶೃಂಗೇರಿ ಗುರುಗಳ ಆದೇಶದಂತೆ ತುಳು ನಾಡಿನಲ್ಲಿ ನೆಲೆಸಿದ ಇವರು ತಮ್ಮ ಜಾತಿ ಬಾಂಧವರ ರಕ್ಷಣೆಗಾಗಿ ಜಾತಿ ಪದ್ಧತಿಯ ಆಚಾರ ವಿಚಾರ ನೋಡಿಕೊಳ್ಳುವುದಕ್ಕಾಗಿ ಕಟ್ಟೆ ಮನೆಗಳನ್ನು ಸ್ಥಾಪಿಸಿಕೊಂಡರು. ಹೀಗೆ ಇದರ ಯಜಮಾನನ ತೀರ್ಮಾನ ಆದೇಶದಂತೆ ನಡೆದುಕೊಳ್ಳತೊಡಗಿದರು.

ಅಂದಿನ ವಿಶಾಲ ಕೊಡಗು ದೇಶವು ಪುತ್ತೂರು ಬೆಳ್ಳಾರೆ ತನಕ ಹರಡಿತ್ತು. ಪೂರ್ವಕ್ಕೆ ಈಗಿನ ಪಿರಿಯಾಪಟ್ಟಣ, ಉತ್ತರಕ್ಕೆ ಮಂಜರಾಬಾದ್, ಅರಕಲಗೋಡು ತಾಲ್ಲೂಕು, ಸಕಲೇಶಪುರದ ತನಕ ಹರಡಿತ್ತು. ಈ ಶತಮಾನಗಳಲ್ಲಿ ಮುಸ್ಲಿಮರು ಕೊಡಗನ್ನು ನಾಶ ಪಡಿಸಿದಾಗ ಅಪಾರವಾದ ಜನ ಸಂಖ್ಯೆ ನಾಶವಾಯ್ತು. ಆಗ ಬಂಜರು ಪ್ರದೇಶವಾಗಿ ಪಾಳು ಬಿಡಲು ಇಷ್ಟ ಪಡದೆ ಮತ್ತು ತಮ್ಮ ಸೈನ್ಯವನ್ನು ಬಲ ಪಡಿಸುವ ಉದ್ದೇಶದಿಂದ ಹಾಲೇರಿ ಅರಸರು ಕೊಡಗಿನ ಗಡಿ ಭಾಗಗಳಿಂದ ಊರಿಗೆ 15 ಜನರಂತೆ ಕುಟುಂಬಸ್ಥರನ್ನು ಕರೆ ತಂದು ತನ್ನದೆ ರಾಜ್ಯದ ಇತರ ಭಾಗಗಳಲ್ಲಿ ಈಗಿನ ಮಡಿಕೇರಿ ತಾಲೂಕಿನಲ್ಲಿ ಗೌಡರಿಗೆ ಜಮ್ಮ ಕೊಟ್ಟು ಕೂರಿಸಿದ ಕೀರ್ತಿ ಹಾಲೇರಿ ಅರಸರಿಗೆ ಸಲ್ಲುತ್ತದೆ.

ಸುಳ್ಯದಿಂದ ಅನೇಕ ಜನ ತೋಡಿಕಾನ ಮಾರ್ಗವಾಗಿ ಬಂದು ಭಾಗಮಂಡಲದಲ್ಲಿ ನೆಲೆಸಿದರೆ, ಸುಬ್ರಮ್ಮಣ್ಯ ಬೆಟ್ಟಕ್ಕಾಗಿ ಬಂದವರು ಗಾಳಿಬೀಡು ಕಡೆಯಲ್ಲೂ ಐಗೂರು ಸೀಮಗಾಗಿ ಬಂದವರು ಸೋಮವಾರ ಪೇಟೆ ಕಡೆಗಳಲ್ಲು ನೆಲೆಸಿ ಕೃಷಿಕವಾಗಿ ಪ್ರಾಮಾಣಿಕರಾಗಿ ದುಡಿಯತೊಡಗಿದರು. ಹೀಗೆ ಬಂದ ಗೌಡರು ಇಂದು ಒಂದು ಲಕ್ಷಕ್ಕಿಂತಲೂ ಹೆಚ್ಚಿನ

ಸಂಖ್ಯೆಯನ್ನು ಹೊಂದಿರು ತ್ತಾರೆ. ಹಾಲೇರಿ ಅರಸರ ಅನುಮತಿಯಂತೆ ಈಗಿನ ಮಡಿಕೇರಿ ತಾಲೂಕಿನಲ್ಲಿ ನೆಲೆಸಿದ ಗೌಡರು ಮತ್ತು ಕೊಡವರಿಗೆ ತಮ್ಮ ತಮ್ಮ ಧರ್ಮಶಾಸ್ತ್ರಗಳಿಗೆ ಚ್ಯುತಿ ಬಾರದಂತೆ, ಉಳಿದಂತೆ ಅಣ್ಣ ತಮ್ಮಂದಿರಂತೆ ಬಾಳಲು ತಿಳಿಸಿದರು. ಇದರಂತೆ ಗೌಡರು ತಮ್ಮ ಶುಭ ಕಾರ್ಯಗಳನ್ನು ತಮ್ಮ ಧರ್ಮಶಾಸ್ತ್ರ ಪ್ರಕಾರವಾಗಿ ಶೃಂಗೇರಿ ಮಠಕ್ಕೆ ಹರಿಕೆ ಹಣ ಕಟ್ಟುವುದರ ಮೂಲಕ ಉಳಿಸಿಕೊಂಡು ಉಳಿದಂತೆ ಕೊಡಗಿನ ಪರಂಪರೆಗೆ ಹೊಂದಿಕೊಂಡರು.

ಗೌಡರ ಬಗ್ಗೆ ಅಧ್ಯಯನ ನಡೆಸಿ ಗೌಡ ಜೀವನ ಪರಂಪರೆ ಮ್ಯಾಲೆ ಬೆಳ್ಕ್ ಬೀಳುವಂಗೆ ಮಾಡ್ದ ಶ್ರೀಮತಿ ಎಸ್. ಲಲಿತಕ್ಕ ಎಂ. ಎ. ಎಂ. ಎಡ್., ಇವುತೆ ಗೌಡ ಮಹಿಳಾ ಒಕ್ಕೂಟ ಕಡೆಂದ ಜನಾಂಗದ ಪರವಾಗಿ ಅವುಕೆ ಕುಲದೇವ್ರು ವೆಂಕಟರಮಣ ಸ್ವಾಮಿ ಶೃಂಗೇರಿ ಶಾರದಾಂಬೆ ಕೃಪೆ ತೋರ್ಲಿತ ನಾವು ಬೇಡಿಕೊಳ್ಳನಾ ಅಲ್ಲಾ?

ಈಗ ಗೌಡರ ಮದುವೆ ಧಾರೆ ಸಮಯದ ಒಂದು ಸೋಬಾನೆ ಹೇಳ್ಲೊ ?

**14-9-2002 ಆಕಾಶವಾಣಿ ಮಡಿಕೇರಿ.**

ಬರ್ದವು : ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ

ನಡ್ಸಿಕೊಟ್ಟವು, :ಕಾಳೇರಮ್ಮನ ಸರಸು ರಾಘವಯ್ಯ

(ಹಿಂದೆ ಗೌಡ ಜನ್ರಗಲ್ಲಿ ಬೆಳಗಿನ ಜಾವ ಧಾರೆ ಕ್ರಮ ಇತ್ತ್. ಆಗ ಬ್ರಾಹ್ಮಣ ಧಾರೆ ಇತ್ತ್ ತ್ತೇಳಿ ನಾವು ನೆನ್‌ಪು ಮಾಡಿಕಾದೆ)

---

## ಗೌಡ ಮಹಿಳಾ ಸಮಾಜ, ಬೆಂಗಳೂರು - ಚಟುವಟಿಕೆಗಳು

ಈ ಸಮಾಜದ ವಿವಿಧ ಕಾರ್ಯಕ್ರಮಗಳ ಅಂಗವಾಗಿ ಇದೇ ತಾರೀಖು 27 ನೇ ಆದಿತ್ಯವಾರ ಕಾವೇರಿ ನೇಶನಲ್ ಪಬ್ಲಿಕ್ ಶಾಲೆ (ಕೊಡಗು ಗೌಡ ಸಮಾಜ ಭವನ)ಯ ಆವರಣದಲ್ಲಿ ಶ್ರೇಷ್ಠ ಹಬ್ಬವಾದ ಕಾವೇರಿ ಸಂಕ್ರಮಣದ ಪ್ರಯುಕ್ತ ಶ್ರೀ ಶ್ರೀ ಕಾವೇರಿ ಮಾತೆಯ 'ತೀರ್ಥ' ಪೂಜೆಯ ಅಂಗವಾಗಿ ಕಾವೇರಮ್ಮನ ಮಹಾಪೂಜೆ, ಹಾಗೂ ಸರಸ್ವತಿ ಮತ್ತು ಲಕ್ಷ್ಮೀಪೂಜೆಗಳನ್ನು ಬಹಳ ವಿಜೃಂಭಣೆಯಿಂದ ನಡೆಸಲಾಯಿತು. ಹೆಚ್ಚು ಕಡಿಮೆ 80 ಕ್ಕೂ ಹೆಚ್ಚಿನ ಮಹಿಳೆಯರು ಮಹನೀಯರು ಮತ್ತು ಮಕ್ಕಳು ಭಾಗವಹಿಸಿದ್ದರು.

ಪೂಜೆಯ ನಂತರ "ಸನಾತನ ಸಂಸ್ಥೆ" ಬೆಂಗಳೂರು ಇವರು "ಸ್ವಯಂ ರಕ್ಷಣೆ"ಯ ವಿಚಾರ ಬಹಳಷ್ಟು ಉಪಕಾರಿಯಾಗುವಂತಹ ಕರಾಟೆಯ ಅನೇಕ ಕ್ರಮಗಳನ್ನು ವಿವರಿಸಿದರಲ್ಲದೆ ಪ್ರಥಮ ಚಿಕಿಸೆಯ ಅಂಶಗಳನ್ನೂ ಪ್ರದರ್ಶಗಳ ಮೂಲಕ ವಿವರಿಸಿದರು. ಈ ಸಂಸ್ಥೆಯ ಶ್ರೀಮತಿ ರಶ್ಮಿ ಚಾಬ್ರಿಯ ಮತ್ತು ಅವರ ವೃಂದದವರು "ಆನಂದಮಯ"ಜೀವನಕ್ಕೆ ಹೆದ್ದಾರಿಯಾದ "ಆಧ್ಯಾತ್ಮಿಕತೆ" ಎಷ್ಟು ಮುಖ್ಯ ಎಂಬುದನ್ನು ಸವಿಸ್ತಾರವಾಗಿ ವರ್ಣಿಸಿದರಲ್ಲದೆ ಇವಕ್ಕೆ ಸಮ್ಮಂದಪಟ್ಟ ಕೆಲವು ವಿಷಯಗಳನ್ನು ಚಾರ್ಟುಗಳ ಮುಖಾಂತರ ಜನರಿಗೆ ಚೆನ್ನಾಗಿ ಮನದಟ್ಟು ಆಗುವಂತೆ ವಿವರಿಸಿದರು.

ಈ ಎಲ್ಲಾ ಕಾರ್ಯಕ್ರಮಗಳು ಮುಗಿದು ಸಾಮೂಹಿಕ ಭಜನೆಯ ನಂತರ ಲಘು ಉಪಹಾರದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು. ಮಹಿಳಾ ಸಮಾಜದ ಅಧ್ಯಕ್ಷಿಣೀಯರಾದ ಕುಯ್ಯಮುಡಿ ಶ್ರೀಮತಿ ಸುಶೀಲ ಉಲ್ಲಾಸದವರು ನೆರೆದ ಎಲ್ಲಾ ಬಂಧು ಬಾಂಧವರನ್ನು ಮತ್ತು ಸನಾತನ ಸಂಸ್ಥೆಯ ಸದಸ್ಯರನ್ನು ವಂದಿಸಿದರು. .

*-ಶ್ರೀಮತಿ ಕಾವೇರಿ :ಮನೆಬೋಜಮ್ಮ ಬೋಜಪ್ಪ, ಬೆಂಗಳೂರು.*

*ಬಾಲ ಸಂಗಾತಿ ವಿಭಾಗ - ಕಳೆದ ಸಂಚಿಕೆಂದ ಮುಂದ್‌ವರ್ದದೆ*

## ಜ್ಞಾನ- 6 ಶಾಲೆಲಿ ಹೇಳಿಕೊಟ್ಟದ್ದೆಲ್ಲಾ ನಿಜ ಅಲ್ಲ

**ಲೋಹ ಶಾಸ್ತ್ರ:-** ಭಾರತೀಯರ ಸಫಲತೆನ ಕಂಡ ಹತ್ತ್ ಹಲವು ಕ್ಷೇತ್ರಲಿ ಲೋಹ ಶಾಸ್ತ್ರ ಬಹಳ ಪ್ರಧಾನವಾದದ್. ವೈದಿಕ ಸಾಹಿತ್ಯಲಿ ಬಂಗಾರ, ಬೆಳ್ಳಿ, ತಾಮ್ರ, ಕಬ್ಬಿಣ, ಮುಂತಾದ ಲೋಹಗಳ ಉಲ್ಲೇಕ ಉಟ್ಟು. ಅವುಗಳ ಬೇರೆ ಬೇರೆ ವಿಧದ ಉಪಯೋಗಗಳ್ನ ಅಲ್ಲಿ ವಿವರಿಸ್ಯೊಳೊ.

ಬಂಗಾರನ ಸಾಮಾನ್ಯ ಆಗಿ ಸರ, ಬಳೆಗಳ್ನ ಮಾಡಿಕೆ ಉಪಯೋಗಿಸ್‌ತಿದ್ದೊ. ಮೊಹೆಂಜೊದಾರೊಲಿ ಉತ್ಖನನ ಮಾಡ್‌ಕನ ಉತ್ತಮ ಕುಸುರಿ ಕೆಲಸಗಳಿಂದ ಕೂಡ್ದ ಅಪೂರ್ವವಾದ ಬಂಗಾರದ ಆಭರಣಗ ಸಿಕ್ಕಿಟ್ಟು. ವಿಜ್ಞಾನಿಗಳೆ ಪ್ರಕಾರ ಆ ಆಭರಣಗಳ್ನ 5,000 ವರ್ಷಗಳ ಹಿಂದೆನೇ ತಯಾರಿಸಲಾಗಿತ್ತ್. ಕರ್ನಾಟಕದ "ಹಟ್ಟಿ"ತ್ತೇಳುವಲ್ಲಿನ ಬಂಗಾರದ ಗಣಿಲಿ 2,000 ವರ್ಷಗಳ ಹಿಂದೆನೇ ಬಂಗಾರ ಹೇರಳವಾಗಿ ಸಿಕ್ಕ್‌ತಿತ್ತ್‌ತ್ತೇಳಿ ತಿಳ್ದ್ ಬಂದುಟ್ಟು.

ತಾಮ್ರ ಮತ್ತೆ ಅದರ ಮಿಶ್ರ ಲೋಹ ಆದ ಕಂಚು ಮತ್ತೆ ಹಿತ್ತಾಳೆಯ ಪಾತ್ರೆಗ ವೇದ ಕಾಲಲಿ ಭಾರತೀಯರ್ ಬಳ್‌ಸ್‌ತ್ತಿದ್ದೊ. ಈಗ ಸನ ಅತಿ ಪ್ರಾಚೀನ ತಾಮ್ರ ಮತ್ತೆ ಕಂಚಿನ ವಿಗ್ರಹಗಳ್ನ ನಾವು ನೋಡಕ್. ಪ್ರತಿಮೆಗಳ್ನ ಮಾಡಿಕೆ ಲೋಹನೇ ಉತ್ತಮ ಸಾಧನ ಆಗ್ಯುಟು. ಅಲ್ಲದೆ ಹೆಚ್ಚ್ ಕಾಲ ಬಾಳಿಕೆ ಬಂದದೆ. ಅದರ್‌ಂದ ನಮ್ಮ ಪ್ರಾಚೀನರ್ ಲೋಹದ ಪ್ರತಿಮೆಗಳ್ನೇ ಮಾಡ್‌ತ್ತಿದ್ದೊ.

ಬಿಹಾರದ ಸುಲ್ತಾನ್‌ಗಂಜ್‌ತ್ತೇಳುವಲ್ಲಿ ಒಂದು ಶಿಥಿಲ ಆದ ಬುದ್ಧನ ವಿಗ್ರಹ ಸಿಕ್ಕ್ಯುಟು. ಆ ವಿಗ್ರಹದ ಎತ್ತರ 7.6 ಅಡಿಗ, ಭಾರ ಒಂದು ಟನ್ನ್‌ನಷ್ಟ್ ಉಟ್ಟು. ಆ ವಿಗ್ರಹ ತಾಮ್ರದ ತಯಾರಿಕೆಲಿ ಭಾರತೀಯರಿಗೆ ಇದ್ದ ನಿಪುಣತೆನ ತೋರ್ಸಿದೆ.

***ಕಬ್ಬಿಣ:-*** ಕಬ್ಬಿಣ ಮತ್ತೆ ಉಕ್ಕ್‌ನ ತಯಾರಿಕೆಲೂ ಭಾರತದ ಸಾಧನೆ ಹೊಗಳ್‌ವಂತದ್. ದೆಹಲಿ ನಗರದ ಮಹರೋಲಿತ್ತೇಳುವಲ್ಲಿ ಇರುವ ಕಬ್ಬಿಣದ ಅಶೋಕ ಸ್ತಂಭ ಆ ಕಾಲದ ಅದ್ಭುತ ಕಾರ್ಯಶೈಲಿಯ ಪ್ರತೀಕ ಆಗ್ಯುಟ್ಟು. ಈ ಸ್ತಂಭನ 2300 ವರ್ಷಗಳಷ್ಟ್ ಹಿಂದೆನೆ ನಿರ್ಮಿಸ್ಯೊಳೊ. ಆದರೂ ಒಂದ್ ಚೂರ್ ತುಕ್ಕ್ ಹಿಡಿಯದೆ ಅದ್ ಅಂದ್ ಇದ್ದಂಗೆ ಇಂದ್‌ನೂ ಉಟ್ಟು. ಶ್ರೇಷ್ಠ ಮಟ್ಟದ ಉಕ್ಕ್‌ನ ತಯಾರಿಕೆಲಿ ದಕ್ಷಿಣ ಭಾರತ ಪ್ರಸಿದ್ಧಿ ಪಡ್‌ದಿತ್ತ್. ಕಬ್ಬಿಣನ ಉಕ್ಕಾಗಿ ಪರಿವರ್ತಿಸಿಕೆ ಹಿಂದಿನವು "ಅಂಧಮೂಷಾ ಪದ್ಧತಿ" (ಬಕಯಂತ್ರ)ನ ಬಳ್‌ಸ್‌ತಿದ್ದೊ. ಕಬ್ಬಿಣ ಪಡೆಸುತನ ಪಡೆಯಕೆ ಅಂಗಾರಾಮ್ಲ ಮುಖ್ಯ ಪಾತ್ರ ವಹಿಸಿದೆತ್ತೇಳುವ ವಿಷಯ ಹಿಂದಿನವುಕೆ ತಿಳಿದಿತ್ತ್. ಅದರ್‌ಂದ ಅವು ಮುಚ್ಚಿದ ಮಣ್ಣಿನ ಒಳಯಂತ್ರಲಿ ಕಬ್ಬಿಣದ ಸಣ್ಣ ಸಣ್ಣ ಅದರ್‌ಂದ ಉಕ್ಕ್ ಸಿಕ್ಕ್‌ತಿತ್ತ್. ಪ್ರಸಿದ್ಧ ಆದ "ದಮಾಸ್ಕಸ್ ಖಡ್ಗ"ದ ತಯಾರಿಕೆಲಿ "ವುಟ್ಸ್"ತ್ತೇಳುವ ಲೋಹನ ಬಳ್‌ಸ್ತ್ತಿದ್ದೊ.

***ಸೀಸ-ತುಪ್ಪಾತು : ZINK :-*** ಖನಿಜಂದ ಸೀಸ ಪಡೆಯಕೆ ಬೇಕಾದ ತಂತ್ರಜ್ಞಾನ ನಮ್ಮ ಪ್ರಾಚೀನವುಕೆ ಗೊತ್ತಿತ್ತ್‌ತ್ತೇಳ್ದು ಹೆಮ್ಮೆಯ ವಿಷಯ. ರಾಜಸ್ಥಾನದ ಝವಾರ ಕ್ಷೇತ್ರಲಿ ಕಿ.ಪೂ. 400 ಲಿ. ಸೀಸದ ಗಣಿ ಕಂಡ್ ಬಂದುಟು. ಆದರೆ ಖನಿಜಂದ ಸೀಸನ ಪಡೆವ ತಂತ್ರಜ್ಞಾನ ಯೂರೋಪಿಯನ್ನರಿಗೆ 18 ನೇ ಶತಮಾನದವರೆಗೂ ಗೊತ್ತಿತ್ತ್‌ಲೆ. 1748ಲಿ ವಿಲಿಯಂ ಪಾಂಡಿಯನ್ ಎಂಬಂವ ಈ ಪದ್ಧತಿನ ಯೂರೋಪ್ ದೇಶಗಳಿಗೆ ಪರಿಚಯ ಮಾಡಿ ಬಳಕೆಗೆ ತಂದದ್.

ಮುಂದುವರ್ದದೆ. - ಬಿಟ್ಟೀರ ಚೊಂದಮ್ಮ, ಶಂಭು.

---

ತನ್ನ ಸಂಸ್ಕೃತಿ, ಭಾಷೆ ಬಗ್ಗೆ ಕಳಕಳಿ ಬಡವನಿಗಿರುವಷ್ಟು ಶ್ರೀಮಂತನಿಗಿರುವುದಿಲ್ಲ - ಅನುಭವಿ

# ಭಯ



## ಭಯವೆಂದರೇನು?

ಭಯವೆಂಬುದು ಮತ್ತೇನೂ ಅಲ್ಲ; ಅಪಾಯವನ್ನು ಎದುರಿಸಲು ಸಿದ್ಧವಾಗೆಂದು ಮನಸ್ಸು ದೇಹಕ್ಕೆ ಕೊಡುವ ಮುನ್ಸೂಚನೆ ಅಷ್ಟೆ

ಭಯವಿಲ್ಲದೆ ಯಾರೂ ಬದುಕಲಾರರು. ಜೀವಿಗಳಿಗೂ ಭಯಕ್ಕೂ ಅವಿಭಾಜ್ಯ ಸಂಬಂಧವಿದೆ. ಅನಿರೀಕ್ಷಿತ ಅವಾಂಛಿತ ಪ್ರಸಂಗಗಳಲ್ಲಿ ಭಯ ಕಾಡುತ್ತದೆ. ಹಾಗೆ ನೋಡಿದರೆ ಜೀವಿತದ ಅವಧಿಯಲ್ಲಿ ಒಮ್ಮೆಯೂ ಭಯ ಪಡದ ಮನುಷ್ಯ ಇಲ್ಲವೇ ಇಲ್ಲ.

ಇಂದಿನ ವೈಜ್ಞಾನಿಕ ಯುಗದಲ್ಲಿ ನಾವು ವಿಭಿನ್ನ ಪರಿಸರ, ಪ್ರದೇಶ, ಪರಿಸ್ಥಿತಿಗಳಲ್ಲಿ ಜೀವಿಸುವ ಸಂದರ್ಭಗಳು ಬರುತ್ತವೆ. ಮನುಷ್ಯ ಅನೇಕ ಸಲ ರಾತ್ರಿ ವೇಳೆ ಹಗ್ಗವನ್ನು ತುಳಿದರೂ ಹಾವೆಂದು ಭ್ರಮಿಸಿ ಭಯ ಪಡುತ್ತಾನೆ. ತನಗಿಂತ ಶಕ್ತಿ ಶಾಲಿ ವ್ಯಕ್ತಿಗಳನ್ನು ಕಂಡು ಬೆಚ್ಚುತ್ತಾನೆ.

ಮನುಷ್ಯನನ್ನು ಕಾಲ ಕಾಲಕ್ಕೆ ಆವರಿಸುವ ಭಯಕ್ಕೆ ವೈಜ್ಞಾನಿಕ ವಿಶ್ಲೇಷಣೆ ಏನು? ಇದಕ್ಕೆ ಮನೋವಿಜ್ಞಾನಿಗಳು ಉತ್ತರ ನೀಡುತ್ತಲೇ ಬಂದಿದ್ದಾರೆ.

ಕೆಲವೊಮ್ಮೆ ನಾವು ಗ್ಯಾಸ್, ವಿದ್ಯುತ್ತು, ನೀರು, ಬೆಂಕಿ ಮತ್ತು ಹರಿತವಾದ ಆಯುಧಗಳನ್ನು ಕುರಿತು ಮಕ್ಕಳಿಗೆ ವಿವರಿಸಿ, ಅವುಗಳಿಂದ ಉಂಟಾಗುವ ಅಪಾಯಗಳ ಬಗ್ಗೆ ಅವರಲ್ಲಿ ಭೀತಿ ಹುಟ್ಟಿಸಿ ಅವುಗಳಿಂದ ದೂರ ಇರುವಂತೆ ಮಾಡುವುದು ಅನಿವಾರ್ಯವಾಗುತ್ತದೆ.

ಅನೇಕ ಬಾರಿ ಎಂಟು-ಹತ್ತು ತಿಂಗಳ ಮಕ್ಕಳೂ ತಮಗೆ ಅರಿವಿಲ್ಲದಂತೆ ಅಪಾಯದ, ಭಯದ ಭಾವನೆಗಳಿಗೆ ಒಳಗಾಗುತ್ತವೆ. ಎತ್ತರದ ಸ್ಥಳದಿಂದ ಕೆಳಗೆ ಬೀಳುವ ಭಯ ಅಥವಾ ಅಪರಿಚಿತ ವ್ಯಕ್ತಿಗಳನ್ನು ನೋಡಿ ಇಲ್ಲವೆ ಕರ್ಕಶ, ಭೀಕರ ಎನಿಸುವ ಶಬ್ಧಗಳನ್ನು ಕೇಳಿ ಅವು ಭಯಕ್ಕೆ ಒಳಗಾಗುವುದೂ ಸಹಜ.

ದೊಡ್ಡವರು ಗದರಿಸಿದಾಗ ಯಾರು ಹೇಳಿಕೊಡದಿದ್ದರೂ ಮಗು ಭಯದಿಂದ ಅಳಲು ಆರಂಭಿಸುತ್ತದೆ. ಏಕೆಂದರೆ ಯಾವುದೇ ದೊಡ್ಡ ಶಬ್ಧ ಉಂಟಾದರೂ ಮನುಷ್ಯ ಹಾಗೂ ಪ್ರಾಣಿಗಳಲ್ಲಿ ಭಯ ಉಂಟಾಗುತ್ತದೆ.

ಮನುಷ್ಯ ಎಷ್ಟು ಕ್ಲಿಷ್ಟಕರವಾದ ಸಂಘರ್ಷಮಯ ಜೀವಿ ಎಂದರೆ ಪರಿಸ್ಥಿತಿಯ ಅಧ್ಯಯನ, ವಿಶ್ಲೇಷಣೆಯಿಂದ ಆತನ ನಡತೆ ರೂಪುಗೊಳ್ಳುತ್ತದೆ. ಭಯ ಅವನ ಅನುಭವ ಮತ್ತು ಪರಿಸ್ಥಿತಿಯ ಪ್ರತಿಬಿಂಬವಾಗಿರುತ್ತದೆ.

ಭಯ ಹೇಗೆ ಆವರಿಸುತ್ತದೆ?

ಸೂಕ್ಷ್ಮ ಜೀವಿಗಳು, ಪಕ್ಷಿಗಳು ಅಥವಾ ಇತರ ಸಣ್ಣ ಪುಟ್ಟ ಪ್ರಾಣಿಗಳಲ್ಲಿ ಜನಿಸಿದೊಡನೆಯೆ ಅಪಾಯ ಮತ್ತು ಶತ್ರುಗಳನ್ನು ಗುರುತಿಸುವ ಗುಣ ಮೈಗೂಡಿರುತ್ತದೆ.

ನಗರ ಪರಿಸರದಲ್ಲಿ ಬೆಳೆಸಲ್ಪಟ್ಟ ಕಾಡು ಬಾತು ಕೋಳಿಯು ತಮ್ಮ ಆಜನ್ಮ ವೈರಿಯಾದ ನರಿಯನ್ನು ಒಮ್ಮೆ ಕೂಡ ಕಂಡಿರದಿದ್ದರೂ ನೀರಿನಲ್ಲಿ ಅದ್ದಲ್ಪಟ್ಟಿರುವ ಕಂದು ಬಣ್ಣದ ಚರ್ಮವನ್ನು ಕಂಡಕೂಡಲೇ ಹೆದರಿ ಹಿಂದೆ ಸರಿಯುತ್ತದೆ. ಹೆದರಿಕೆ ಎಂದು ಕರೆಯಲ್ಪಡುವ ಈ ಭಾವನೆ ಮನುಷ್ಯನ ಮೇಲೆಯೂ ತನ್ನದೇ ಆದ ವಿಶಿಷ್ಟ ಚಮತ್ಕಾರಿಕ ಪರಿಣಾಮ ಬೀರುತ್ತದೆ.

ಭಯ ಉಂಟಾದೊಡನೆ ಅಥವಾ ಅಪಾಯಕಾರಿ ಸನ್ನಿವೇಶ ಎದುರಾದೊಡನೆ ಹೃದಯ ಬಡಿತ ಹೆಚ್ಚಾಗುತ್ತದೆ. ರಕ್ತದ ಒತ್ತಡ ಏರುತ್ತದೆ. ಕೈ ಕಾಲುಗಳು ನಡಗುತ್ತದೆ. ರಕ್ತದ ಒತ್ತಡ ಏರುತ್ತದೆ. ಕೈ ಕಾಲುಗಳು ನಡಗುತ್ತವೆ. ದೇಹ ಕಂಪಿಸಲು ಪ್ರಾರಂಭಿಸುತ್ತದೆ. ಅಡ್ರಿನಲ್ ಗ್ರಂಥಿಗಳಿಂದ ದ್ರವ ಸ್ರವಿಸಲು ಶುರುವಾಗುತ್ತದೆ. ಮೈ ಬೆವರುತ್ತದೆ. ಇದು ಭಯದ ವಾತಾವರಣಕ್ಕೆ ಸನ್ನದ್ಧವಾಗಲು, ತನ್ಮೂಲಕ ಅಪಾಯವನ್ನು ಎದುರಿಸಲು ಸಿದ್ಧವಾಗಲು ಮನಸ್ಸು ದೇಹಕ್ಕೆ ಕೊಡುವ ಮುನ್ಸೂಚನೆ. ಹೆಚ್ಚು ಕಡಿಮೆ ಭಯ ಮತ್ತು ಆಕ್ರೋಶವನ್ನು ನಾವು ಒಂದೇ ದೃಷ್ಟಿಕೋನದಲ್ಲಿ ನೋಡುತ್ತೇವೆ. ಆದರೆ ವೈಜ್ಞಾನಿಕವಾಗಿ ಇವುಗಳಲ್ಲಿ ಬಹಳಷ್ಟು ವ್ಯತ್ಯಾಸಗಳು ಉಂಟು.

ಅಪಾಯ ಎದುರಾದ ಸಂದರ್ಭದಲ್ಲಿ ಜೀವಿಗಳು ಎದುರಾಳಿಯನ್ನು ಪ್ರತಿ ಬೆದರಿಕೆಯಿಂದ ಓಡಿಸುತ್ತವೆ. ಇಲ್ಲವೇ ತಾವೇ ಕಾಲಿಗೆ ಬುದ್ಧಿ ಹೇಳುವ ಮೂಲಕ ಪ್ರತಿಕ್ರಿಯೆ ವ್ಯಕ್ತಪಡಿಸುತ್ತವೆ. ಇದಕ್ಕೆ ಮನುಷ್ಯಪ್ರಾಣಿಯೂ ಹೊರತಾಗಿಲ್ಲ. ಮನುಷ್ಯನ ಭಾವನಾತ್ಮಕ ಸಮಸ್ಯೆಗಳನ್ನು ಪರಿಗಣಿಸಿ ಅವನಲ್ಲಿ ಅಪಾಯವನ್ನೂ ಭಯವನ್ನೂ ಎದುರಿಸುವ, ಪ್ರತಿಭಟಿಸುವ ಹಾಗೂ ಹೋರಾಟಕ್ಕೆ ಸಿದ್ಧವಾಗುವ ಗುಣಗಳು ರೂಪುಗೊಳ್ಳುತ್ತವೆ. ಉದ್ವೇಗ ಕುತೂಹಲಗಳೂ ಇದರ ಮೇಲೆ ಪರಿಣಾಮ ಬೀರುತ್ತವೆ.

***ಫೋಬಿಯಾ ಎಂದರೇನು?***

ಅದು ಯಾವಾಗಲೂ ಒಂದು ರೀತಿಯ ಮಿತಿ, ವ್ಯಾಪಿಯಲ್ಲಿರುತ್ತದೆ. ಪುರುಷರು, ಮಹಿಳೆಯರು ಹಲವು ರೀತಿಯ ಭಯದ ಸನ್ನಿವೇಶಕ್ಕೆ ಒಳಗಾಗುತ್ತಾರಾದರೂ ಅದರಿಂದ ಅವರ ಪ್ರಾಣಕ್ಕೆ ಗಂಡಾಂತರ, ಅಪಾಯ ಉಂಟಾಗುವುದು ತೀರಾ ಕಡಿಮೆ.

ಸೇತುವೆಯನ್ನು ದಾಟುವಾಗ, ಗಾಳಿಯಲ್ಲಿ ತೇಲುವಾಗ, ಅಂತರಿಕ್ಷದಲ್ಲಿರುವಾಗ, ಏಕಾಂಗಿಯಾಗಿರುವಾಗ, ಮಿಂಚು ಗುಡುಗು ಕಂಡಾಗ ಭಯ ಉಂಟಾಗುವುದು ಸಹಜವಷ್ಟೇ, ಇಂತಹ ಭಯಕ್ಕೆ ಮನಃಶಾಸ್ತ್ರಜ್ಞರು "ಫೋಬಿಯಾ' (Phobia) ಎಂದು ಕರೆಯುತ್ತಾರೆ.

ಫೋಬಿಯಾ ಎಂಬುದು ಮನುಷ್ಯನ ಜೀವನದಲ್ಲಿ ತೀರಾ ಸಾಮಾನ್ಯವಾದುದು. ಮನುಷ್ಯ ತಾನು ಒಂದಲ್ಲ ಒಂದು ಪ್ರಸಂಗದಲ್ಲಿ ಪದೇ ಪದೇ ಈ ಪ್ರಕ್ರಿಯೆಗೆ ಒಳಗಾಗುತ್ತಲೇ ಇರುತ್ತಾನೆ.

ಕೆಲವು ಬಗೆಯ ಫೋಬಿಯಾಗಳು ಭಯಾನಕ ಅನುಭವಗಳ ಪರಿಣಾಮವಾಗಿ ಸೃಷ್ಟಿಗೊಂಡಿರುತ್ತವೆ. ಓರ್ವ

ರೋಗಿಯು ಚಿಕ್ಕ ವಯಸ್ಸಿನಲ್ಲಿ ಮನೆಯ ಹೊರಗೆ ನಿಂತಾಗ ಸಿಡಿಲು ಮಿಂಚು ಅವನ ಸಮೀಪ ಹಾಯ್ದು ಹೋಗಿರುವುದು ಮನಸ್ಸಿನಾಳದಲ್ಲಿ ಹುದುಗಿ ಜೀವಮಾನ ಪೂರ್ತಿ ಈ ಗುಡುಗು ಸಿಡಿಲುಗಳಿಗೆ ಆತ ಭಯಪಡುತ್ತಿರುತ್ತಾನೆ.

ಇದೇ ರೀತಿ ಸೈನ್ಯದಲ್ಲಿರುವ ಯೋಧರಿಗೆ ಬಾಂಬ್ ಸಿಡಿದ ಸಂದರ್ಭಗಳಲ್ಲಿ ಯುದ್ಧದ ನೌಕೆ ಮುಳುಗಿ ನೀರು ಪಾಲಾದಂತಹ ಭಯ ಮಿಶ್ರಿತ ಭಾವನೆಗಳು ಉಂಟಾಗುತ್ತವೆ. ಇದನ್ನು ಅವರು ಕೊನೆಯವರೆಗೂ ಮನಸ್ಸಿನಾಳದಲ್ಲಿ ಉಳಿಸಿಕೊಳ್ಳುತ್ತಾರೆ. ಇದಕ್ಕೆ ದಿಢೀರ್ ಪರಿಸ್ಥಿತಿಯ ಫೋಬಿಯಾ ಎನ್ನಲಾಗುತ್ತದೆ.

ಆದರೆ ಬಹುತೇಕ ಹೆಚ್ಚಿನ ಫೋಬಿಯಾಗಳನ್ನು ವೈಜ್ಞಾನಿಕವಾಗಿ ವಿವರಿಸುವುದು ಕಷ್ಟದ ಕೆಲಸ. ಇದನ್ನು ಅರ್ಥ ಮಾಡಿಕೊಳ್ಳಲು ಮನುಷ್ಯನಲ್ಲಿ ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಪರಿಸ್ಥಿತಿಯು ಬದಲಾದಾಗ ಎಷ್ಟರ ಮಟ್ಟಿಗೆ ಸಹನೆ, ಸಂವೇದನಾಶೀಲತೆ ಇರುತ್ತದೆ ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ಬೇಕಾದ್ದನ್ನು ಸ್ವೀಕರಿಸುವ, ಬೇಡವಾದದ್ದನ್ನು ತಿರಸ್ಕರಿಸುವ ಈ ಪ್ರತಿಕ್ರಿಯೆಯನ್ನು ಮನುಷ್ಯ ಹೇಗೆ ನಿರ್ವಹಿಸುತ್ತಾನೆ ಎಂಬುದನ್ನು ಇದು ಅವಲಂಬಿಸಿರುತ್ತದೆ.

## ಪ್ರಕಾರಗಳು :

ಇದಕ್ಕೆ ಉದಾಹರಣೆ ಎಂದರೆ ಸಾಮಾನ್ಯ ಭಯದ ಮನೋಭಾವ (ಫೋಬಿಯಾ) ಎಂದು ಕರೆಯಲ್ಪಡುವ ಅಗೋರಾ ಫೋಬಿಯಾ ಅಂದರೆ ಖಾಲಿ ಜಾಗವನ್ನು ಒಬ್ಬನೇ ಯಾವುದೇ ಆಧಾರವಿಲ್ಲದೆ ದಾಟುವಾಗಿನ ಭಯ ಅಥವಾ ದಟ್ಟ ಕಾನನದಲ್ಲಿ ಅಥವಾ ಹಳ್ಳಿಗಾಡಿನಲ್ಲಿ ಒಂಟಿಯಾಗಿ ಅಲೆದಾಡುವಾಗ ಉಂಟಾಗುವ ಭಯ. ಇಂತಹ ಸಂದರ್ಭಗಳಲ್ಲಿ ಮನುಷ್ಯ ಒಬ್ಬನೇ ಕಾಡಿನಲ್ಲಿ ಸಂಚರಿಸಲು, ಸಣ್ಣ ಪುಟ್ಟ ಹಾದಿಯನ್ನು ಕ್ರಮಿಸಲು ಭಯ ಪಡುತ್ತಾನೆ. ಈ ಫೋಬಿಯಾವು ಬಾಲ್ಯದಲ್ಲಿ ಬೆಳೆದ ಪರಿಸರವನ್ನು ಅವಲಂಬಿಸಿರುತ್ತದೆ. ಇಂತಹ ಸಂದರ್ಭಗಳಲ್ಲಿ ಬಾಲ್ಯಾವಸ್ಥೆಯಲ್ಲಿ ನಡೆದ ಹಾಗೂ ತನ್ನ ಮೇಲೆ ಬಹುವಾಗಿ ಪ್ರಭಾವ ಬೀರಿದ ಘಟನೆಗಳನ್ನು ಸ್ಮರಿಸಿಕೊಂಡು ಅವನು ಭಯಪಡುತ್ತಾನೆ. ಇಂಥವರು ಯಾವಾಗಲೂ ಸಿಡುಕು ಮನೋಭಾವದವರು, ಗಂಭೀರ ಸ್ವಭಾವದವರು ಮತ್ತು ಯಾವುದೇ ಸಂದರ್ಭದಲ್ಲಿ ತುಟಿ ಬಿಚ್ಚದವರೂ ಹೌದು.

ಇದಕ್ಕೆ ಪ್ರತಿಯಾಗಿ ಅಗೋರಾ ಫೋಬಿಯಾ ಇದ್ದವರಿಗೆ ವಿಶಾಲವಾದ ಕಟ್ಟಡದಲ್ಲಿ ಇರಲು ಅಥವಾ ವಿಸ್ತಾರವಾದ ಕಟ್ಟಡದಲ್ಲಿ ಇರಲು ಅಥವಾ ವಿಸ್ತಾರವಾದ ಪ್ರದೇಶದಲ್ಲಿ ಏಕಾಕಿಯಾಗಿ ಓಡಾಡಲು ಭಯ, ಬಾಲ್ಯದಲ್ಲಿ ಅಲಕ್ಷ್ಯಕ್ಕೊಳಗಾದ ಮಕ್ಕಳಲ್ಲಿ ಇಂತಹ ಭಯ ತುಂಬಿಕೊಳ್ಳುವ ಪ್ರಸಂಗ ಹೆಚ್ಚು. ಲೈಂಗಿಕ ಅತೃಪ್ತಿಯಿಂದಲೂ ಇದು ಉಂಟಾಗುತ್ತದೆ.

ಅಕ್ರೋ ಫೋಬಿಯಾ ಎಂಬುದು ಎತ್ತರದ ಪ್ರದೇಶದಲ್ಲಿದ್ದಾಗ ಉಂಟಾಗುವ ಭಯ. ಕೆಳಗೆ ಬೀಳುವ ಸಾಧ್ಯತೆ ಇಲ್ಲವಾದರೂ ಬಿದ್ದೇಬಿಟ್ಟೆನೆಂಬ ಹೆದರಿಕೆ ಇದು. ಇಂತಹ ಫೋಬಿಯಾ ಉಳ್ಳವರು ಪ್ಯಾರಿಸ್ಸಿನ ಐಫೆಲ್ ಟಾವರ್ ಅಥವಾ ಅಮೇರಿಕಾದ ಎಂಪಾಯರ್ ಸ್ಟೇಟ್ ಬಿಲ್ಡಿಂಗ್‌ನಂತಹ ಎತ್ತರದ ಸ್ಥಳದಲ್ಲಿ ನಿಂತು ನಿಸರ್ಗ ಸೌಂದರ್ಯವನ್ನು ಸವಿಯಲಾರರು. ಈ ಅಕ್ರೋಫೋಬಿಕ್ ಮನೋಭಾವದ ಜನರಿಗೆ ಇಂತಹ ಎತ್ತರದ ಪ್ರದೇಶಗಳಿಗೆ ಹೋದಾಗ ಆತ್ಮಹತ್ಯೆ ಮಾಡಿಕೊಳ್ಳುವ ಭಯ ಉಂಟಾಗುತ್ತದೆ. ಇದು ಮನಸ್ಸಿನ ಅಂತರಿಕ ಭಾವನೆಗಳ ಸಂಘರ್ಷದ ಪರಿಣಾಮವಾಗಿರುತ್ತದೆ.

ಅದೇ ರೀತಿ ಕೆಲವು ರೀತಿಯ ಭಯಗಳು ತರ್ಕ ಮತ್ತು ಅತರ್ಕಗಳ ನಡುವಿನ ಸ್ವರೂಪದ್ದಾಗಿರುತ್ತದೆ. ಉದಾಹರಣೆಗೆ ಹಾವುಗಳನ್ನೇ ತೆಗೆದುಕೊಳ್ಳಿ. ಜಗತ್ತಿನ ಬಹುಭಾಗಗಳಲ್ಲಿ ಹಾವುಗಳ ಬಗ್ಗೆ ಇರುವ ಭಯ ಸಾಮಾನ್ಯ. ಆದರೆ ವಿಷಪೂರಿತ ಹಾವುಗಳು ಅಪರೂಪವಾಗಿ ಇರುವ ಬ್ರಿಟನ್ನಿನಂತಹ ದೇಶದಲ್ಲಿ ಇಂತಹ ಹೆದರಿಕೆ ಅವಾಸ್ತವಿಕವಾದದ್ದು. ಅರ್ಥಾತ್ ಫೋಬಿಯಾ ಸ್ವರೂಪದ್ದು.

ಬಾಲಕಿಯರು ಮತ್ತು ಯುವತಿಯರಲ್ಲಿ ಈ ಭಯ ಮೂಡಿದಾಗ ಅದರ ಮೂಲ ಲೈಂಗಿಕ ಸ್ವರೂಪದ್ದಾಗಿರುತ್ತದೆಂದು ಫ್ರಾಯ್ಡ್ ಹೇಳುತ್ತಾನೆ. ಭಯ ತಲೆ ತಲಾಂತರದಿಂದಲೂ ಸ್ವಭಾವಗತವಾಗಿರಬಹುದು. ಅಲ್ಲದೆ ಕೆಲವು ರೀತಿಯ ಭಯಗಳು ಮಿದುಳಿನಲ್ಲಿ ಹಾಸು ಹೊಕ್ಕಾಗಿರಬಹುದು ಎನ್ನುವುದನ್ನೂ ತಳ್ಳಿ ಹಾಕುವಂತಿಲ್ಲ ಶಿಶುಗಳಿಗೆ ಕೆಳಗೆ ಬೀಳುವ ಭಯ ಹುಟ್ಟಿನಿಂದಲೇ ಇರುವುದನ್ನು ನಾವು ಗಮನಿಸಬಹುದು.

ಈ ಫೋಬಿಯಾಗಳನ್ನು ನಿವಾರಿಸಲು ಈಗ ಮನೋವೈಜ್ಞಾನಿಕ ಚಿಕಿತ್ಸಾ ಪದ್ಧತಿಗಳು ಬಳಕೆಗೆ ಬಂದಿವೆ. ಯಾರಾದರೂ ಫೋಬಿಯಾದಿಂದ ಬಳಲುತ್ತಿದ್ದರೆ (ಉದಾ: ಬೆಕ್ಕಿನ ಭಯ) ಅಂತಹ ಸಂದರ್ಭಗಳಲ್ಲಿ ಪಾವ್ಲೋವ್‌ನ ಪದ್ಧತಿಯಂತೆ ಅವರಲ್ಲಿನ ಭಯವನ್ನು ನಿವಾರಿಸಬಹುದು. ಅದಕ್ಕಾಗಿ ಮೊದಲು ಆಟಿಕೆಯ ಬೆಕ್ಕುಗಳನ್ನು ಹಾಗೂ ಬೆಕ್ಕಿನ ಮರಿಗಳನ್ನು ಅವನ ಸಂಪರ್ಕದಲ್ಲಿ ಬರುವಂತೆ ಮಾಡಿದ ನಂತರ ದೊಡ್ಡದಾದ ಹಾಗೂ ಕೊನೆಗೆ ಬೆಳೆದ ಬೆಕ್ಕುಗಳ ನಡುವೆ ಸಂಪರ್ಕ ಕಲ್ಪಿಸಿ ಹಂತ ಹಂತವಾಗಿ ಅವರಿಗೆ ಚಿಕ್ಕ ಬೆಕ್ಕುಗಳನ್ನು ಕಂಡರೆ ಉಂಟಾಗುವ ಭಯವನ್ನು ನಿವಾರಿಸಲು ಸಾಧ್ಯ.

ಪಾವ್ಲೋವ್, ಫ್ರಾಯ್ಡ್ ಕಾವುಡ್, ಲಾರೆಂಜ್ ಮತ್ತಿತರ ಮನಃಶಾಸ್ತ್ರಜ್ಞರು ವಿವರವಾಗಿ ಅಧ್ಯಯನ ಮಾಡಿ ಅಗೋರಾ ಫೋಬಿಯಾ, ಅಕ್ರೋಫೋಬಿಯಾ, ಕ್ಲಾಸ್ಟ್ರೋಫೋಬಿಯಾ ಮತ್ತಿತರ ರೀತಿಯ ಫೋಬಿಯಾಗಳ ನಡುವಿನ ಭಿನ್ನತೆ ಹಾಗೂ ಅವುಗಳನ್ನು ನಿವಾರಿಸುವ ಕ್ರಮಗಳನ್ನು ಸೂಚಿಸಿದ್ದಾರೆ.

ಫೋಬಿಯಾಗಳಿಗೂ ನಮ್ಮ ಜೀವನ ಶೈಲಿ ಭಾವನಾತ್ಮಕ ಪರಿಪಕ್ವತೆ, ಬೌದ್ಧಿಕ ಬೆಳವಣಿಗೆ ಇವುಗಳಿಗೂ ಜಟಿಲ ಸಂಬಂಧವಿದೆ. ಕೆಲವು ವೇಳೆ ಇಂತಹವರನ್ನು ಗುಣಪಡಿಸಲು ತಾಳ್ಮೆ ಮತ್ತು ದೀರ್ಘಕಾಲದ ಚಿಕಿತ್ಸೆ ಅಗತ್ಯ. ಇವೆಲ್ಲವುಗಳ ಹೊರತಾಗಿಯೂ ಕಪೋಲಕಲ್ಪಿತ, ಅವಾಸ್ತವಿಕ ಭಯಗಳನ್ನು ಪರಿಗ್ರಹಿಸಬಹುದಾದ ಆಶಾದಾಯಕ ಸ್ಥಿತಿಯೂ ಇದೆ. ಇಂತಹ ರೋಗ ಲಕ್ಷಣ ಇರುವವರು ಸಾಧ್ಯವಾದಷ್ಟು ಉತ್ತಮ ಮನೋವೈಜ್ಞಾನಿಕರಿಂದ ಚಿಕಿತ್ಸೆ ಪಡೆಯಬೇಕು. ಅದೇನೇ ಇದ್ದರೂ ಮನುಷ್ಯ ವರ್ಗ ಸೇರಿದಂತೆ ಪ್ರಾಣಿಗಳ ಪ್ರಪಂಚದಲ್ಲಿ 'ಭಯ' ಎಂಬುದನ್ನು ಸಂಪೂರ್ಣವಾಗಿ ನಿವಾರಿಸಬಹುದು ಎಂಬುದು ಅವಾಸ್ತವಿಕ. ಅನಗತ್ಯವೂ ಹೌದು. ಭಯವನ್ನು ಚಿಕಿತ್ಸೆಯಿಂದ ನಿವಾರಿಸಬಹುದು. ಆದರೆ ನಮಗೆ ಭಯವೇ ಇಲ್ಲ ಎಂದಾದರೆ ಆಸೆ ಗುರಿಗಳೇ ಇಲ್ಲವೆಂದು ಅರ್ಥ. ನಾವು ಆಶಾವಾದಿಗಳಾದಾಗ ಜೀವನದ ಮಾರ್ಗದಲ್ಲಿ ಗುರಿ ಮುಟ್ಟದ ಭಯ ಇದ್ದೇ ಇರುತ್ತದೆ. ಅದೇ ನಮ್ಮನ್ನು ಮಾರ್ಗದಲ್ಲಿ ಮುನ್ನಡೆಯಲು ಪ್ರಚೋದಕವಾಗುತ್ತದೆ. ಆದರೆ ಅದು ಅತಿಯಾಯಿತೋ ಮಾರ್ಗ ಕ್ರಮಿಸುವ ನಮ್ಮ ವಾಂಛೆಯೆ ಕುಂಠಿತವಾಗುತ್ತದೆ. ಔಷಧಿ;ಅತಿಯಾದರೆ ವಿಷ; ಮಿತವಾದರೆ ನಿಷ್ಪ್ರಯೋಜಕ ಎನ್ನುವುದನ್ನು ಮರೆಯುವಂತಿಲ್ಲ.

ಸಂಗ್ರಹ : **ಸಂಗಾತಿ**

# ಸ್ವಾಭಿಮಾನಿ ಹುಡುಗಿ :

ನಮ್ಮ 'ಕಾರ್'ಪುಟ್ಟದಾದ, ಚೊಕ್ಕವಾದ ಮನೆಯ ಮುಂದೆ ನಿಂತಾಗ 'ಆಡಂಬರಕ್ಕೆ ಮಾರು ಹೋಗದ ಜನ' ಎಂದು ಮನಸ್ಸಲ್ಲೇ ಅಂದುಕೊಂಡು ಕಾರಿನಿಂದ ಇಳಿದೆನು. ಅಪ್ಪ, ಅಮ್ಮ, ಅಣ್ಣ, ಅತ್ತಿಗೆ ಮತ್ತು ದೊಡ್ಡಕ್ಕರವರು ಕಾರಿನಿಂದ ಇಳಿಯುತ್ತಾ ಇರುವಾಗಲೇ ಸ್ವಾಗತಿಸಲು ಬಂದ ಸಾವಿತ್ರಿ ಆಂಟಿಯ (ಈಗ ನನ್ನ ಭಾವೀ ಅತ್ತೆಯವರು) ಮುಖದಲ್ಲಿ ನಗು ಹೊಮ್ಮಿತು. ಹಿಂದೆಯೇ ಸದಾಶಿವರಾಯರು (ಭಾವೀ ಮಾವನವರು) ನಗುತ್ತಲೇ ನಮ್ಮನ್ನು ಮನೆಯೊಳಕ್ಕೆ ಆಹ್ವಾನಿಸಿದರು. ನನ್ನಪ್ಪನ ಬಾಲ್ಯ ಸ್ನೇಹಿತರಾಗಿದ್ದ ಇವರಿಗೆ ಮದುವೆಯ ವಯಸ್ಸಿಗೆ ಬಂದ ಮಗಳಿದ್ದಾಳೆ ಎಂದು ತಿಳಿದದ್ದೇ ನನಗೆ ಎರಡು ದಿವಸಗಳ ಹಿಂದೆ. ಸ್ನೇಹಿತರಾಗಿದ್ದವರು ನಮ್ಮ ಸಂಬಂಧಿಗಳಾಗಲು ಮುಂದೆ ಬಂದಿರುವ ವಿಷಯ ಎಲ್ಲರಲ್ಲೂ ಹರ್ಷ ತಂದಿತು.

"ಹುಡುಗಿ ಹೇಗಿರುವಳೊ...?" ಎಂದು ಪುನಸ್ಸ ಆಲೋಚಿಸುತ್ತಿರುವಾಗ ದೊಡ್ಡ ಜರಿಯಂಚಿನ ಸೀರೆಯುಟ್ಟು, ಮುಗುಳ್ನಗುತ್ತಾ "ನಮಸ್ತೆ" ಎಂದುಸುರುತ್ತಾ ಬಂದವಳನ್ನು ನೋಡಿ ನಿಬ್ಬೆರಗಾದೆ !! ಮಗಳಿರುವ ವಿಷಯ ತಿಳಿದದ್ದೇ, 2 ದಿವಸಗಳ ಹಿಂದೇ ಇಷ್ಟೊಂದು ರೂಪವತಿ ಎಂದು ತಿಳಿದದ್ದು ಈ ಕ್ಷಣವೇ ಅಬ್ಬಾ!! ನಾನೇ ಒಂದು ಕ್ಷಣ ರೋಮಾಂಚಿತನಾದೆ. ಅವಳಲ್ಲಿ ನೆಟ್ಟಿದ್ದ ದೃಷ್ಟಿಯನ್ನು ಅಲ್ಲಿಂದ ಕೀಳಲು ಸಾಧ್ಯವಾಗದೆ ಚಡಪಡಿಸುತ್ತಾ ಅವಳ ಸೊಂಟದವರೆಗೆ ಲಾಸ್ಯವಾಡುತ್ತಿದ್ದ ಉದ್ದ ಕೇಶರಾಶಿ, ಎಣ್ಣೆ ಕಪ್ಪಾದರೂ ಲಕ್ಷಣವಾದ ಮುಖ ಹೊಳೆಯುತ್ತಿದ್ದ ಆ ಎರಡು ನೇತ್ರಗಳು ಸಂಪಿಗೆಯಂತಹ ಮೂಗು, ಕೆಂಪಗಿನ ತುಟಿ, ಎತ್ತರಕ್ಕೆ ಸರಿಯಾದ ಮೈಕಟ್ಟು ಜೊತೆಗೆ ತೊಟ್ಟಿದ್ದ ಕೆಲವು ಆಭರಣಗಳು ಸುಂದರ ಮೆರಗನ್ನು ಹೆಚ್ಚಿಸುವಲ್ಲಿ ಸಫಲವಾಗಿದ್ದವು. ಮದುವೆಯ ಬಗ್ಗೆ ತಲೆಕೆಡೆಸಿಕೊಳ್ಳದಿದ್ದ ನಾನು ಇಂದು ಸಂಪೂರ್ಣ ಶರಣಾಗತನಾಗಿಬಿಟ್ಟಿದೆ. ಅಕ್ಕ ಮತ್ತು ಅತ್ತಿಗೆಯತ್ತ ಹುಸಿನೋಟ ಹರಿಸಿದಾಗ ನಮ್ಮ ಸಂಸಾರಕ್ಕೆ ಸರಿಯಾದ ಆಯ್ಕೆ ಎಂಬಂತಿತ್ತು ಅವರ ಮುಖ ಚಹರ.

ನಮ್ಮದು ಸಂಪ್ರದಾಯಸ್ಥ ಕೂಡು ಕುಟುಂಬ. ನಮ್ಮ ದೊಡ್ಡಪ್ಪನಿಗೆ 5 ಜನ ಮಕ್ಕಳು. ಅಲ್ಲದೆ ನನಗೂ ಮೂವರು ಅಣ್ಣಂದಿರು ಮತ್ತು ಒಬ್ಬಳು ಅಕ್ಕ. ಎಲ್ಲರಿಗಿಂತ ಚಿಕ್ಕ ಹುಡುಗ ಎಂದರೆ ಕಿರಿಯವನಾದ ನಾನೇ...... ತುಂಬು ಸಂಸಾರ. ಮತ್ತು ಅವರ ಮುದ್ದು ತಮ್ಮನಾಗಿ ಪ್ರೀತಿಯಲ್ಲಿ ಬೆಳೆದ ನಾನು ಹೆಚ್ಚಿನ ವ್ಯಾಸಂಗಕ್ಕಾಗಿ ಇವರನ್ನೆಲ್ಲಾ ಆಗಲಿ ವಿದೇಶಕ್ಕೆ ಹೊರಟಾಗ ಚಿಕ್ಕ ಮಗುವಿನಂತೆ ಅತ್ತಿದ್ದೆ. ಅಲ್ಲಿನ ವಿಧ್ಯಾಭ್ಯಾಸ ಮುಗಿಸಿ ಬಂದು ಇಲ್ಲಿಯೇ ಪ್ರತಿಷ್ಟಿತ ಕಂಪೆನಿಯಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದೆನು. ಮನೆಯಿಂದ ಸ್ವಲ್ಪ ದೂರವಿದ್ದರೂ ನಾನು ಪ್ರತೀ ದಿನ ಮನೆಯಿಂದಲೇ ಹೋಗಿ ಬರುತ್ತಿದ್ದೆ. ಎಷ್ಟು ದಿನ ತಾನೆ ಚಿಕ್ಕವನಾಗಿರಲು ಸಾಧ್ಯ? ಮೊನ್ನೆ ನನ್ನಮ್ಮ ಮೆಲ್ಲನೆ ನನ್ನನ್ನು ಕರೆದು ಮದುವೆಯ ವಿಷಯಕ್ಕೆ ಪೀಠಿಕೆ ಹಾಕಿದರು.ಸದಾಶಿವರಾಯರ ಬಗ್ಗೆ ತಿಳಿಸಿ ನಿಮ್ಮಪ್ಪ ಬಿಸ್ಸಿನೆಸ್ಸಿನತ್ತ ಒಲವು ಮೂಡಿಸಿದ್ದರೆ ಅವರು ಪತ್ರಿಕಾ ರಂಗದತ್ತ ಹೊರಳಿದರೆಂದೂ ಪ್ರತಿಷ್ಟಿತ ಸ್ವಾಭಿಮಾನಿ ಪತ್ರಿಕೆಯ ಸಂಪಾದಕರೆಂದರು. ಹೆಚ್ಚಿನ ಪ್ರಶ್ನೆಯನ್ನು ನಾನೂ ಹಾಕಲಿಲ್ಲ. ಅವರೂ ಹೆಚ್ಚಿನದಾಗಿ ಏನೂ ಹೇಳಲಿಲ್ಲ. ಅಂತೂ ಇಂದು ಪ್ರಥಮ ವಧು ಪರೀಕ್ಷೆಗೆ ಆಗಮಿಸಿ ಸಂಪೂರ್ಣ ಸೋತಿದ್ದೆ.

ಮಾತುಕತೆಗಳೊಂದಿಗೆ ಊಟದ ಕಾರ್ಯಕ್ರಮವೂ ಮುಗಿಯಿತು. ಅಷ್ಟರಲ್ಲಿ ನನ್ನ ಅಂತರ್ಯವನ್ನು ಗ್ರಹಿಸಿದ ನನ್ನ ಭಾವೀ ಮಾವನವರು "ಪ್ರತೀ" ಎಂದು ತಮ್ಮ ಸುಪುತ್ರಿಯನ್ನು ಕರೆದು, "ನೋಡಮ್ಮ ಪ್ರವೀಣ್ ಜೊತೆ ಏನಾದರೂ ಮಾತನಾಡಬೇಕೆಂದರೆ....ಅವನನ್ನು ರೂಮಿಗೆ ಕರೆದುಕೊಂಡು ಹೋಗಿ ಮಾತಾಡು ಎಂದರು. ಅದಕ್ಕೆಂದೇ ಕಾತರಿಸುತ್ತಿದ್ದ ನಾನು ಎದ್ದು ನಿಂತಾಗ, ಸೀರೆ ಕಳಚಿ ಚೂಡಿದಾರ್‌ನಲ್ಲಿ ಬಂದ ಆಕೆಯನ್ನು ನೋಡಿ ಮತ್ತೊಮ್ಮೆ ಬೆಚ್ಚಿ ಬೀಳುವ ಸರದಿ ನನ್ನದಾಗಿತ್ತು ಆಕೆ ಮೆಟ್ಟಿಲೇರುತ್ತಾ ಮಹಡಿಯತ್ತ ಧಾವಿಸಿದಾಗ ನಾನು ಆಕೆಯನ್ನು ಹಿಂಬಾಲಿಸಿದೆ. ಬಾಗಿಲನ್ನು ತೆರೆದು ಕಣ್ಸನ್ನೆಯಿಂದಲೇ ರೂಮಿನೊಳಗೆ ಆಮಂತ್ರಣ ನೀಡಿದಾಗ, ಅವಳು ರೂಮನ್ನು ಇಟ್ಟಿದ್ದ ರೀತಿ ನನ್ನ ಮನಸೂರೆಗೊಂಡಿತು. ಪುಸ್ತಕಗಳನ್ನು ಜೋಡಿಸಿಟ್ಟ ರೀತಿ, ಶಿಸ್ತಾಗಿ ಕುಳಿತಿದ್ದ ಪೆನ್ನುಗಳು ಏನೋ....... ಬರೆದಿಟ್ಟಿದ್ದ ಹಾಳೆಗಳು ಅದರೊಂದಿಗೆ "ಸ್ವಾಭಿಮಾನಿ" ಎಂದು ಬರೆದು ಪೇಂಟ್ ಮಾಡಿದ್ದ ಒಂದು ಚಿತ್ರ ಇತ್ಯಾದಿಗಳು ಆಕೆಯಲ್ಲಿನ ಶಿಸ್ತು, ಸ್ವಾಭಿಮಾನಿತನವನ್ನು ತೋರ್ಪಡಿಸುತ್ತಿತ್ತು. ನಾನು ಹೇಗೆ ಪ್ರಾರಂಭಿಸಲಿ ಎಂದು ಯೋಚಿಸುತ್ತಿದ್ದಾಗ ಆಕೆಯೇ....

"ಹಲೋ.......ಮಿಸ್ಟರ್" ಎಂದು ಮುಂದಕ್ಕೆ ಪ್ರಶ್ನಾರ್ಥಕವಾಗಿ ನನ್ನತ್ತ ನೋಡಿದಳು ನಾನು "ಪ್ರವೀಣ್" ಎಂದೆ. "ಹಾಂ! ಮಿಸ್ಟರ್ ಪ್ರವೀಣ್ ಐಯಾಮ್ ಪ್ರತೀಕ್ಷಾ" ಎಂದಳು ಅರೇ, ಇವಳ ಹೆಸರೂ ನನಗೆ ಗೊತ್ತಿರಲಿಲ್ಲವಲ್ಲಾ ಎಂಬ ಸತ್ಯ ಅರಿವಾದದ್ದು ಆವಾಗಲೇ.....ನನ್ನ ಬೆಪ್ಪತನಕ್ಕೆ ನಾನು ಮನಸ್ಸಲ್ಲೇ ಕಸಿವಿಸಿಕೊಂಡೆನಾದರೂ ತೋರ್ಪಡಿಸಿಕೊಳ್ಳಲಿಲ್ಲ. ಪುನಃ ಆಕೆಯೇ......... ನೋಡು ಪ್ರವೀಣ್, ನಿಮ್ಮದು ತುಂಬು ಸಂಸಾರ, ಆದರೇ ನಾನು ಒಂಟಿ ಹಕ್ಕಿ, ನಮ್ಮಪ್ಪ ಅಮ್ಮನವರ ಏಕೈಕ ಪುತ್ರಿ. ಅಣ್ಣ, ತಮ್ಮ, ಅಕ್ಕ ತಂಗಿ, ಯಾರೂ ಇಲ್ಲ ಆದರೂ ನನಗೆ ಹೇಗೆ ಹೊಂದಿಕೊಂಡು ಬದುಕಬೇಕು ಎಂಬುದರ ಬಗ್ಗೆ ಅರಿವಿದೆ. ಜೊತೆಗೆ ನನ್ನ ಸಂಗಾತಿಗಳಾದ ಪೆನ್ನು, ಪೇಪರು ಸದಾ ನನ್ನೊಂದಿಗಿರುತ್ತವೆಯಲ್ಲಾ" ಎಂದು ನಕ್ಕಾಗ, ನಾನು ಸ್ವಲ್ಪ ಗಲಿಬಿಲಿಗೊಂಡೆ. ಅದನ್ನ ಅರ್ಥೈಸಿಕೊಂಡಾಕೆ "ಹಾಗಲ್ಲಾ ಪ್ರವೀ, ನಾನು ಸಮಯವಿದ್ದಾಗ ಕತೆಕವನ ಚಿಕ್ಕ ಲೇಖನ ಹೀಗೇ ನನ್ನನ್ನೇ ಇಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಬಿಡ್ತೇನೆ ಅಷ್ಟೇ! ಇದರಿಂದ "ನಿಂಗೇನೂ" ತೊಂದರೆ ಆಗಲ್ಲ" ಎಂದು ಮಂದಹಾಸ ಚೆಲ್ಲಿದಾಗ ನಾನವಳ ವಾಕ್ಚಾತುರ್ಯಕ್ಕೆ ಬೆರಗಾದೆ. ಮೊದಲ ನೋಟದಲ್ಲೆ ಮಾತೇ ಬರುವುದಿಲ್ಲವೇನೋ ಎಂದು ಭಾವಿಸಿದ್ದ ನನಗೆ ಇವಳು ನಾನು ತಿಳಿದಷ್ಟು "ಬುದ್ದು" ಅಲ್ಲ ಎಂದು ಈಗ ತಿಳಿಯಿತು.

ಇವಳು ಇಷ್ಟು ಮಾತನಾಡುವಾಗ ನಾನು ಒಂದಾದರೂ.... ಮಾತನಾಡದಿದ್ದರೇ..... ಹೇಗೆ? ಕೊನೆಗೆ ಇವಳೇ ನನ್ನನ್ನು "ಮೂಗ" ಎಂದು ತಿಳಿದುಕೊಳ್ಳಬಹುದೆಂದು ಭಾವಿಸಿ, ಆಕೆ ನನ್ನನ್ನು ಮೊದಲ ಬಾರಿಗೆ "ಏಕ ವಚನದಲ್ಲಿ" ಸಂಭೋದಿಸಿದ್ದನ್ನು ನೆನೆಸುತ್ತಾ...ನಾನೂ ಕಡಿಮೆಯಿಲ್ಲವೆಂಬಂತೆ, " ನೋಡು ಪ್ರತೀಕ್ಷಾ ನಿನ್ನ ಹವ್ಯಾಸಕ್ಕೆ ಏನೂ ತೊಂದರೆಯಿಲ್ಲ. ತುಂಬು ಸಂಸಾರ ಆದರೂ ಕೆಲಸಕ್ಕೆ ಆಳುಗಳು ಇದ್ದಾರೆ. ಹೊಂದಿಕೊಂಡು ಹೋಗಬಲ್ಲೆ ಎಂಬ ಭರವಸೆ ನಿನಗಿದೆ. ಆದರೇ......... ಅದು ಅಷ್ಟು ಸುಲಭವಲ್ಲ. ಎಂದೆ ಏಕೆಂದರೇ ಮೊದಲೇ ನನ್ನನ್ನು ಏಕ ವಚನದಲ್ಲಿ ಕರೆದ ಅಂಶ ನನ್ನ ಗಮನಕ್ಕೆ ಬಂದಾಗ ನನ್ನೊಂದಿಗೇ

ಅಹಂಕಾರವೇ ವ್ಯಕ್ತಿಯ ಹಿನ್ನಡೆಗೆ ಅತೀ ಮುಖ್ಯ ಕಾರಣ

....... ಹೀಗಾದರೇ ಹಿರಿಯರೊಂದಿಗೆ ಈಕೆ ಹೇಗೆ ಹೊಂದಿಕೊಂಡಾಳು? ಎಂಬ ಪ್ರಶ್ನೆ ನನ್ನಲ್ಲಿ ಮೂಡಿತ್ತು. "ಅದನ್ನು ಆಮೇಲೆ ನೋಡೋಣ" ಎಂದು ದೃಢವಾಗಿ ನುಡಿದು, ನನ್ನ ಸಂದೇಹವನ್ನು ಗ್ರಹಿಸಿ ಆಕೆ ತನ್ನ ನಿರ್ಧಾರವನ್ನು ನಂತರ ಪ್ರಕಟಿಸುವುದಾಗಿ ನುಡಿದಾಗ ನನಗೇನೂ ಹೇಳಲಾಗಲಿಲ್ಲ. ಆದಷ್ಟು ಬೇಗ ಮದುವೆಯೇ ಮುಗಿದುಹೋಗಲಿ ಎಂದು ಉತ್ಸಾಹದಿಂದ ಇದ್ದ ನನಗೆ ಸ್ವಲ್ಪ ಆಶಾಭಂಗವಾಯ್ತು. ಅದನ್ನು ಬದಿಗೊತ್ತಿ "ಅದಕ್ಕೇನಂತೆ, ಆರಾಮವಾಗಿ ತೀರ್ಮಾನ ತೆಗೆದುಕೊ ಎಂದೆ. ಹೇಗಿದ್ದರೂ ಇವಳು ನನ್ನವಳು ತಾನೆ ಎಂದು ಮನಸ್ಸು ಅಂಗೀಕರಿಸಿಯಾಗಿತ್ತಲ್ಲಾ ಅದಕ್ಕೆ".

ನಮ್ಮಿಬ್ಬರ ತೀರ್ಮಾನದ ನಂತರ ಕಾರ್ಯಕ್ರಮ ಮುಂದುವರಿಸುವುದಾಗಿ ಹೇಳುತ್ತಾ ಅವರು ಆತ್ಮೀಯವಾಗಿ ಬೀಳ್ಕೊಟ್ಟಾಗ ನನ್ನರಗಿಣಿಯನ್ನು ಆದಷ್ಟು ಬೇಗ ಪಡೆದುಕೊಳ್ಳಬೇಕೆನ್ನುತ್ತಾ ಕಾರ್ ಸ್ಟಾರ್ಟ್ ಮಾಡಿದೆ.

ಎರಡು ದಿವಸ ಬಿಟ್ಟು ಅವಳ ಮನೆಗೆ ಫೋನ್ ಮಾಡಿದೆ. ಅವಳೇ "ಪ್ರತೀಕ್ಷಾ ಹಿಯರ್"ಎಂದಾಗ ಹಿಗ್ಗಿ ಹೀರೇಕಾಯಿಯಾದೆ. "ನಾನು ಯಾರಾಗಿರಬಹುದು"? ಗೆಸ್ ಎಂದೆ. ನನ್ನ ಸ್ವರವನ್ನು ಕಂಡು ಹಿಡಿದ ಅವಳು ನೀನಾ? ಎಂದಳು. "ಅಂದರೇ? "ನಾನು ಮರು ಪ್ರಶ್ನಿಸಿದೆ. "ಪ್ರವೀ" ಎಂದಳು. ನಾನು ಜೋರಾಗಿ ನಗಾಡಿದೆ. ಅಷ್ಟರಲ್ಲಿ ಅವಳಿಂದ ನೀನು ಆಫೀಸಿನಿಂದ ಮಾತಾಡ್ತಾ ಇದ್ದೀಯಾ? " ನಿಂದು ಊಟ ಆಯ್ತಾ?" ಇತ್ಯಾದಿ ಪ್ರಶ್ನೆಗಳು ಬಾಣಗಳಂತೆ ಎರಗಿದವು. ನಾನು ಈ ಏಕವಚನಗಳ ಮಹಾಪೂರದಲ್ಲಿ ಕೊಚ್ಚಿ ಹೋಗ್ತಾ ಇದ್ದೀನೇನೊ ಅನ್ನಿಸಿಬಿಡ್ತು. "ಯಾಕೆ ನೀನು ಮಾತಾಡ್ತಾ ಇಲ್ಲಾ?" ಎಂದು ಪುನಃ ಆತಂಕದಿಂದ ಪ್ರಶ್ನಿಸಿದಾಗ "ಪ್ರತೀ ಇಂದು ಸಂಜೆ ನಾಲ್ಕು ಗಂಟೆಗೆ ಹೋಟೆಲ್ "ಚಾಣಕ್ಯ" ಕ್ಕೆ ಬಾ ನಾನಲ್ಲಿ ಕಾಯ್ತಾ ಇರ್ತೀನಿ. ಅಲ್ಲಿ ಮಾತನಾಡೋಣ" ಎಂದು ಹೇಳಿ ಫೋನಿಟ್ಟುಬಿಟ್ಟೆ.

ಸಮಯಕ್ಕೆ ಸರಿಯಾಗಿ ಹಾಜರಾದಾಗ ಅವಳ ಸಮಯ ಪ್ರಜ್ಞೆಗೆ ಮೆಚ್ಚಿದೆ. ತಿಂಡಿಗೆ ಆರ್ಡರ್ ಮಾಡಿ, ಇವಳಿಗೆ ಹೇಳಬೇಕೆಂದಿರುವ ವಿಷಯವನ್ನು ಸ್ಪಷ್ಟವಾಗಿ ಹೇಳಬೇಕೆಂದು ತೀರ್ಮಾನಿಸಿ, "ಪ್ರತೀ, ನಿನ್ನ ಎಲ್ಲಾ ಗುಣಗಳೂ ನನ್ನ ಮನ ಗೆದ್ದಿವೆ. ಆದರೆ ನಿನ್ನ ಸಂಭೋದನೆ ಅಂದರೇ, "ಏಕ ವಚನದಲ್ಲಿ" ಕರೆಯುವ ರೀತಿಯಿದೆಯಲ್ಲಾ ಅದು ಸರಿಯಿಲ್ಲ ಏಕೆಂದರೆ ನಮ್ಮದು ನಿಂಗೆ ಗೊತ್ತಿರೋ ಹಾಗೆ ಸಂಪ್ರದಾಯ ಕುಟುಂಬ. ನನ್ನ ಅತ್ತಿಗೆಯಂದಿರು ಎಂದೂ ತಮ್ಮ ಗಂಡಂದಿರೊಂದಿಗೆ ಹೀಗೆ ನಡ್ಕೊಂಡಿರುವುದನ್ನು ನಾನು ಕಂಡಿಲ್ಲ, ಜೊತೆಗೆ ಅಪ್ಪ ಮತ್ತು ಅಮ್ಮ ಸಹ ಈ ನಿನ್ನ ಧೋರಣೆಗೆ ವಿರೋಧ". ನಾನು ಸಹ ಇದಕ್ಕೆ ಹೊರತಲ್ಲ. ನಾನು ಸದಾ ಗೌರವವನ್ನು ನಿರೀಕ್ಷಿಸ್ತೀನಿ. ಎಂದು ಚಿಕ್ಕ ಭಾಷಣವನ್ನೇ ಬಿಗಿದ. ಅದಕ್ಕೆ "ಹೌದೇನು?" ಎಂದಳು. ತಿಂಡಿ ತಿಂದು ಕಾಫಿ ಕುಡಿದೆವು. ನಾನು ಪ್ರಯೋಗಿಸಿದ ಬಾಣ ಆಕೆಗೆ ನಾಟಿದೆಯೆಂದು ಭಾವಿಸಿ, ಎಷ್ಟಾದರೂ ನನ್ನ ಆಶ್ರಯಿಸಿ ಬರುವವಳು ನನಗೆ ವಿಧೇಯಳಾಗಿಯೇ ಇರಬೇಕೆಂಬ ನನ್ನ ಮನೋಭಿಲಾಷೆ ಈಡೇರಿದ ಖುಷಿಯಲ್ಲಿ " ಮನೆಗೆ ಡ್ರಾಪ್ ಮಾಡ್ಲಾ?" ಎಂದು ಕೇಳಿದೆ. "ಥ್ಯಾಂಕ್ಸ್"" ನನ್ನ ಕೈನೆಟಿಕ್ ಇದೆಯಲ್ಲಾ?" ಎನ್ನುತ್ತಾ ಸ್ಟಾರ್ಟ್ ಮಾಡಿ ಬೈ...ಬೈ.... ಎಂದು ಹೊರಟಳು. ನಾನು ಏನೋ ಬೃಹತ್ ಸಾಧನೆಗೈದ್ದಂತೆ ಗರ್ವದಿಂದ ಮನೆಯತ್ತ ಕಾರೋಡಿಸಿದೆ.

ಮನೆಗೆ ಬಂದು ಬಟ್ಟೆ ಬದಲಾಯಿಸಿ ಕುಳಿತಾಗ "ಮೊಬೈಲ್" ನನ್ನನ್ನೆಚ್ಚರಿಸಿತು. "ಹಲೋ" ಎಂದಾಗ " ನಾನು ಪ್ರತೀಕ್ಷಾ" ಎಂದಳು. "ಕ್ಷೇಮವಾಗಿ ತಲುಪಿದ್ದಿ ತಾನೇ?" ಕಳಕಳಿಯಿಂದ ಪ್ರಶ್ನಿಸಿದೆ. "ನೀವೂ ಕ್ಷೇಮವಾಗಿ ತಲುಪಿದ್ದೀರಿ ತಾನೇ?" ಈ ವಾಕ್ಯ ಕೇಳಿ ನಾನೇ ದಂಗಾದೆ. ಅಬ್ಬಾ! ಇಷ್ಟು ಬೇಗ ಇವಳಲ್ಲಿ ಅದೇನು ಪರಿವರ್ತನೆ!! ನನ್ನ ಆಕಾಂಕ್ಷೆ ಇಷ್ಟು ಬೇಗ ಗುರಿ ಮುಟ್ಟಬಹುದೆಂದು ನಿರೀಕ್ಷಿಸದೇ ಇದ್ದ ನನಗೆ ದಿಡೀರ್ ಬಹುವಚನ ಕೇಳಿ ನನ್ನ ಮನ ಹೆಮ್ಮೆಯಿಂದ ಉಬ್ಬುತ್ತಾ, ಇತ್ತು, ಹೆಣ್ಣನ್ನು ತನಗೆ ಬೇಕಾದ ಹಾಗೆ ಬಗ್ಗಿಸಬಹುದೆಂಬ ನನ್ನ ಊಹೆ ನಿಜವಾಯ್ತು ಎಂದು ಯೋಚಿಸುತ್ತಿದ್ದವನನ್ನು ಪುನಃ "ಪ್ರವೀಣ್‌ರವರೇ ನೀವು ಏನೋ ತುಂಬಾ ಯೋಚಿಸ್ತಿರೋ ಹಾಗೆ ತೋರ್ತಿದೆ" ಎಂದವಳ ಸಂದೇಹಕ್ಕೆ ತಡಬಡಿಸಿ "ಏನಿಲ್ಲವೆ" ಎಂದೆ " ನಿಮ್ಮ ಜೊತೆ ಒಂದು ಮುಖ್ಯವಾದ ವಿಷಯ ಹೇಳಬೇಕಿತ್ತು" ಎಂದಳು ನಗುತ್ತಾ. ಅದಕ್ಕೆ ಮಾರ್ಮಿಕವಾಗಿ ನಕ್ಕ ಆಕೆ "ನೋಡಿ ಪ್ರವೀಣ್‌ರವರೇ ಆಂಗ್ಲ ಭಾಷೆಯಲ್ಲಿ ಒಂದು ಗಾದೆ ಇದೆ. ಗೊತ್ತಿದೆಯೇ "Give Respect and Take Respect" ಅಂದರೆ ಮೊದಲು ಗೌರವವನ್ನು ಕೊಟ್ಟು ಆನಂತರ ಗೌರವವನ್ನು ತೆಗೆದುಕೊಳ್ಳಬೇಕೆಂದು. "ಆದರೆ.......ನೀವು ತಾಳಿ ಕಟ್ಟುವ ಮೊದಲೇ ಇವಳು ವಿಧೇಯಳಾಗಿರಬೇಕು. ನನಗೇ ಗೌರವವನ್ನು ಕೊಡಬೇಕು ಎಂದು ಭಾವಿಸುವುದು ಮೂರ್ಖತನದ ಪರಮಾವಧಿ. ಗೌರವದ ಬಗ್ಗೆ ನಿಮಗೆ ನಿಜವಾಗಿಯೂ ಗೌರವವಿದ್ದರೆ ನನ್ನನ್ನು ನೀವು ಬಹುವಚನದಲ್ಲೇ ಮಾತನಾಡಿಸಬಹುದಾಗಿತ್ತು. ನೀವು ಪ್ರತಿಷ್ಠಿತ ಕೆಲಸದಲ್ಲಿರುವವರು ನಿಮ್ಮ ಕೈ ಕೆಳಗಿನವರು ನಿಮಗೆ ಗೌರವ ನೀಡಬೇಕೆಂಬುವುದು ನಿಮ್ಮ ಅಭಿಲಾಷೆ ಆದರೆ...ಕೆಲವೊಂದು ವಿಷಯಗಳಲ್ಲಿ ನಿಮ್ಮ ಕೈ ಕೆಳಗೆ ದುಡಿಯುವವರೂ ನಿಮಗಿಂತ ಪ್ರತಿಭಾವಂತರಾಗಿರುತ್ತಾರೆ ಎಂಬ ಅಂಶವನ್ನು ನೆನಪಿಟ್ಟುಕೊಳ್ಳಿ. ನೀವು ಗೌರವ ಕೊಡಬೇಕಾಗಿರುವುದು ಕೇವಲ ವಯಸ್ಸಿಗಲ್ಲ, ಅವರಲ್ಲಿ ಹುದುಗಿರುವ ವ್ಯಕ್ತಿತ್ವಕ್ಕೆ, ನಾನು ಬೇಕೆಂದೇ ಏಕ ವಚನ ಪ್ರಯೋಗಿಸಿದೆ ಏಕೆಂದರೇ...ನಾನು ಮೆಚ್ಚುವುದು ನಿಮ್ಮ ಅಂತಸ್ತು, ರೂಪ, ಉದ್ಯೋಗವನ್ನಲ್ಲ, ನಿಮ್ಮಲ್ಲಿ ಹುದುಗಿರುವ ಆಕರ್ಷಕ ವ್ಯಕ್ತಿತ್ವವನ್ನು, ನಿಮ್ಮಲ್ಲಿ ಅಂತರ್ಗತವಾಗಿರುವ ವ್ಯಕ್ತಿತ್ವವನ್ನು ಪರೀಕ್ಷಿಸುವುದಕೋಸ್ಕರ ಈ ತಂತ್ರ ಹೂಡಿದೆ. ಇಷ್ಟೊಂದು ಸಣ್ಣ ವಿಷಯವನ್ನೇ, ನೀನು ನಿಮ್ಮ ಘನತೆಗೆ ತಕ್ಕುದಲ್ಲ ಎಂಬುವುದಾಗಿ ತಿಳಿಯುತ್ತೀರೆಂದು ನಾನು ಭಾವಿಸಿರಲಿಲ್ಲ. ನನಗೂ ನನ್ನದೇ ಆದ ಕೆಲವು ರೀತಿ-ನೀತಿಗಳಿವೆ. ನಾನೆಂದೂ ಯಾರನ್ನೂ ತುಚ್ಛವಾಗಿ ಕಾಣುವುದಿಲ್ಲ. ಚಿಕ್ಕ ಮಗುವಿನಿಂದಲೂ ಕಲಿಯಬೇಕಾದ ಅಂಶಗಳು ಬೇಕಾದಷ್ಟಿವೆ. ನಿಮ್ಮನ್ನು ಏಕವಚನದಿಂದ ನಾನು ಕರೆಯುತ್ತಿದ್ದೆ ನಿಜ. ಆದರೆ, ನಿಮ್ಮ ಬಗ್ಗೆ ನನಗಿದ್ದ ಗೌರವ, ನಂಬಿಕೆ ಎಂದೂ ಕಡಿಮೆಯಾಗಿರಲಿಲ್ಲ. ನೀವು ಗೆದ್ದಿರೆಂದು ಯೋಚಿಸುತ್ತಾ ಇರುವಾಗ ನಿಮ್ಮ ನಿಜ ಬಣ್ಣ ತಿಳಿಯಿತು. ಇದಕ್ಕೇನೋ, "ದೊಡ್ಡವರ ಸಣ್ಣ ಗುಣ" ಎನ್ನುವುದು. ಹಾಂ ಏನೇ ಇರಲಿ, ದಯವಿಟ್ಟು ಇನ್ನು ಮುಂದೆಯಾದರೂ ವಯಸ್ಸಿಗೆ ಬೆಲೆ ಕಟ್ಟದಿರಿ, ಕಿರಿಯರೆಂದು ಅಥವಾ ಕೆಳಗಿನವರೆಂದು ಕಡೆಗಣಿಸಬೇಡಿ, ಅದನ್ನೇ ಘನತೆಯೆಂದು ತಿಳಿಯಬೇಡಿ, ಎಲ್ಲರಂತೆ ನಾನೂ ಒಬ್ಬನು ಎಂಬಂಶವನ್ನು ಮನಸ್ಸಿಂದ ಹೊರ ಹಾಕದಿರಿ. ಆಗ ನಿಜವಾಗಿಯೂ ನಿಮ್ಮ ಬಗ್ಗೆ ಇರುವ ಗೌರವ ಇಮ್ಮಡಿಯಾಗುತ್ತದೆ. ನಿಮ್ಮ ಹುದ್ದೆಗೆ ನಿಮ್ಮ ವ್ಯಕ್ತಿತ್ವಕ್ಕೆ ಸ್ಪಷ್ಟ ಅರ್ಥ ಬರುತ್ತದೆ. ಮೊದಲು ಗೌರವ ಕೊಡಲು ಕಲಿಯಿರಿ. ಇತರರಿಂದ ನಿರೀಕ್ಷಿಸಬೇಡಿ ಆಗ ಗೌರವವೇ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ. ದಯವಿಟ್ಟು ಈ ಮೇಲಿನ ಅಂಶಕ್ಕೆ ಪ್ರಾಮುಖ್ಯತೆಯನ್ನು ನೀಡಿ, ಇನ್ನೂ............ನಿಮಗೆ ನಿಮ್ಮ ವಾದವೇ

16 ನೇ ಪುಟಕ್ಕೆ

15 ನೇ ಪುಟದಿಂದ

ಮೇಲಾಗಬೇಕೆಂದಾದರೆ, ಅಂತವರನ್ನು ಹುಡುಕಲು ಇಂದಿನಿಂದಲೇ ಪ್ರಯತ್ನಿಸಿ, ಆದರೆ ದಯವಿಟ್ಟು ನನ್ನ ಮನೆಯತ್ತ ದೃಷ್ಟಿ ಹರಿಸಬೇಡಿ, ಏಕೆಂದರೆ, ಗೌರವವನ್ನು ನಿರೀಕ್ಷಿಸದೆ ಇರುವ ಮತ್ತೊಬ್ಬ ಗಂಡು ನನಗೆ ಸಿಕ್ಕಿಯೇ ಸಿಗುತ್ತಾನೆಂಬ ನಂಬಿಕೆಯಿದೆ. ನನ್ನ ಭಾವನೆಯನ್ನು ಹಂಚಿಕೊಳ್ಳಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ನಿಮ್ಮ ದಾರಿ ನಿಮಗೆ ನನ್ನ ದಾರಿ ನನಗೆ ಗುಡ್ ಬೈ.........ನೋ ಮೋರ್ ಕ್ವಶ್ಚನ್ಸ್ ಪ್ಲೀಸ್........." ಎಂದು ಫೋನ್ ಡಿಸ್‌ಕನೆಕ್ಟ್ ಆದಾಗ...ನನ್ನ ಅಲ್ಪ ಬುದ್ಧಿಯ ಅರಿವಾಗಿ, ಗರ್ವ ಇಳಿಯುವಷ್ಟರಲ್ಲಿ ಉತ್ತಮ ಬಾಳ ಸಂಗಾತಿಯನ್ನು ಪಡೆಯುವ ಅದೃಷ್ಟ ಕೈ ಜಾರಿತ್ತು. ಗರ್ವ ನನ್ನ ನೋಡಿ ಗಹಗಹಿಸಿ ನಗುತ್ತಿತ್ತು.

*ಬರಹ : ಶಿಪ್ರ, ಕೊಡಗು, C/o ಬಾರಿಕೆ ಶಿರಿನ್ ತಿಮ್ಮಯ್ಯ ಅಯ್ಯಂಗೇರಿ ಗ್ರಾಮ, - 571 247*

# ಯಂ ಎ ಓದಿದ ಗೂಡೆ

ಕಮಲ ಗೂಡೆದ್ ಹಠ ಅಂದ್ರ ಒಂದೇ ಹಠ- ಯಂ. ಎ. ಪಾಸ್ ಮಾಡಕ್ಕುತ. ಆ ಮ್ಯಾಲನೆ ಮದುವೆ ಆಕು. ಯಿ ವರ್ಷ ಆಗೇ ಆಕುತ ಅವ್ವ ಅವ್ವ ಬೋಜಿದ್ ಹಠ. ಹಂಗಾಗಿ ಉಣ್ಣದೆ ತಿನ್ನದೆ ಉಪವಾಸ ಮಾಡ್ತ್. ನಿನ್ನವ್ವ ಅನ್ಯಾಯ ಆಗಿ ಉಪವಾಸ ಬಿದ್ದ್ ಸತ್ತದೆ ಕಮಲಾತ ಅವ್ವ ಅಪ್ಪ ಬೇಜಾರ್‌ಂದ್ ಹೇಳೀರು ಕಮಲಾ ಗೂಡೆನ ಉತ್ತರ ಎಂತತ ಗೊತ್ತುಟಾ?.......

ಅವ್ವ ಸತ್ತರೆ ಸಾಯಲಿ ಶುದ್ಧ ದಿನ ಮಾಡಿ ಲಾಯ್ಕ ತಿಂಬೋಣ!ತ ಬ್ಯಾರೆ ದಾರಿ ಕಾಣದೆ ಸೊಂಪ ಹೆಣಿಗೆ ಸಮಾಧಾನ ಮಾಡ್ತ್. 3 ದಿನ ಉಣ್ಣದ ಅವ್ವ ಉಂಡ್ ಉಪವಾಸ ಮುರ್ತ್.

ಒಂದೆ ಗೂಡೆ ಕೂಸು, ಬ್ಯಾರೆ ಮಕ್ಕ ಇಲ್ಲೆ ಅವುಕೆ. ಮಗ್ಳು ಅವುಳೆ, ಮಂಜ್ಞನು ಅವ್ವೆ. ಸ್ವಲ್ಪ ಒಂದ್ ತರಲಿ ಅವುಳು ಇದ್ದದ್‌ನ್ಸ ಹಂಗೆನೆತ ಹೇಳಕ್ಕ್. ಅದ್ ಹಂಗೆತ ಅವ್ವ ಮುಂದೆ ಹೆಂಗೆ ಹೇಳ್ದು. ಅಪ್ಪ ಅವ್ವಂದಿರ ಕೊಂಡಾಟದ ಹ್ಯಾಳೆಯ ಫಲತ ಕಂಡದೆ ಇದ್? ಆ ಮನೇಲಿ ಕಮಲ ಗೂಡೆದೆ ಕಟ್ಟ್ ಕಟ್ಟಳೆಗ.

ಚುಂಡಂಗೆ ಕಮಲಾ ಗೂಡೆತ್ತೇಳ್ರೆ ಎಲ್ಲಿಲ್ಲದ ಪ್ರಾಣ.ಬಾಲಶಿಕ್ಷೆಂದ ಹಿಡ್ದ್ ಹೈಸ್ಕೂಲ್ ತನ್ಕ ಕ್ಲಾಸ್‌ಮೇಟ್‌ಗ ಬ್ಯಾರೆ. ಬರಿ ಅಷ್ಟೆ ಅಲ್ಲಾ, ಬಸ್ ಮೇಟ್‌ಗ, ಪಾರ್ಕ್ ಮೇಟ್‌ಗ, ಸಿನಿಮಾ ಮೇಟ್‌ಗ ಆದ್ರೂ ಕಾಲೇಜ್‌ಗೆ ಬಂದ ಮ್ಯಾಲೆತ ಹೇಳಕ್ಕ್. ಕಮಲಾ ಗೂಡೆದ್ ಯಂ. ಎ. ಮುಗ್ತ್‌ಲೆ. ಆಗ ಚುಂಡನ ಯಂ. ಎಸ್ಸಿ ಮುಗ್ತ್. ಆಗ ಚುಂಡ ಕಮಲಾ ಗೂಡೆದ್ ಕಾರ್ ಡ್ರೈವರ್ ಆತ್. ಕಾಲೇಜಿಗೆ ತಂದ್ ಬುಡ್ದು, ಕಾಲೇಜ್ ಮುಗ್ದಂಗೆ ಮನ್ಗೆ ಬುಡ್ದು ಎಲ್ಲಾ ಅವ್ನ ಚಾಕ್ರಿ ಆತ್. ಕಮಲಾ ಮತ್ತೆ ಚುಂಡನ ಬಗ್ಗೆ ಅಲ್ಲಲ್ಲಿ ಗುಸು ಗುಸುತ್ತೇಳಿಕ್ಕೆ ಸುರ್ ಆತ್. ಚುಂಡ ನನ್ನ ಹಸ್ಬೆಂಡ್, ಅವ್ನೆ ನನ್ನ ಗಂಡ, ನಾವೀಬ್ಬರ್, ಮದ್ವೆ ಆದ್ನೆಂತ್ತೇಳಿ ಕಮಲ ಎಲ್ಲರ ಬಾಯಿನ ಮುಚ್ಚಿಸಿತ್.

ಈ ಮದ್ವೆಗೆ ಕಮಲನ ಅಪ್ಪ ಅವ್ವ ಎಲ್ಲವು ಒಪ್ಪಿದ್ದೊ. ಇದಕ್ಕೆ ಕಾರಣ ಇವಿಬ್ಬರ್‌ಸ ಪ್ರೀತಿಸ್ತ್ತಿದ್ದೊ. ಅಷ್ಟೆ ಅಲ್ಲಾ ಚುಂಡ ಹೇಳುವಂತ ಕಳಪೆ ಹೈದ ಅಲ್ಲಾ, ಎಲ್ಲಾ ದೃಷ್ಟಿಲೂ ಸರಿಯಾದ ಗಂಡ್‌ತ ಒಪ್ಪಿಗೆ ಆಗಿತ್ತ್. ಯಂ. ಯಸ್ಸಿ ಮಾಡ್ದ ಹೈದ ಬ್ಯಾರೆ, ವಿದ್ಯಾವಂತ, ಬುದ್ಧಿವಂತ, ನೀತಿವಂತ, ಸುಂಸ್ಕೃತ ಯೌವ್ವನದ ಮಾಮೂಲಿ ದುರಾಭ್ಯಾಸ ಯಾವ್ದು ಇತ್ತ್‌ಲೆ. ಅಷ್ಟೆ ಅಲ್ಲಾ ಹೇಳ್‌ವಂತ ಶ್ರೀಮಂತ ಅಲ್ಲದಿದ್ದರೂಸ ಹರ್ಷದ ಖರ್ಚಿಗೆ ಇರುವಷ್ಟ್ ಆಸ್ತಿ ಪಾಸ್ತಿ ಬ್ಯಾರೆ ಇತ್ತ್. ಚುಂಡನ ಅಳಿಯನಾಗಿ ಮಾಡಿ ಕಣಿಕ್ಕೆ ಇನ್ನು ಒಂದು ಬಲವಾದ ಕಾರಣ ಇತ್ತ್. ಚುಂಡಂಗೆ ಅವ್ವ ಇತ್ತ್‌ಲ್ಲೆ. ಇದ್ ಅಂತ ಇಂತ ಕಾರಣನೆ?

ಇವ್ನ ಕೈಲಿ ಅದ್ಯಾವ ಅತ್ತೆ ಬದ್‌ಕಕ್ಕ್? ಚುಂಡನ ಮದ್ವೆಯಾಗಲಿತ ಅವ್ವ ಗಂಡನೆದ್‌ರ್ಲಿ ಹೇಳ್ತ್. ಕಮಲೆನ ಮದುವೆಗೆ ಯಾಕೀಸ್ಟ್ ಅವಸರ ಯಾಕೆ? ಸಾವ್ ಹೇಳಿ ಕೇಳಿ ಬಂದದ್ಯಾ? ಇಂದ್ ಇದ್ದವು ನಾಳೆ ಇರ್ದುಲೆ. ಇರ್ದು ಒಬ್ಬಳ್ ಮಗ್ಳು ತಾಳಿ ಕಟ್ಟಿಸಿ ಕಂಬದನ್ನು ಕಣ್ತುಂಬ ನೋಡಿ ಸತ್ತರೆ ನಂಗೆ ಅದೆ ಸ್ವರ್ಗತ ಅವ್ವ ಹೇಳಿಕೆ ಸುರುಮಾಡ್ತ್.

ಇದ್ದವರ ಕೊರಗ್. ಹೆತ್ತ ಅವ್ವ ಇಂತ ಕ್ಷುಲಕ್ಕ ವಿಚಾರಗಳ್ಗೆ ಕೆಮಿ ಕೊಟ್ಟದ್ಯಾ?

ನಿನ್ನ ಸ್ವರ್ಗಕ್ಕೆ ಕಳ್ಸಿಕ್ಕೆ ನಾನ್ ಅಂಮ್ಸ್‌ರ ಆಗಿ ಮದ್ವೆ ಆಕ್ಕುತ ಇವ್ನು ಗ್ಯಾನ ಮಾಡಿಕಂಡ್ತ್ ಮನ್‌ಸ್‌ಲಿ.

ಕಮಲನ ಅವ್ವ ಅಷ್ಟೊಂದ್ ದಡ್ಡಿ ಅಲ್ಲ. ತಲೆಯೋಡಿಸಿ ಒಂದ್ ಹೊಸ ಉಪಾಯನ ಹುಡ್‌ಕಿತ್. ಗುಟ್ಟಾಗಿ ಬಾಕೆ ಹೇಳಿ ಕೆಮಿಲಿ ಎಂತಾದ್ದೊ ಮೆತ್ತಂಗೆ ಊದಿತ್.

ಅದೆಂಥ ಸುಡ್‌ಗಾಡ್ ಯಂ. ಎ. ಇವ್ಳುಗೆ. ಒಂದ್ಸಾರಿ ಅಲ್ಲಾ ಎರಡ್ ಸಲ ಅಲ್ಲಾ ಮೂರ್ ಸರ್ತಿ ಕುದ್ದತ್, ಹೋತ್. ಮದ್ವೆ ಫಸ್ಟ್ ಆಗ್ಲಿ ಬೇಕಾದರೆ ಮುಂದೆ ಓದಲಿತ ನೀನ್ ಹೇಳ್ ಚುಂಡತ ಅವಂಗೆ ದುಂಬಾಲ್ ಬಿತ್ತ್. ಚುಂಡಂಗೆ ಸರಿ ಕಂಡತ್ತ್. ಕಮಲೆನ ಒಟ್ಟಿಗೆ ಪ್ರಸ್ತಾಪ ಮಾಡ್ತ್.

ಮದ್ವೆ ಆದ ಮ್ಯಾಲೆ ಓದಿನೆ, ಮಕ್ಕಳಾದ ಮ್ಯಾಲೆ ಸಂಗೀತ ಇದ್ದದೆ. 3 ಸಲ ಅಲ್ಲಾ 30 ಸಲ ಕಟ್ಟನೆ. ಹಿಂಗೆ ಹೇಳ್ದ ಮ್ಯಾಲೆ ಚುಂಡಂಗೆ ಎಂತುಟ್ಟು ಹೇಳಿಕ್ಕೆ, ಕಮಲ ಹಠ ಹಿಡ್ದ ನಾಲ್ಕನೆ ಸರ್ತಿಗೆ ಯಂ. ಎ. ಪಾಸ್ ಮಾಡಿಯೆ ಬುಡ್ತು. ಮದ್ವೆ ಕಾಗ್ದಲಿ ಕಮಲ ಯಂ. ಎ. ಪಾಸ್‌ತ ಅಚ್ಚ್ ಹಾಕಿಸ್ತ್. ನೀವೆಲ್ಲಾ ಕುಡು ಕುಟುಂಬ ಸಂಸಾರಸ್ತರಾಗಿ ಬರಕ್ಕುತ ಅರೆ ಭಾಷೆಲಿ ಮುದ್ರಿಸಿತ್. ಅಪ್ಪನ ಹೆಸ್ರಂತೂ ಇಲ್ಲೆ. ಅವ್ವನ ಹೆಸ್ರ್ ಅಂತ್ ಮೊದ್ಲೆ ಇಲ್ಲೆ. ಕುಲ ಗೋತ್ರ ಒಂದ್ ಸಾವ್‌ಇಲ್ಲದೆ ಅಚ್ಚ್ ಹಾಕಿಸ್ತ್.

ಅಪ್ಪ ಹೆಣ್‌ಗೆ ಹೇಳ್ತ್. ನೋಡೆನೆ, ಕಾಲ ಬದಲಾಗುಟ್ಟು. ಅದಿಕ್ಕೆ ಹಿಂಗೆತ ಸಮಾಧಾನ ಮಾಡ್ತ್. ಆದ್ರೆ ಅವುಕ್ಕೆ ಇದ್ರಿಂದ ಸಮಾಧಾನ ಆತಾತ? ಇಲ್ಲೆ. ಕಮಲ ಗೂಡೆಗೆ ಈ ಪ್ರಶ್ನೆಯೆ? ಏಳ್ದುಲ್ಲೆ.

ಇಷ್ಟಾಕನ ಅಪ್ಪನು ಅವ್ವನು ಬ್ಯಾರೆ ಮನೆ ಮಾಡಿ ಅಡ್ಡೆ ಮಾಡಿಕ್ಕೆ ಸುರು ಮಾಡ್ದೊ. ಗೂರವು ಇದ್ದರೆ ಮನೆಯವುಕ್ಕೆಲ್ಲಾ ಕಷ್ಟ ತಾನೆ?

ಒಂದ್ ಬೆಳಿಗ್ಗೆ ಚುಂಡನ ಕರ್ದ್ ಕಮಲ ಹೇಳ್ತ್. ಬ್ಯಾಗ ರೆಡಿ ಆಗ್ ಚುಂಡ ಶಾಪಿಗೆ ಪೋಯಿ ಮನೆನ್ನೆಲ್ಲಾ ಸಿಂಗರಿಸಕ್ಕುತ ಡ್ರಾಯಿಂಗ್ ರೂಂಲಿ ಸೋಫಾ ಒಂದ್ ಇಲ್ಲೆ. ಎಲ್ಲಾ ನಿನ್ನ ಜ್ಞನ ಕಾಲದ್‌ತ ಅಳಿಯ ಹೇಳ್ತ್.

ಷಾಪಿಂಗ್‌ಗೆ ಹೋದ್ ಮಕ್ಕಳ ಕರಕ್ಕೊಂಡ್ ಹೋದಂಗೆ ಆತ್.

ಕಂಡಕಂಡದ್ದನ್ನೆಲ್ಲಾ ತಕ್ಕಂಣ್‌ತ್ತ್. ಡೈಮಂಡ್ ನೆಕ್‌ಲೇಸ್, ಜೋಮಾಲೆಸರ ರಾಗುಟಿ, ಡಾಬು, ಹೊಸ ಸೀರೆಗ ಅವುಕ್ಕೆ ಬೇಕಾದ ಡಿಸೈನ್, ಮ್ಯಾಚಿಂಗ್ ಬ್ಲೌಸು ಫೀಸ್‌ಗ, ಹೈ ಹೀಲ್ ಚಪ್ಪಲ್‌ಗ, ಸೋಫಾ ಸೆಟ್ಟ್, ಮತ್ತೆ ಇನ್ನೆಂತದ್ದೊ ಬಾತ್. ಆದ್ರೆ ಸ್ಕ್ರೀನ್ ಮತ್ತೆ ಸೋಫಾ ಸೆಟ್ ಬಾತಿಲ್ಲೆ ಹೇಳ್ ಚುಂಡಂಗೆ. ಚುಂಡ ಇಂದ್ ಎಲ್ಲಾ ಮಾಡಿಕೆ ಆತಿಲ್ಲೆ. ನಾಳೆ ನೂಸ ಬರೋನ. ಪಾಪ್ಯೂಲಫ್ ಹೋಟೆಲಿಲಿ ಕಾಫಿ, ಕೇಸರಿಬಾತ್ ಉಪ್ಪಿಟ್ಟ್ ಕಮಲಗೂಡೆ ತೀಂತ್. ಚುಂಡ 2 ಮಸಾಲೆ ದ್ವಾಸೆಗೆ

ಕುಣಪೊಜ್ಜಿ ಆಲ್‌ಗೆಂಡೆ ಪಲ್ಯಲಿ ತಿಂದ್ ಅಂದ್ ವಿಜಯಲಕ್ಷ್ಮಿ ಬಸ್ಸ್ ಹತ್ತಿ ಮನೆಗೆ ಬಂದೊ. ಬಂದಾಕ್‌ನ ಸಾಕ್ ಸಾಕಾಗಿ ಹೋತ್. ಇವ್ಳಗೆ ಕೊಂಬಾರೆಗೆ ಹೋಕನ ಕಟ್ಟಾಳೆ ಹೇಡ್ಗಿ ಬಿತ್ತ್. ಬಾಯಿಗೆ ಮಂಣ್ ಹಾಕತ್ತೇಳಿಕ್ಕಂಡ್ ಕಟ್ಲ್ ಮ್ಯಾಲೆ ದೊಪ್ಪತ ಬಿದ್ದ್‌ಕಂಡ್ ರೆಸ್ಟ್ ತಕ್ಕಂಡತ್. ಕತ್ತಲಾಕನ ಲೇಡಿಸ್ ಕ್ಲಬ್‌ಗೆ ಹೋತ್.

ಮತ್ತೆ ಇತ್ತ ಕಾರಿಲಿ ಬಂದ ಚುಂಡ ಮನೆಗೆ ಬಂದ್ ಸುಮ್ಮನೆ ಕುದ್ದತ್. ಕೂರ್‍ಕನ ಸಂಣದಾಗಿ ಕೆಮ್ಮು ಬಾತ್. ನಾಲ್ಕೈದ್ ಸಲ ಕೆಮ್ಮುತ ಹಂಗೆನೆ ಮಲ್ತ್‌ತ್. ಯಾಕೆ ಹಿಂಗೆ ಕೆಮ್ಮಿಕೆ ಕಾರಣ ಎನ್ನ್‌ತ್ತೇಳಿ ಗ್ಯಾನ ಮಾಡಿ ಕಂಡೆ ನಿದ್ದೆ ಹೋತ್.

ಮಾರನೆ ದಿನ ಹೋತ್ತಾರೆ ಕಮಲ ಬೇಗ ಎದ್ದ್ ರೆಡಿ ಆಗ್ ಚುಂಡ ಪೋಯಿತ್ ಕರ್ತ್. ಚುಂಡ ಕೇಳ್ತ್ ಎಲ್ಲಿಗೆತ ಮತ್ತಲ್ಲಿಗೆ ಹೋದು ಸುಡ್‌ಗಾಡಿಗೆನ ಷಾಪಿಂಗ್‌ಗೆ ಪೋಯಿತ್ ಕಮಲ ಹೇಳ್. ಹಿಂಗೆ ಒಂದಲ್ಲ ಒಂದು ತರದ ಕೆಲ್ಸ ಜ್ಯಾಸ್ತಿ ಆತ್. ದಿನ ಬೆಳೆಗಾದರೆ, ಈ ಮದ್ಯಲಿ ಎಂತಾತ್‌ತ್ತೇಳಿರೆ ಚುಂಡನೆ ಕೆಮ್ಮು ಠಸ್ ಪುಸ್‌ತ ಪುಟಾಕಿ ಹೊಡ್ದಂಗೆ ದಿನಂದಿನಕೆ ಹೆಚ್ಚಾತ್.

ಒಂದ್ ದಿನ ಕವಮಲ ಹೇಳ್ತ್. ಹಾಳಾದ ನಿಮ್ಮ ಕೆಮ್ಮ್‌ಲ್‌ದ ನಂಗೆ ರಾತ್ರಿ ಯೆಲ್ಲಾ ನಿದ್ದೆನೆ ಬಾತಿಲ್ಲೆ. ರಾತ್ರಿಯೆಲ್ಲಾ ಹೋರ್‍ಯಾಡಿ ಸಾಕಾತ್. ಅದರ ಮಧ್ಯೆ ನಿಮ್ಮ ಕಾಟ ಬ್ಯಾರೆತ ಸಿಟ್ಟ್‌ಲ್ ಹೇಳ್ತ್. ನಾಳೆಂದ ನೀವ್ ಬ್ಯಾರೆ ಕೊಂಬಾರೆಲಿ ಮಲ್ಗಿ ನನ್ನತ್ರ ಇದ್ರೆ ಸರಿ ಆಕಿಲ್ಲೆ.

ಚುಂಡಂಗೆ ಏನೋ ತಪ್ಪು ಮಾಡ್ದಂಗೆ ಆತ್. ಇಲ್ಲೆ ಕಮಲ ನಾನ್ ನಾಳೆ ನವೀನ್ ಡಾಕ್ಟರ್ ಹತ್ರ ಹೋಗಿ ತೋರಿಸ್ಕಂಡ್ ಬನ್ನೆತ ಹೆದ್ರಿಕ್ಕಂಡೆ ಹೇಳ್ತ್. ಕಮಲ ಒಂದ್ ಸರ್ತಿ ಕಣ್ಣ್ ಕೆಕ್ಕರಿಸ್ಕಂಡ್ ಚುಂಡನ ನೋಡ್ತ್‌ಮ್ಮೆ. ಸ್ವಲ್ಪ ಹೊತ್ತ್ ಕಳ್ದ್ ಮ್ಯಾಲೆ ಕಮಲ ಹೇಳ್. "ವಾಟ್ ಎ ನಾನ್‌ಸೆನ್ಸ್" ನಾನ್ ಷಾಪಿಂಗ್‌ಗೆ ಹೋಕಾ ಬೇಡತತ್ತೇಳ್ತ್.

ಕಡೆಗೂ ಚುಂಡಂಗೆ ಡಾಕ್ಟರ್‌ನ ಕಾಂಬಕ್ಕೆ ಆತ್‌ಲ್ಲೆ. ಕೆಮ್ಮ್ ದಿನಂದ ದಿನಕ್ಕೆ ಜಾಸ್ತಿ ಆಗ್‌ತ್ತ ಬಾತ್. ಸುಸ್ತು, ನಿತ್ರಾಣ, ಸೊಂಟಪುಳೆ, ಕಾಲ್‌ಪುಳೆ ಎಲ್ಲಾ ಸುರಾತ್. ಆಗೊಮ್ಮೆ ಈಗೊಮ್ಮೆ ಸ್ವಂಟ ಬಿದ್ದೊದಂಗೆ ಆದನೆ ಕಮಲ ಡಿಯರ್ ಏನ್ ಮಾಡ್ದುತ ಗೊತ್ತಾಗ್‌ತ್ತ ಇಲ್ಲೆತ ಹೇಳ್ಕೆ ಸುರಾತ್.

ಒಂದ್ ದಿನ ಕಮಲ ಹೇಳ್ತ್ ಚುಂಡಂಗೆ ನೀವ್ ಮನೇಲಿ ರೆಸ್ಟ್ ತಕ್ಕಣ. ನಿಮಿಗೆ ಬಾಳ ಕಷ್ಟ ಆದೆ. ಒಬ್ಬ ಡ್ರೈವರ್‌ನ ನೇಮ್ಕ ಮಾಡ್ರೆ ನಂಗೆ ಅಲ್ಲಿಲ್ಲಿ ಓಡಾಡಿಕೊ ಸ್ವುಲ್ಪ ಆದೆತ.

ಕಾರಿಗೆ ಒಬ್ಬ ವಸ ಡ್ರೈವರ್ ಬಾತ್. ಆದ್ರೆ ಚುಂಡಂಗೆ ವಸ ಡಾಕ್ಟರ್ ಬಾತಿಲ್ಲೆ. ಕಮಲಂಗೆ ಸಮಯ ಎಲ್ಲಿಟ್ಟು? ಲೇಡೀಸ್ ಕ್ಲಬ್ ಪ್ರೆಸಿಡೆಂಟ್ ಅವ್ಳೆ. ಮ್ಯಾನೆಜಿಂಗ್ ಕಮಿಟಿ ಸದಸ್ಯೆ. ಗವರ್ನರನ್ನ ಕಾಣಕ್ಕು ಪುರಸಭೆ ಪ್ರೆಸಿಡೆಂಟ್ ಕಾವೇರಮ್ಮನ ಕಾಣಕ್ಕು, ಅಲ್ಲಿ ಇಲ್ಲಿ ನಾಟ್ಯ ನೃತ್ಯ ಪ್ರದರ್ಶನ, ಭೋಜನಕೂಟ ಹಿಂಗಿಂಗೆ ಎಷ್ಟು ಭಿರ್‍ಯು ಕಮಲ. ಇಂಗ್ಲೀಷ್ ನಾಟಕಲಿ ಬಂದದೆಲ್ಲಾ ಒಥೆಲೊ ಅವ್ಳೆ ಆಗಿಟ್ಟು ಈಗ.

ಒಂದ್ ದಿನ ಆಚೆ ಮನೆಂದ ಒಬ್ಬು ಹೆಂಗ್ಸ್ ಬಾತ್. ಏನ್ ಬೇಕಾಯ್‌ತ್ತ ಅವ್ಳು ಕೆಂಗೆಣ್ಣಿನಿಂದ ನೋಡ್ತ್ ಕಮಲ. ನಂಗೇನ್ ಬೇಡ ಮಾರಾಯ್ತಿ ನಿನ್ನಗಂಡನ ವಿಷ್ಯ ಹೇಳಿಕ್ಕೆ ಬಂದೆತ ಹೇಳ್ತ್. ರಾತ್ರೆಲ್ಲ ಕೆಮ್ಮು ಹಗಲಿಡಿ ಕೆಮ್ಮು ಸ್ವಲ್ಪ ಡಾಕ್ಟರ್‌ಗೆ ತೋರ್‍ಸತ ರಾಗ ಏಳ್ತ್ ಆ ಹೆಂಗಸ್ಸ್ ಮೀನಾಕ್ಷಿ. ಕಮಲೆಗೆ ಬಾಳ ಅಪಮಾನ ಆದಂಗೆ ಆತ್,

ನೀನ್ ಹೋರ್ಗೆ ಹೋಗ್. ಕೆಮ್ಮುದು ನನ್ಗಂಡ ತಾನೆ, ನಿನ್ಗಂಡಂತೂ ಅಲ್ಲಲ್ಲಾ. ನಂಗೆ ಇಲ್ಲದ ಉಸಾಬರಿ ನಿಂಗ್ಯಾಕೆತ ಸಿಟ್ಟ್‌ಲಿ ಹೇಳ್ದೆ.

ಅಯ್ಯೋ ಹುಚ್ಚಿ ಗೂಡೆ ನಿಂಗೆ ಸ್ವಯ್ಯ ಇಲ್ಲೆ. ನಿಂಗೆ ಹೇಳ್ದುಕ್ಕಿಂತ ಸುಮ್ಮನೆ ಇರ್‍ದು ಒಳ್ಳೆದ್‌ತ್ತೇಳಿ ಗುಣೆಸಿಕಂಡದೆ.

ಇದಾಗಿ ಒಂದೆರ್‌ಡ್ ದಿನಲಿ ಕಮಲ ಗಂಡಚುಂಡನ ಕರ್ಕಂಡ್ ಡಾಕ್ಟರ್ ನವೀನ್‌ನ ಹತ್ರ ಹೋದೊ. ಹೊಸ್ತಾಗಿ ಮದ್ವೆಯಾದ ಮ್ಯಾಲೆ ಡಾಕ್ಟರ್‌ನ ಕಂಡದ್ ಇದೆ ಮೊದ್ಲು. ಹೆಂಗೆವಳರಿ, ಏನ್ ಸಮಾಚಾರತ ವಿಚಾರಿದೆ ನವೀನ್.

ಎಸ್ಟ್ ದಿನಂದ ಉಟ್ಟು ಈ ಕೆಮ್ಮಲು? ಸುಮಾರ್ ಮೂರ್ ತಿಂಗಂದ ಉಟ್ಟು ಡಾಕ್ಟ್ರತ ಇವ್ಳೆ ಹೇಳ್ದೆ. ಇಷ್ಟ್‌ದಿನ ಏನ್ ಮಾಡ್ತಿದ್ದಿರಿತ ಕೇಳ್ದೆ. ಆಗಲೆ ಬಂದಿದ್ರೆ ಒಳ್ಳೆದಿತ್ತ್. ಚುಂಡ ಕಮಲನ ಮೊಕ ನೋಡ್ದೆ. ಕಮಲ ಸೂರ್‌ನ ನೋಡ್ತ್‌ತ್ತಿತ್ತ್. ಏಕ್ಸರೇ ಎಲ್ಲಾ ಆತ್. ಚುಂಡಂಗೆ ಗ್ಯಾಲಪಿಂಗ್ ಟಿಬಿ ಉಟ್ಟುತ ಡಾಕ್ಟರ್ ಹೇಳ್ದೆ. ಮೈಸೂರಿಲಿ ಬೃಂದಾವನ ರಸ್ತೆಲಿರುವ ಸ್ಯಾನಿಟೋರಿಯಂಗೆ ಸೇರಿಸಿತ ಡಾ. ನವೀನ್ ಹೇಳ್ತ್.

ಕಮಲೆ ಕುತ್ತಿಗೆನ ತಿರ್‍ವಿಕ್ಕಂಡ್ ನಂಗೆ ಪುರುಸೊತ್ತು ಇಲ್ಲೆ. ಡ್ರಾಮಾ ರಿಹರ್ಸಲ್ ಉಟ್ಟು, ಅಲ್ಲದೆ ನಮ್ಮ ಕ್ಲಬ್‌ನ ಆನಿವರ್ಸರಿ ಹತ್ರ ಬಾತ್. ಇನ್ನ್ ಸ್ಯಾನಿಟೋರಿಯಂ ಮನೆತ್ತೇಳಿ ನಂಗೆಲ್ಲಿ ಪುರುಸೊತ್ತ್ ಉಟ್ಟು. ಮನೇಲಿ ಇರ್‍ಲಿಡಾಕ್ಟ್ರತ ಕಟ್ಟಪ್ಪಣೆ ಮಾಡ್ತ್.

ಹೆಂಗಾರೆ ನೀವ್ ಬ್ಯಾರೆ ಡಾಕ್ಟ್ರನ ನೋಡಿ. ನಂಗೆ ಆದುಲೆತ್ತ ಹೇಳ್ದೆ. ದುಡ್ಡು ಬಿಸಾಡಿದ್ರೆ ನಿಮ್ಮಪ್ಪನಂತ ಡಾಕ್ಟರ್‌ಗ ಮನೆಗೆ ಬಂದವ್ವೆತ ಇವ್ಳು ಸಿಟ್ಟ್‌ಲಿ ಕೆಪ್ಪೆಗೆ ಹೋಡ್ದಂಗೆ ಹೇಳ್ತ್.

ಮನೇಲಿ ಒಂದ್ ಮೂಲೆ ಕೊಂಬಾರೆನೆ ಆಸ್ಪತ್ರೆ ಆತ್. ಇಬ್ಬುರ್ ನರ್ಸ್‌ಗ ಆರೈಕೆ ಮಾಡಿಕೆ ನಿಂತೊ. ಡಾ. ಪ್ರದೀಪ್‌ತ ವಸ ಡಾಕ್ಟರ್ ಮನೆಗೆ ಬಂದ್ ದಿನಾಲೂ ನೋಡ್ಕಂಡ್ ಟ್ರೀಟ್‌ಮೆಂಟ್, ಸಲಹೆಗಳ್ನ ಕೊಟ್ಟ್ ಹೋತಿತ್.

ಕಮಲೆಗೆ ಈಗ ಒಂದ್‌ತರ ಹೇಸಿಗೆ ವಾಕರಿಕೆ ಬಂದಂಗೆ ಆತಿತ್ತ್. ಪುರುಸೊತ್ತ್ ಎಲ್ಲಿಟ್ಟು ಪಾಪ ಇವ್ಳಗೆ. ಚುಂಡನ ಕೊಂಬಾರೆಗೆ ಬಾರದೆ ಎಂಟ್ ದಿನ ಆಗಿತ್ತ್.

ಅಂದ್ ಕ್ಲಬ್ ಡೇ ಆನಿವರ್ಸರಿ ಇತ್ತ್, ಗವರ್ನರ್ ಬಾಕೆ ಹತ್ತ್ ನಿಮಿಷ ಉಟ್ಟುತ ಮಹಿಳಾ ಮಣಿ ನಿರೂಪಣೆ ಮಾಡ್ವುವ ಶಾಂತಿ ಪೊನ್ನಪ್ಪ ಆಗಾಗ್ಯೆ, ಹೇಳ್ತಾ ಉಟ್ಟು. ಜನಂಗ ಬಂದ್ ಕುದ್ದೊಳೊ, ಗಣ್ಯರ್, ಅತೀ ಗಣ್ಯ ವ್ಯಕ್ತಿಗ, ರಾಜಕಾರಣಿಗ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷರ್‌ಗ, ವಿದ್ಯಾ ಸಂಘದ ಅಧ್ಯಕ್ಷರ್‌ಗ, ಮಹಿಳಾ ಅಧ್ಯಕ್ಷೆ, ಸಮಾಜದ ಅಧ್ಯಕ್ಷರ್ ಮತ್ತೆ ಅವರವರ ಪದಾಧಿಕಾರಿಗ ಇನ್ನ್ ಎಷ್ಟೊ ಸಂಘ ಸಂಸ್ಥೆಗಳ ಪದಾಧಿಕಾರಿಗ ಎಲ್ಲವು ಬಂದೋಳೊ. ಎಲ್ಲಾ ಕಡೆ ಗಡಿಬಿಡಿ ಆಗಿಟ್ಟು.

ಅತ್ತಂದ ನರ್ಸ್ ಕಡೆಂದ ಪೋನ್ ಬಾತ್, ಕೆಲವು ಮರ್‍ವವೆ, ಕೆಲವ್ ಹೇಳ್ವೆ. ಇಂತ ವಳ್ಳ ಹೈದಂಗೆ ಹಿಂಗೆ ಆಕಾಗ್‌ತ್ತ್. ಎಲ್ಲ ಅವರವರ ಹಣೆಬರಹತ. ಅಷ್ಟೈಲಿ ಜೋಡು ಗುಂಡು ಒಟ್ಟೊಟ್ಟಿಗೆ ಹೊಡ್ದ ಸಬ್ದ ಬ್ಯಾರೆ ಪೋನಿಲಿ ಕೇಳ್ಸಿದೆ ಕಮಲಂಗೆ.

ಯಾವ ಜನ್ಮದ ಶನಿಯೋ? ಏಳೇಳ್ ಜನ್ಮದ ಶನಿಕಾಟತ ಹೇಳ್ರೆ ಇದೆತ ಶಪಿಸಿಕಂಡದೆ ಇವ್ಳು. ಪಕ್ಕದ ಮನೆ ಹೆಂಗ್ಸ್ ಅದ್ಯಾವ ಬಾಯಿಲಿ ಹೇಳ್ತ್? ಪಾಪರ್‌ತ ಬಯ್ದ್ ಕಂಡತ್.

ಇತ್ತ ಗಂಡನ ಮನೇಲಿ ಹೆಂಗ್ಸರ್‌ಗ ಬಾಯಿಗೆ ಬಂದಂಗೆ ಒಂದೊಂದು ಹೇಳಿಕ್ಕ ಸುರು ಮಾಡ್ತೊ. ಪಕ್ಕದ ಮನೆ ಹೆಂಗ್ಸ್ ಹೇಳ್‌ತಿತ್ತ್. ಅದ್ಯಾವ ಮೂರ್ ಸೀಮೆಂದ ಬಂದ ಹೆಂಗ್ಸಪ್ಪೆ ಇವ್ಳು. ಎಂತರಾಟೆ ಇರಕ್ಕು ಇವ್ಳು. ತನ್ನ ಗಂಡನ ಸುಖ ದುಃಖಲಿ ಬಾಗಿ ಆಗದೆ ಇರ್‍ವ ಹೆಂಗ್ಸೊಪ್ಪ ಇವ್ಳು. ಯಂ. ಎ. ಗಡ, ಯಂ. ಎ. ಇವ್ಳೊಬ್ಬಳೆ ಓದಿದ್ದಾ! ಬಾಯಿಗೆ ಮಂಣಾ ಹಾಕ ಇವ್ಳ ಯಂ.ಎಗೆ.

**bichhi ಯುವರ ಕಥೆ ಆಧಾರಿತ :**

**ಅರೆಗನ್ನಡ ಭಾಷೆಗೆ : ಪಟ್ಟಡ ಪ್ರಭಾಕರ**

# "ಗೌಡ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ"

ವಿದೇಶಿ ಮಹಿಳೆಯರ ಸ್ವತಂತ್ರ್ಯ ಸ್ವಚ್ಛಂದ ಬದುಕು ಒಂದು ಕಡೆಯಾದರೆ ಪತಿಯೇ ಪರದೈವ ಎಂದು ಪೂಜಿಸಿ ಕಂಗಾಲಾದ ಭಾರತದ ಸಂಪ್ರದಾಯಸ್ಥ ಮಹಿಳೆ ಇನ್ನೊಂದು ಕಡೆ. ಇವೆರಡರ ಮಧ್ಯೆ ನಮ್ಮ ಸಮಾಜಕ್ಕೆ ಮಾತ್ರ ಸೀಮಿತ ಎಂದು ಹೇಳುವ ಪ್ರತ್ಯೇಕ ಸ್ಥಾನಮಾನ ವಿಲ್ಲದಿದ್ದರೂ ಇತರರಂತೆ ನಮ್ಮ ಗೌಡ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಬೇರೆ ಬೇರೆ ಕಾಲಘಟ್ಟದಲ್ಲಿ ಹೇಗಿತ್ತು? ಈಗ ಹೇಗಿದೆ ಎಂಬ ವಿಚಾರಗಳನ್ನು ಚಿಂತನೆ ಮಾಡಿದಾಗ ನಮಗೆ ಹಲವಾರು ವಿಷಯಗಳು ಗೋಚರಿಸುತ್ತದೆ.

ಈ ಸ್ಥಾನ ಮಾನಗಳನ್ನು ವಿಚಾರ ಮಾಡುವಾಗ ಆಳತೆಗೋಲಾಗಿ ನಾವು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬಹುದು.

1. ಧರ್ಮಶಾಸ್ತ್ರಗಳಲ್ಲಿ ಮತ್ತು ಸಾಂಪ್ರದಾಯಿಕ ಪದ್ಧತಿ ಹಾಗೂ ನಿಯಮಗಳಲ್ಲಿ ಸ್ತ್ರೀಯರ ಸ್ಥಾನ ಮಾನ.
2. ಪುರುಷರು ಸ್ತ್ರೀಯರನ್ನು ನೋಡಿಕೊಳ್ಳುವ ರೀತಿ.
3. ಸ್ತ್ರೀಯು ನಿರ್ವಹಿಸುವ ಕಾರ್ಯಗಳು ಹಾಗೂ ಅವುಗಳ ಸ್ವಭಾವ
4. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸ್ತ್ರೀಗೆ ಇರುವ ಅವಕಾಶಗಳು

ಈ ಮೇಲಿನ ವಿಚಾರಗಳನ್ನು ಕಾಲ ಘಟ್ಟಕ್ಕನುಗುಣವಾಗಿ ಪ್ರಾಚೀನ, ಮಧ್ಯಕಾಲೀನ, ವರ್ತಮಾನ ಮೂರು ಘಟ್ಟಗಳಲ್ಲಿ ವಿಮರ್ಶೆ ಮಾಡುವುದು ಸೂಕ್ತ ಎನ್ನಬಹುದು.

ಪ್ರಾಚೀನ ಎಂದಾಗ ಚರಿತ್ರೆಯಲ್ಲಿ ಮತ್ತು ನಮ್ಮ ಹಿರಿಯರು ಹೇಳಿಕೊಂಡು ಬಂದಂತೆ ಸುಮಾರು 450 ವರ್ಷಗಳ ಹಿಂದೆ ವಿಜಯನಗರ ಸಾಮ್ರಾಜ್ಯ ಪತನವಾದ ಆ ಕಾಲದಲ್ಲೇ ಅಲ್ಲಿಯ ಉಳಿದ ಕೆಲವು ಗೌಡ ಜನಾಂಗದ ಜನರು ಮುಸ್ಲಿಮರ ಜೊತೆಯಲ್ಲಿ ಬದುಕುವುದನ್ನು ಸಹಿಸದೆ ಲಿಂಗಾಯಿತರ ಪ್ರಭಾವಕ್ಕೆ ಜಗ್ಗದೆ ಹಚ್ಚ ಹಸುರಿನ, ಕಾಡು ಬೆಟ್ಟ, ಗುಡ್ಡಗಳ ತಪ್ಪಲುಗಳ ಪ್ರದೇಶವಾದ ನಮ್ಮ ಈ ಮಲೆನಾಡಿಗೆ ಬಂದು ಭತ್ತದ ಗದ್ದೆ ಬೇಸಾಯ ದೊಂದಿಗೆ ಕೃಷಿ ಪ್ರಾರಂಭಿಸಿದರು. ಜೊತೆಯಲ್ಲಿ ಕುಮೇರಿ ಕಡಿದು ರಾಗಿಯನ್ನು ಕೂಡಾ ಬಿತ್ತಿ ಬೆಳೆಸುತ್ತಿದ್ದರಂತೆ. ರಾಗಿ ಬಿತ್ತಿ ಬೆಳೆಸುತ್ತಿದ್ದರು ಎನ್ನುವುದಕ್ಕೆ ಗೌಡ ಜನಾಂಗದೊಂದಿಗೆ ರಾಗಿಯ ಊಟದ ನಂಟು ಈಗಲೂ ಜನಜನಿತವಾದ ಮಾತಾಗಿದೆ.

ಕಾಲಕ್ರಮೇಣ ಕೆಲವರು ಮಡಿಕೇರಿ ಮತ್ತು ಅದರ ಸುತ್ತಮುತ್ತ ಹೋಗಿ ನೆಲೆ ನಿಂತರು. ಹಾಗೆ ನೆಲೆನಿಂತ ಗೌಡ ಜನಾಂಗದ ಜನ ಜೀವನ, ರೀತಿ, ರಿವಾಜು ಮತ್ತು ಸಾಂಪ್ರದಾಯಿಕ ಪದ್ಧತಿಗಳಲ್ಲಿ ಇವತ್ತುಕೊಡವ ಜನಾಂಗದ ಪ್ರಭಾವವಿದೆ ಎಂದು ಕಂಡು ಬರುತ್ತದೆ. ಮತ್ತು ಇಲ್ಲೆ ನೆಲೆನಿಂತ ಗೌಡರಲ್ಲಿ ಬ್ರಾಹ್ಮಣ ಸಂಪ್ರದಾಯಗಳ ಬಳಕೆಯಾಗಿದೆ ಎಂದು ಹೇಳುತ್ತಾರೆ. ಅದೇನೆ ಇರಲಿ ಮಲೆನಾಡಿನ ಗೌಡ ಸಮಾಜ ಸುಮಾರು 150-200 ವರ್ಷಗಳ ಹಿಂದೆ ಬಹಳ ಹಿಂದುಳಿದ ವರ್ಗದವರೆಂದೇ ಗುರುತಿಸಲ್ಪಟ್ಟಿದ್ದರು. ಆ ಕಾಲದಲ್ಲೆ ಮಹಿಳೆಯರಿಗೆ ಅಥವಾ ಪುರುಷರಿಗೆ ಯಾರಿಗೂ ವಿದ್ಯಾಭ್ಯಾಸವಿರಲಿಲ್ಲ. ಮಹಿಳೆಯರು ತಮ್ಮ ಗೃಹಕೃತ್ಯದೊಂದಿಗೆ ಬೇಸಾಯದ ಕೆಲಸಕ್ಕೆ ಕೂಡಾ ಹೋಗುತ್ತಿದ್ದರು. ಪುರುಷರು ಹೊಲದಲ್ಲೆ ಕಷ್ಟಪಟ್ಟು ದುಡಿಯುತ್ತಿದ್ದರು.

ಆ ಸಮಯದಲ್ಲಿ ಪುರುಷರು ಸ್ತ್ರೀಯರನ್ನು ಸಮಾನ ಅಥವಾ ಹೆಚ್ಚು ಗೌರವದಲ್ಲಿ ಕಾಣುತ್ತಿದ್ದರು ಎನ್ನುವುದಕ್ಕಿಂತ ಅವಳಿಂದ ಆಗುವುದು ಇಷ್ಟೆ ಎನ್ನುವ ಭಾವನೆ ಇತ್ತು ಎನ್ನಬಹುದು. ಮದುವೆ ಮುಂತಾದ ಕಾರ್ಯಕ್ರಮಗಳಲ್ಲಿ ಮಹಿಳೆಗೆ ಹೆಚ್ಚಿನ ಪ್ರಾಮುಖ್ಯತೆ ಇತ್ತು ಎಂಬುದಾಗಿ ಮದುವೆಯ ವಿಧಿ ವಿಧಾನಗಳಲ್ಲಿ ಕಂಡು ಬರುತ್ತದೆ. ಇತರ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಅವಳಿಗೆ ಯಾವುದೇ ನಿಬಂಧನೆ ಇರಲಿಲ್ಲ. ಆದರೆ ಮಹಿಳೆಯರಿಗೆ ಮಾತ್ರ ಸೀಮಿತ ವಾದ ಕೆಲವೊಂದು ಸಾಂಪ್ರದಾಯಿತ ಪದ್ಧತಿಗಳನ್ನು ಮಹಿಳೆಯರು ರೂಢಿಸಿಕೊಂಡು ಬಂದಿದ್ದರು. ಉದಾಹರಣೆಗೆ ತಿಂಗಳ ಸೂತಕದ ಸಮಯದಲ್ಲಿ ಮನೆಯಿಂದ ಹೊರಗೆ ಕುಳಿತು ಕೊಳ್ಳುವ ಪದ್ಧತಿ, ಪ್ರಥಮ ರಜಸ್ವಲೆಯಾದಾಗ ಅದನ್ನು ಮೈ 'ನೆರ್ದ ಮದುವೆ' ಎಂದು ಡಂಗುರದೊಂದಿಗೆ ಆಚರಣೆ ಮಾಡುವುದು. ವಿಧವೆ ಬಳೆ, ಕುಂಕುಮ , ಹೂ ಮುಡಿಯುವುದು, ಒಳ್ಳೆಯ ಬಟ್ಟೆ ತೊಡುವುದಕ್ಕೆ ಆಕ್ಷೇಪ ಇತ್ಯಾದಿ.

ಆಗ 'ಕೊಟ್ಟ ಹೆಣ್ಣು ಕುಲದಿಂದ ಹೊರಗೆ' ಎಂಬ ಮಾತು ಬಳಕೆಯಲ್ಲಿ ಇತ್ತು. ಅದರಂತೆ ಅವಳಿಗೆ ತಂದೆಯ ಆಸ್ತಿ ಪಾಸ್ತಿಯಲ್ಲೆ ಹಕ್ಕಿರಲಿಲ್ಲ. ಆದ್ದರಿಂದ ಆರ್ಥಿಕವಾಗಿ, ಅವಳು ಪರಾವಲಂಬಿಯಾಗಿದ್ದಳು. ಆದರೂ ಆ ಬಗ್ಗೆ ಅವಳು ಚಿಂತಿಸುತ್ತಿದ್ದಳು ಎಂಬುದಾಗಿ ಎಲ್ಲೂ ಕಂಡು ಬರುವುದಿಲ್ಲ.

ಒಟ್ಟಿನಲ್ಲಿ ಆ ಕಾಲದಲ್ಲೆ ಪುರುಷರು, ಮಹಿಳೆಯರು ಎಂದು ಭೇದವಿಲ್ಲದೆ ಎಲ್ಲರೂ ದುಡಿಯುತ್ತಿದ್ದರು. ಎಲ್ಲರೂ ಬಡವರೇ ಆಗಿದ್ದ ಆ ಸಂದರ್ಭದಲ್ಲೆ ಹೊಟ್ಟೆಗೆ ಸರಿಯಾಗಿ ಮೂರು ಹೊತ್ತು ಊಟಕ್ಕೆ ಇರುತ್ತಿರಲಿಲ್ಲವಂತೆ. ಹಾಗಿದ್ದ ಆ ಸಮಯದಲ್ಲಿ ಬಹುಶಃ ಅವರವರ ಸ್ಥಾನಮಾನದ ಬಗ್ಗೆ ಚಿಂತಿಸುವ ಬದಲು ಹೊಟ್ಟೆಯ ಚಿಂತೆಯೇ ಪ್ರಾಮುಖ್ಯವಾಗಿತ್ತು ಎನ್ನಬಹುದು.

ಇದು ಹೀಗೆ ಮುಂದುವರಿಯುತ್ತಾ ಬಂದು, ಜೊತೆಯಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಮಾನಸಿಕವಾಗಿಯೂ ಬದಲಾಗುತ್ತಾ ಬಂದು ಮಧ್ಯ ಭಾಗದಲ್ಲೆ ಅಂದರೆ ನಂತರದ ಸುಮಾರು 50ರಿಂದ 150 ವರ್ಷಗಳ ಮಧ್ಯೆ ಭತ್ತದ ಬೇಸಾಯವೇ ಇಲ್ಲಿನ ಗೌಡ ಸಮಾಜದ ಮುಖ್ಯ ಉದ್ಯೋಗವಾಗಿ ಉಳಿದು ಕೊಂಡಿತು.ಇದರ ಜೊತೆಯಲ್ಲೆ ತೆಂಗಿನ ಕೃಷಿ, ಬಾಳೆ, ಕರಿ ಮೆಣಸು ಇತ್ಯಾದಿ ಇನ್ನಿತರ ಬೆಳೆಗಳನ್ನು ಅಲ್ಪಸ್ವಲ್ಪವಾಗಿ ಬೆಳೆಸಲು ಪ್ರಾರಂಭಿಸಿದರು. ಆಗ ಕೂಡ ಹಿಂದುಳಿದವರೆಂದೇ ಗುರುತಿಸಲ್ಪಟ್ಟ ಗೌಡರಲ್ಲಿ ವಿದ್ಯಾಭ್ಯಾಸ ಹೆಚ್ಚೆಂದರೆ ಎರಡರಿಂದ ಮೂರನೇ ತರಗತಿ.. ನೂರರಲ್ಲೆ ತೊಂಬತ್ತೊಂಭತ್ತು ಪಾಲು ಶಾಲೆಯ ಮೆಟ್ಟಿಲು ತುಳಿದವರೇ ಅಲ್ಲ. ಆದರೂ ಆ ಕಾಲದಲ್ಲಿ ಹೆಚ್ಚು ಕಡಿಮೆ ಗೌಡ ಸಮಾಜದ ಕಟ್ಟುಕಟ್ಟಳೆ ಸಂಪ್ರದಾಯಗಳನ್ನೆಲ್ಲ ಅಚ್ಚುಕಟ್ಟಾಗಿ ನಡೆಸಿಕೊಂಡು ಬರುತ್ತಿದ್ದರು ಎನ್ನಬಹುದು.

ಆಗಿನ ಕುಟುಂಬಗಳೆಲ್ಲ ಅವಿಭಕ್ತ ಕುಟುಂಬಗಳಾಗಿದ್ದವು. ಗಂಡಸರು ಬೇಸಾಯದ ಸಮಯ ಮುಂಜಾನೆ ಕೋಳಿ ಕೂಗುವ ಹೊತ್ತಿಗೆ ತಂಗಳನ್ನ ಊಟ ಮಾಡಿ ನೇಗಿಲು ನೊಗ ಹೊತ್ತು ಎತ್ತುಗಳ ಜೊತೆ ಗದ್ದೆ ಉಳುವುದಕ್ಕೆ ಹೋಗುತ್ತಿದ್ದರು. ಹೊಲದ ಹೆಚ್ಚಿನ ಕಠಿಣ ಕೆಲಸಗಳನ್ನೆಲ್ಲಾ ಅವರೆ ಮಾಡುತ್ತಿದ್ದರು. ಮನೆಯಲ್ಲೆ ಮಡದಿ, ತಾಯಿ, ಉಳಿದ ಮಹಿಳೆಯರು ಮಕ್ಕಳ

ಲಾಲನೆ ಪಾಲನೆ, ಅಡುಗೆ ಮತ್ತು ಇತರ ಗೃಹ ಕೃತ್ಯಗಳನ್ನು ಮಾಡುತ್ತಿದ್ದರು. ಜೊತೆಯಲ್ಲಿ ಸಮಯ ಸಿಕ್ಕಾಗ ಬೇಸಾಯದ ಕೆಲಸಗಳಿಗೆ ಕೂಡಾ ಹೋಗುತ್ತಿದ್ದರು. ತಮ್ಮ ಹೊಲದ ಕೆಲಸಗಳನ್ನೆಲ್ಲ ನೆರೆಕೆರೆಯವರೆಲ್ಲ ಒಬ್ಬರಿಗೊಬ್ಬರು ಸೇರಿಕೊಂಡು ಕೂಡಾಡಿ ಜೊತೆಯಾಗಿ ಮಾಡುತ್ತಿದ್ದರು.

ಈ ಕಾಲ ಘಟ್ಟದಲ್ಲೆ ಗೌಡ ಸಂಪ್ರದಾಯಗಳಲ್ಲೆ ಅಥವಾ ಪದ್ಧತಿಗಳಲ್ಲೆ ಮಹಿಳೆಯರಿಗೆ ಸಮಾಜದಲ್ಲೆ ಗೌರವದ ಅಥವಾ ಮಾತೆಯ ಸ್ಥಾನಮಾನ ಇತ್ತು ಮತ್ತು ಅದರಂತೆ ನಡೆಯುತ್ತಿದ್ದರು ಎಂಬುದಾಗಿ ಕಂಡು ಬರುತ್ತದೆ. ಮುಖ್ಯವಾಗಿ ವಿವಾಹ ಪದ್ಧತಿಗಳಲ್ಲಿ ಮದುವೆಯಾಗ ಬಯಸಿದಾಗ ಪ್ರಾಯಕ್ಕೆ ಬಂದ ಹುಡುಗಿಯೆ ಮನೆಗೆ ವಧುವನ್ನು ಕೇಳಿ ಹೋಗುವ ಪದ್ಧತಿ. ಹುಡುಗಿಯ ಮನೆಯವರು ವರನನ್ನು ಹುಡುಕಿ ಹೋಗುವುದು ತಮ್ಮ ಘನತೆಗೆ ಕಡಿಮೆ ಎಂದು ತಿಳಿಯುತ್ತಿದ್ದರು. ಇದು ಒಂದು ರೀತಿಯಲ್ಲಿ ಮಹಿಳೆಗೆ ಕೊಡುತ್ತಿದ್ದ ಗೌರವವೆಂದೇ ಹೇಳಬಹುದು. ಇನ್ನು ವರ ವಧುವಿಗೆ ಮದುವೆಯಲ್ಲಿ ಒಂದಿಷ್ಟು ಹಣ (ತೆರವು) ಕಟ್ಟುವ ಕ್ರಮವಿದೆ. ಇದು ಈಗಿನ ವರದಕ್ಷಿಣೆಗೆ ತೀರಾ ವ್ಯತಿರಿಕ್ತ ಸಂಪ್ರದಾಯ. ಇನ್ನೊಂದು ರೀತಿಯಲ್ಲಿ ಇಲ್ಲೆ ಕೂಡ ಮಹಿಳೆಗೆ ಉತ್ತಮವಾದ ಸ್ಥಾನವನ್ನು ನಮ್ಮ ಸಮಾಜದಲ್ಲೆ ಕೊಡುತ್ತಿದ್ದರು ಎಂಬುದು ರುಜುವಾಗುತ್ತದೆ. ಮದುವೆಯ ಸಮಾರಂಭ ಕೂಡಾ ವಧುವಿನ ಮನೆಯಲ್ಲಿ ನಡೆಯುವುದು. ಮದುವೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ವಧುವಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದು ಕಂಡು ಬರುತ್ತದೆ. ಬಟ್ಟೆ ಬರೆ, ಬಂಗಾರ, ಬೆಳ್ಳಿ ಎಲ್ಲದರಲ್ಲಿ ಪುರುಷರಿಗಿಂತ ಮಹಿಳೆಯರಿಗೆ ಹೆಚ್ಚಿನ ಆದ್ಯತೆಯಿರುತ್ತಿತ್ತು.

ಆಗಿನ ಕಾಲದ ಮಹಿಳೆಯರು ಗಂಡ ಕಟ್ಟಿದ ತಾಳಿಯನ್ನು ದಾಸ್ಯದ ಸಂಕೋಲೆಯೆಂದು ಪರಿಗಣಿಸದೆ ಅದು ನಮ್ಮ ಸಂಪ್ರದಾಯವೆಂದು, ಪವಿತ್ರವಾದುದೆಂದು ಭಾವಿಸಿದ್ದರು. ಹಾಗೆಯೇ ತಾಳಿಗೆ ಕುಂಕುಮ ಇಟ್ಟುಕೊಳ್ಳುವುದು, ತಾಳಿಯಿಲ್ಲದೆ ಹೊಸ್ತಿಲು ದಾಟದೆ ಇರುವುದು ಎಲ್ಲವೂ ತನ್ನ ಪಾಲಿಗೆ ಪುರುಷ ಅನಿವಾರ್ಯ ಅಥವಾ ಅವಳಿಗಿದ್ದ ಗೌರವ ಅಭಿಮಾನವನ್ನು ಒತ್ತಿ ತೋರಿಸುತ್ತದೆ. ಹಾಗೆ ಹೆಣ್ಣು ಕೂಡ ಗಂಡನ ಹೆಸರೇಳುತ್ತಿರಲಿಲ್ಲ

ಕುಟುಂಬದಲ್ಲಿ ಹಿರಿಯ ಮಹಿಳೆಯರಿಗೆ ವಿಶೇಷ ಗೌರವವಿತ್ತು. ಮತ್ತು ಪೂಜನೀಯ ಸ್ಥಾನವಿತ್ತು. ಅವರನ್ನು ಉಗ್ಗವ್ವ (ಅನ್ನವನ್ನು ಕೊಡುವ ತಾಯಿ) ಎಂದೆ ಸಂಭೋದಿಸುತ್ತಿದ್ದರು. ಗಂಡ ಹೆಂಡತಿಗೆ ಎಷ್ಟು ಮರ್ಯಾದೆ ಕೊಡುತ್ತಿದ್ದರೆಂದರೆ ತನ್ನ ಹೆಂಡತಿಯ ಹೆಸರನ್ನು ಆತ ಯಾರ ಮುಂದೆಯೂ ಕೂಗಿ ಕರೆಯುತ್ತಿರಲಿಲ್ಲ. ಅದು ಅವಳು ತನಗೆ ಸಮಾನಳೆಂಬುದನ್ನು ತೋರಿಸುತ್ತದೆ. ಹಾಗೆ ಹೆಣ್ಣು ಕೂಡ ಗಂಡನ ಹೆಸರು ಹೇಳುತಿರಲಿಲ್ಲ.

ಗೌಡ ಸಮಾಜದಲ್ಲಿ ಸ್ತ್ರೀಯರು ಮತ್ತು ಪುರುಷರು ಹೆಚ್ಚು ಕಡಿಮೆ ಸಮಾನರೆಂದೆ ಹೇಳಬಹುದು. ಅವಳಿಗೆ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಅಥವಾ ಇನ್ನಿತರ ಯಾವುದೇ ಪದ್ಧತಿಗಳಲ್ಲಿ ಅವಳನ್ನು ಕೆಳ ದರ್ಜೆಯವಳೆಂದು ಕಾಣುತ್ತಿದ್ದರು ಎಂಬುದು ನಮಗೆ ಎಲ್ಲಿಯೂ ಕಂಡುಬರುವುದಿಲ್ಲ. ಎಲ್ಲಾ ಕಡೆ ಅವಳು ಬಯಸಿದಲ್ಲಿ ಸಮಾನ ಅವಕಾಶವಿತ್ತು. ಉದಾಹರಣೆಗೆ ಗೌಡ ಸಮಾಜದಲ್ಲಿರುವ ವಿಧವೆಯರ ಮರು ಮದುವೆ ಅಥವಾ ಕೂಡಾವಳಿ ಎಂಬ ಪದ್ಧತಿ. ಇಲ್ಲೆ ವಿಧವೆ ವಿಧುರನನ್ನು ಅಥವಾ ವರನನ್ನುಕೂಡ ಮದುವೆಯಾಗಬಹುದು. ಗೌಡ ಸಮಾಜದಲ್ಲೆ ಬಾಲ್ಯ ವಿವಾಹ ಪದ್ಧತಿಯಿದ್ದರೂ ಸತಿಯಂತಹ ಅಮಾನುಷ ಸಂಪ್ರದಾಯಗಳಿರಲಿಲ್ಲ.

ಹೊಟ್ಟೆ ಬಟ್ಟೆಗೆ ತೊಂದರೆಯಿಲ್ಲದ, ಹೆಚ್ಚು ಕಡಿಮೆ ಒಂದೇ ಅಂತಸ್ತಿನಲ್ಲಿದ್ದ ಎಲ್ಲಾ ಕುಟುಂಬಗಳು ಆ ಕಾಲದಲ್ಲೆ ಪುರುಷರು ಮತ್ತು ಮಹಿಳೆಯರು ಸಂಪ್ರದಾಯಗಳಿಗೆ ಒಗ್ಗಿಕೊಂಡು ಸಂತೋಷವಾಗಿ ಇದ್ದರು ಎಂದು ಹೇಳಬಹುದು. ಅಡುಗೆ ಕೆಲಸ ಮಹಿಳೆಯರಿಗೆ ಸೀಮಿತವಾಗಿದ್ದರೂ ಇತರ ಕೆಲಸಗಳನ್ನು ತಮ್ಮ ಶಕ್ತಿಗೆ ಸರಿಯಾಗಿ ಹಂಚಿಕೊಂಡು ನಡೆಸುತ್ತಿದ್ದರು. ಯಾವುದೇ ಆಚಾರ ವಿಚಾರಗಳಲ್ಲಿ ದೈಹಿಕವಾಗಿ ಅಬಲೆಯಾದ ಮಹಿಳೆ ಗಂಡ ತನ್ನ ಮೇಲೆ ದಬ್ಬಾಳಿಕೆ ನಡೆಸುತ್ತಾನೆ ಎಂದು ಭಾವಿಸುತ್ತಿರಲಿಲ್ಲ. ಸ್ವಭಾವತಃ ಸೌಮ್ಯ ಸ್ವಭಾವದವರಾದ ಗೌಡ ಮಹಿಳೆಯರು ಮತ್ತು ಪುರುಷರು ಅನೋನ್ಯವಾಗಿದ್ದರು.

ಇಷ್ಟು ಹೇಳಿದರೂ ಆಗಿನ ಕಾಲದ ಕೆಲವೊಂದು ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿತ್ತು ಎಲ್ಲಿ? ಈಗಿನಂತೆ ಕುಡುಕ ಗಂಡನ ಮನೆಯಲ್ಲಿ. ಅಲ್ಲಿ ಕುಡುಕ ಗಂಡ ತನ್ನ ರಾಕ್ಷಸ ಪ್ರವೃತ್ತಿಯನ್ನು ತೋರಿಸಿದಾಗ ದೈಹಿಕವಾಗಿ ಅಬಲೆಯಾದ ಮತ್ತು ಆರ್ಥಿಕ ಸ್ವಾವಲಂಬನೆಯ ಅಭಾವದಿಂದಾಗಿ ಅವಳು ಕಷ್ಟ ಪಡಬೇಕಾಯಿತು.

ಇನ್ನು ಈಗಿನ ಪ್ರಶಕ್ತ ಅಥವಾ ಸುಮಾರು 50-60 ವರ್ಷಗಳಿಂದೀಚೆಗೆ ನಮ್ಮ ಸಮಾಜದ ಸ್ಥಿತಿಗತಿ ಹೇಗೆ ಬದಲಾಯಿತು ಮತ್ತು ಈಗ ಹೇಗಿದೆ ಅನ್ನುವ ವಿಚಾರ, ಜೊತೆಯಲ್ಲೆ ನಮ್ಮ ಸಂಪ್ರದಾಯ, ಕಟ್ಟು ಪಾಡುಗಳಲ್ಲಿ ಆದ ಬದಲಾವಣೆ, ಸ್ತ್ರೀಯರ ಸ್ಥಾನಮಾನ ಇತ್ಯಾದಿ.

ಆಗಿನ ಭತ್ತದ ಗದ್ದೆಗಳೆಲ್ಲ ಈಗ ಅಡಿಕೆ ತೋಟಗಳಾಗಿವೆ. ಕಾಡುಗಳೆಲ್ಲಾ ನಾಶವಾಗಿ ರಬ್ಬರ್ ತೋಟಗಳಾಗಿವೆ. ಹೆಚ್ಚಿನ ಕುಟುಂಬಗಳು ತಾನು ತನ್ನ ಹೆಂಡತಿ, ಮಕ್ಕಳು ಎನ್ನುವಷ್ಟರ ಮಟ್ಟಿಗೆ ಸೀಮಿತವಾಗಿದೆ.

ಸಾಮಾಜಿಕ ಜೀವನದಲ್ಲಿಕೂಡ ಸಾಕಷ್ಟು ಬದಲಾವಣೆಯಾಗಿದೆ. ಹಿಂದೆ ಆರ್ಥಿಕವಾಗಿ ಎಲ್ಲರೂ ಒಂದೇ ಎನ್ನುವ ಬದಲಾಗಿ ಈಗ ಅದರಲ್ಲಿ ಸರಿಯಾಗಿ ಮೂರು ವರ್ಗಗಳನ್ನು ಗುರುತಿಸಬಹುದು. ಮೊದಲನೆಯದಾಗಿ ಕೂಲಿ ಕೆಲಸಕ್ಕೆ ಹೋಗುವ ಬಡ ಕುಟುಂಬ. ಎರಡನೆಯದಾಗಿ ಮಧ್ಯಮ ವರ್ಗ ಮತ್ತು ಮೂರನೆಯದಾಗಿ ಶ್ರೀಮಂತ ವರ್ಗ.

ಕೂಲಿ ಕೆಲಸಕ್ಕೆ ಹೋಗುವ ಬಡ ಕುಟುಂಬದಲ್ಲಿ ಮಹಿಳೆಯ ಜೀವನ ಶೋಚನೀಯ, ಮನೆ ತುಂಬಾ ಮಕ್ಕಳು. ಅವರಿಗೆ ಸರಿಯಾದ ಆಹಾರ ಬಟ್ಟೆ ಬರೆಯಿಲ್ಲ. ವಿದ್ಯಾಭ್ಯಾಸವಿಲ್ಲ, ಜೊತೆಯಲ್ಲಿ ಸಾಲಗಾರ, ಕುಡುಕ ಗಂಡ, ಅಂತಹ ಕುಟುಂಬದಲ್ಲಿ ವಿದ್ಯಾಭ್ಯಾಸ ಮತ್ತು ಅನುಭವದ ಕೊರತೆಯಿಂದಾಗಿ ಮಹಿಳೆ ಇವತ್ತು ಅಗತ್ಯವಿರುವ ಮತ್ತು ಇಲ್ಲದಿರುವ ಸಂಪ್ರದಾಯದ ಕಟ್ಟು ಪಾಡುಗಳನ್ನು ತಾನು ಮಾಡುವುದರಲ್ಲೆ ಸಂತೋಷಪಡುತ್ತಾ, ಒದ್ದಾಡುತ್ತಾ ಇರುತ್ತಾಳೆ. ಇನ್ನು ಅಮಲೇರಿ ಬಂದು ಹಿಂಸಿಸುವ ಗಂಡನೊಂದಿಗೆ ಅವಳಿಗೆ ತನ್ನ ಸ್ಥಾನಮಾನ ಏನು? ಎಂದು ಯೋಚಿಸುವ ಬದಲು ತನ್ನ ಸಮಸ್ಯೆಗಳಿಗೆ ಪರಿಹಾರವಿಲ್ಲ ಎನ್ನುವ ಹತಾಶ ಭಾವನೆ ಇದೆ ಎಂದು ಕಂಡು ಬರುತ್ತದೆ. ನೋಡುವವರಿಗೆ ಒಂದು ದೃಷ್ಟಿಯಲ್ಲಿ ಅವಳು ಬಾವಿಯೊಳಗಿನ ಕಪ್ಪೆಯೆಂದೇ ಹೇಳಬಹುದು.

ಇನ್ನು ಮಧ್ಯಮ ವರ್ಗದಲ್ಲಿ ಹೆಣ್ಣು ಗಂಡು ಎಂಬ ಭೇದವಿಲ್ಲದೆ ಎಲ್ಲರೂ ವಿದ್ಯಾವಂತರಾಗಿದ್ದಾರೆ. ಆರ್ಥಿಕ ಅಭಿವೃದ್ಧಿಯಿಂದಾಗಿ ಕೈಯಲ್ಲಿ ಹಣವಿದೆ. ಮನೆಯಲ್ಲಿ ಎಲ್ಲಾರೀತಿಯ ಸವಲತ್ತುಗಳು ಇವೆ. ಓಡಾಟಕ್ಕೆ ಕಡಿಮೆ ಪಕ್ಷದಲ್ಲಿ ಎರಡು ಚಕ್ರದ ವಾಹನವಾದರೂ ಇದೆ. ಆಳುಕಾಳುಗಳನ್ನಿಟ್ಟುಕೊಂಡು ಮಾಡುವ ಕೃಷಿಯ ಜೊತೆಯಲ್ಲಿ ಕೆಲವರು ವ್ಯಾಪಾರ ಕೂಡ ನಡೆಸುತ್ತಿದ್ದಾರೆ. ಮತ್ತೆ ಕೆಲವರು ಸರಕಾರಿ ಉದ್ಯೋಗದಲ್ಲಿದ್ದಾರೆ. ಒಟ್ಟಿನಲ್ಲಿ ಹಣ ಸಂಪಾದನೆ ಕಡಿಮೆ ಶ್ರಮದಲ್ಲಿನಡೆಯುತ್ತದೆ ಎನ್ನಬಹುದು. ಇಲ್ಲಿ ಹೆಚ್ಚಿನ ಪುರುಷರು ಹಣವಿರುವುದರಿಂದ ಒಂದಲ್ಲ ಒಂದು ರೀತಿಯ ಹತ್ತಾರು ಸಮಸ್ಯೆಗಳನ್ನು ಎಳೆದು ಹಾಕಿಕೊಂಡು ಒದ್ದಾಡುತ್ತಿರುತ್ತಾರೆ. ಸಮಾಜದಲ್ಲೆ ತನ್ನ ಹೆಸರಿಗಾಗಿ ಪ್ರತಿಷ್ಠೆಗಾಗಿ ಪರದಾಡುತ್ತಿರುತ್ತಾರೆ.

ಇಂತಹ ಕುಟುಂಬದಲ್ಲಿ ವಿದ್ಯಾವಂತ ಮಡದಿ ಮನೆಯಲ್ಲಿ ಇರುತ್ತಾಳೆ. ಅವಳಿಗೆ ಮನೆಯಲ್ಲಿ ಕೆಲಸವಿಲ್ಲ. ಮನೆ ಕೆಲಸಕ್ಕೆ ಆಳುಗಳಿದ್ದಾರೆ. ಸುಮ್ಮನೆ ಕೂತಿರುವಾಗ ತಾನು ಕೂಡಾ ಗಂಡನಂತೆ ಹೊರಗೆ ಹೋಗಬೇಕೆಂದು ಆಸೆ ಪಡುತ್ತಾಳೆ. ಪುರುಷರಿಗಿಂತ ನಾನೇನು ಕಡಿಮೆ ಎನ್ನುವ ಹತ್ತು ಹಲವು ವಿಚಾರಗಳನ್ನು ಓದಿದ ಇವಳು ಹೊರಗೆ ಹೋಗಬೇಕೆನ್ನುವಾಗ ಗಂಡನಿಂದ ಬೇಡ ಎನ್ನುವ ಉತ್ತರ. ಯಾಕೆಂದರೆ ಇಂದಿನ ಸಮಾಜ ಎಷ್ಟು ಕೆಟ್ಟಿದೆ ಎನ್ನುವ ಪರಿಚಯ ಅವನಿಗಿದೆ. ಅವನೂ ಅದರ ಒಂದು ಸದಸ್ಯ. ಇನ್ನು ಕೆಲವು ಪುರುಷರಿಗೆ ತನ್ನ ಹೆಂಡತಿ ಗರತಿ ಗೌರಮ್ಮನಂತೆ ಮನೆಯಲ್ಲಿರಬೇಕು ಎನ್ನುವ ಹಟ. ಇಂತಹ ಕುಟುಂಬದಲ್ಲಿ ವೈವಾಹಿಕ ಜೀವನದ ರಂಪಾಟ. ಇಲ್ಲಿ ಮಹಿಳೆಗೆ ಸ್ವಾತಂತ್ರ್ಯವಿಲ್ಲದ ಜಂಜಾಟದಿಂದ ಹೊರಗೆ ಬರಲು ಆರ್ಥಿಕವಾಗಿ ಅವಳು ಪರಾವಲಂಬಿ. ಇನ್ನು ಕುಡುಕ ಸಾಲಗಾರ ಗಂಡನ ಮನೆಯಲ್ಲಿ ಮರದ ಕೊರಡಿನಂತೆ ಮಹಿಳೆಯ ಜೀವನ. ಇದು ಇಂದಿನ ಸಾಮಾನ್ಯ ಗೌಡ ಕುಟುಂಬದ ಚಿತ್ರಣ ಎನ್ನಬಹುದು.

ಮೂರನೆಯದಾಗಿ ಅತೀ ಶ್ರೀಮಂತ ಕುಟುಂಬ. ಇಲ್ಲಿ ಮಹಿಳೆಗೆ ಹಣಕ್ಕೆ ತೊಂದರೆಯಿಲ್ಲ. ಅವಳಿಗೆ ಎಲ್ಲಾರೀತಿಯ ಸ್ವಾತಂತ್ರ್ಯವಿದೆ. ಎಷ್ಟರ ಮಟ್ಟಿಗೆ ಎಂದರೆ ಕೆಲವೊಮ್ಮೆ ಗಂಡನಂತೆ ತಾನೂ ಕುಡಿಯುತ್ತಾಳೆ. ಸಂಪ್ರದಾಯಗಳಿಗೆ ಅವಳಲ್ಲಿ ಬೆಲೆಯಿಲ್ಲ. ಏನನ್ನಾದರೂ ಮಾಡಿದರೆ ಅದು ಬರೀ ತೋರಿಕೆಗೆ ಮಾತ್ರ. ಮಾನಸಿಕವಾಗಿ ಅಧೀರಳಾದ ಅವಳು ಗಂಡ ಕಟ್ಟಿದ ತಾಳಿಯನ್ನು ಸೊಂಟದಲ್ಲಿಸಿಕ್ಕಿಸಿಕೊಂಡು ಓಡಾಡುತ್ತಿರುತ್ತಾಳೆ. ಅದನ್ನು ತನ್ನ ಮೈಮೇಲೆ ಇಟ್ಟು ಕೊಳ್ಳದೆ ಬದುಕುವ ಧೈರ್ಯ ಅವಳಲ್ಲಿಲ್ಲ.

ಇವುಗಳೆಲ್ಲದರ ಮಧ್ಯೆ ಆಶಾದೀಪಗಳಂತೆ ಸಂತೋಷದ ಸುಖ ಸಾಗರದಲ್ಲಿ ತೇಲುವಬಡ, ಮಧ್ಯಮ ಮತ್ತು ಶ್ರೀಮಂತ ಕುಟುಂಬಗಳು ಇವೆ. ಇಲ್ಲಿ ಮಹಿಳೆಗೆ ಸಮಾನತೆಯ ಜೊತೆಯಲ್ಲಿ ಗೌರವದ ಸ್ಥಾನವಿದೆ. ಮಹನೀಯರೂ ತಮ್ಮತನವನ್ನುಉಳಿಸಿ ಕೊಂಡಿದ್ದಾರೆ. ಮಹಿಳೆ ಆರ್ಥಿಕವಾಗಿ ಸ್ವಾವಲಂಬಿಯಾಗಿರ ಬಹುದು ಅಥವಾ ಇಲ್ಲದಿರಬಹುದು.ಆದರೆ ಅವಳು ತಾನು ಹೆಣ್ಣು ಅಂದ ಮೇಲೆ ಪ್ರಕೃತಿ ನಿಯಮದಂತೆ, ಎಲ್ಲಾ ಪ್ರಾಣಿ ಪಕ್ಷಿಗಳಲ್ಲಿ ನಡೆಯುತ್ತಿರುವಂತೆ ಮನೆಯ ಒಪ್ಪ ಓರಣ,ಮಕ್ಕಳ ಲಾಲನೆ ಪಾಲನೆಯಲ್ಲಿತನ್ನನ್ನುಪುರುಷರಿಗಿಂತ ಹೆಚ್ಚುತೊಡಗಿಸಿ ಕೊಂಡು ದೈಹಿಕವಾಗಿ ಪ್ರಭುತ್ವವನ್ನು ಸಾಧಿಸಿದ ಗಂಡನೊಂದಿಗೆ ತಾನು ಮೇಲೆ ಎಂದು ಸಾಧಿಸದೆ ಸ್ನೇಹದಿಂದಿರುವುದು ಕಂಡು ಬರುತ್ತದೆ. ತನ್ನ ಸೀಮಿತ ಪರಿಧಿಯಲ್ಲಿ ಅವಳ ಸ್ವಾತಂತ್ರ್ಯಕ್ಕೆ ಸ್ಥಾನಮಾನಕ್ಕೆ ಧಕ್ಕೆ ಕಂಡು ಬರುವುದಿಲ್ಲ.

ಒಟ್ಟಾರೆ ಹೇಳುವುದಾದರೆ ಇದರತ್ತ ಗೌಡ ಸಮಾಜದಲ್ಲಿ ಸ್ತ್ರೀಯರಿಗೆ ಸಮಾನ ಸ್ಥಾನಮಾನವಿದ್ದರೂ ವರದಕ್ಷಿಣೆ ನುಗ್ಗಿಕೊಂಡಿರುವುದರಿಂದ ಹೆಣ್ಣು ಮಕ್ಕಳ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಆದಷ್ಟು ಬೇಗ ಮದುವೆ ಮಾಡಿ ಕೊಡಬೇಕೆಂಬ ತರಾತುರಿಯಲ್ಲಿ ಇರುವಂತೆ ಅನ್ನಿಸುತ್ತದೆ. ಹೆತ್ತವರು ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದರಲ್ಲಿ ಉದಾಸೀನತೋರುತ್ತಿದ್ದಾರೆ. ಹೆಣ್ಣು ಮಕ್ಕಳಲ್ಲಿ ಕೂಡಾ ತಾವು ಮದುವೆ ಮಾಡಿಕೊಂಡರೆ ನಮ್ಮ ಜೀವನ ಸಾರ್ಥಕ ಪಡೆಯಿತು ಎನ್ನುವ ಭಾವನೆಯಿದೆ ಎಂದು ಕಂಡು ಬರುತ್ತದೆ. ಇದಕ್ಕೆ ಮುಖ್ಯ ಕಾರಣ ತಂದೆ ತಾಯಿ ಚಿಕ್ಕಂದಿನಿಂದಲೂ ಅವರ ತಲೆಯಲ್ಲಿ ಅದನ್ನೇ ತುಂಬಿಸಿರುವುದು.

ಇವೆಲ್ಲವನ್ನೂ ಮೆಟ್ಟಿ ನಿಂತ ವಿದ್ಯಾವಂತ ಗೌಡ ಮಹಿಳೆಯರು ಇವತ್ತು ಸಾಕಷ್ಟು ಸಂಖ್ಯೆಯಲ್ಲಿ ಉದ್ಯೋಗದಲ್ಲಿದ್ದಾರೆ. ಸ್ವ ಉದ್ಯೋಗವನ್ನು ನೆಚ್ಚಿಕೊಂಡ ಅನೇಕ ಮಹಿಳೆಯರಿದ್ದಾರೆ. ಮಾತ್ರವಲ್ಲದೆ ರಾಜಕೀಯದಲ್ಲಿ ಕೂಡ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ಇನ್ನು ಪ್ರಸಕ್ತ ಗೌಡ ಸಮಾಜದಲ್ಲೆ ಸ್ತ್ರೀ ಪುರುಷರಲ್ಲಿ ಸಮಾನತೆ ಇದ್ದರೂ ಮಹಿಳೆಯಸ್ಥಾನಮಾನಕ್ಕೆಕೊರತೆ ಕಂಡು ಬಂದಿದೆ ಎಂದು ಹೇಳಿಕೊಳ್ಳುವುದಾದರೆ ಅದಕ್ಕೆ ಸ್ವಲ್ಪಮಟ್ಟಿಗೆ ಅವಳು ಸ್ವತಃ ಕಾರಣಳಾಗುತ್ತಾಳೆ. ಜೊತೆಯಲ್ಲಿ ಅವಳ ಹೆತ್ತವರು ಕೂಡಾ. ಮಹಿಳೆ ಆರ್ಥಿಕವಾಗಿ ಸ್ವಾವಲಂಭನೆಯನ್ನು ಹೊಂದುವುದರಲ್ಲಿ ಅಸಡ್ಡೆ ತೋರುವುದು ಮೊದಲನೆಯ ಕಾರಣವಾದರೆ ಹೆತ್ತವರ ಪ್ರೋತ್ಸಾಹ ಕಡಿಮೆಯಾಗಿರುವುದು ಮತ್ತು ಅವರ ವಂಶದ ಆಸ್ತಿಗಳಲ್ಲಿ ಮಗಳನ್ನು ಸಮಾನ ಪಾಲುದಾರಳನ್ನಾಗಿ ಮಾಡದಿರುವುದು ಎರಡನೆಯ ಕಾರಣ. ಆದರೆ ಈಗ ಕಾನೂನು ಬದಲಾಗಿ ಸಮಾನ ಹಕ್ಕು ಸಿಗುವಂತಾಗಿದೆ. ಆದರೆ ಅದರ ಅನುಷ್ಠಾನ ಕಂಡು ಬರುತ್ತಿಲ್ಲ. ಹಾಗೆಯೇ ಮಹಿಳೆ ತಾನು ಕಲಿತ ವಿದ್ಯೆಯನ್ನು ಬರೀ ಸರಕಾರಿ ಅಥವಾ ಆಫೀಸ್ ಕೆಲಸಕ್ಕೆ ಮಾತ್ರ ಎಂದು ತಿಳಿಯದೆ ಅದನ್ನು ಕೃಷಿ, ವ್ಯಾಪಾರ ಅಥವಾ ಇನ್ನಿತರ ಸ್ವ ಉದ್ಯೋಗದಲ್ಲಿ ಬಳಸಿಕೊಳ್ಳದಿರುವುದು ಮತ್ತು ಮಾನಸಿಕವಾಗಿ ಸಮಸ್ಯೆಗಳನ್ನು ಎದುರಿಸುವ ಧೈರ್ಯವನ್ನು ತಂದುಕೊಳ್ಳದಿರುವುದು. ಹಾಗೆಯೇ ನಮ್ಮ ಪ್ರಸಕ್ತ ಸಮಾಜದಲ್ಲಿ ಪುರುಷರು ಮಹಿಳೆಯರ ಶೋಷಣೆ ಮಾಡುತ್ತಿದ್ದಾರೆ ಎಂದು ಹೇಳಿದರೆ ಒಂದು ರೀತಿಯಲ್ಲಿ ತಪ್ಪಾಗಬಹುದು. ಯಾಕೆಂದರೆ ಅದಕ್ಕಿಂತ ಹೆಚ್ಚು ಮಹಿಳೆಯರು ಮಹಿಳೆಯ ಶೋಷಣೆ ಮಾಡುತ್ತಾರೆ. ಒಂದು ವೇಳೆ ಮೊದಲದ್ದೇ ಸರಿಯಾದರೆ ಮಹಿಳೆಯರು ಯಾಕೆ ಒಟ್ಟಾಗಿ ತೊಂದರೆಗೊಳಗಾದ ಮಹಿಳೆಯನ್ನು ಮೇಲೆತ್ತಬಾರದು? ಅದ್ದರಿಂದ ನಮ್ಮ ಸಮಾಜದ ಮಹಿಳೆಯರು ತಾನು ತನ್ನ ಸಮಾಜದ ಇತರ ಸ್ತ್ರೀಯರಿಗಿಂತ ಶಿಕ್ಷಣದಲ್ಲಿ ಆರ್ಥಿಕ ದೃಷ್ಟಿಯಲ್ಲಿ ಮತ್ತು ಹೊರಗಿನ ಸಮಾಜದ ದೃಷ್ಟಿಯಲ್ಲಿ ಮೇಲ್ಮಟ್ಟದವಳು ಎಂದು ಹೆಮ್ಮೆಯಿಂದ ಬೇಗನೆ ತನ್ನ ಸಮಾಜದ ಎಲ್ಲಾ ಸ್ತ್ರೀಯರೊಡನೆ ಆತ್ಮೀಯತೆಯನ್ನು ಬೆಳೆಸಿಕೊಂಡು ತನ್ನಂತೆ ಇತರರನ್ನು ಉನ್ನತ ಮಟ್ಟಕ್ಕೆ ಏರಿಸುವಲ್ಲಿ ಪ್ರಯತ್ನಿಸಿದರೆ ಖಂಡಿತಾ ನಮ್ಮಗೌಡ ಸಮಾಜದ ಮಹಿಳೆಯರು ಸಮಾಜದಲ್ಲಿ ಇತರ ಎಲ್ಲರಿಗಿಂತಲೂ ಹೆಚ್ಚು ಗೌರವದಿಂದಿರಲು ಸಾಧ್ಯವಿದೆ.

ಲೇಖಕಿ: ಬಿ. ರೇವತಿ ನಂದನ್,ಜೀವಶಾಸ್ತ್ರ
ಉಪನ್ಯಾಸಕರು, ಸರಕಾರಿ ಪ. ಪೂ. ಕಾಲೇಜು, ಸುಳ್ಯ.

## ಕೊಡಗು ಎಜುಕೇಷನ್ಸ್ ಅಕಾಡೆಮಿ - ಬೆಂಗಳೂರು

***Chapter I (ಸೀಮಿತ ವಿಷಯ)***

10 ಕುಟುಂಬ ಹದಿನೆಂಟು ಗೋತ್ರದ ಗೌಡ ಬಾಂಧವರಲ್ಲಿ ವೈದ್ಯರುಗಳು, ವೈದ್ಯ ಶುಶ್ರೂಕಿಯವರು, ಡೆಂಟಿಸ್ಟ್‌ಗಳು, ವೆಟರ್‌ನರಿ ಡಾಕ್ಟರ್ಸ್ ಅಥವಾ ಸಿಬ್ಬಂದಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಯಾರೆ ಆದರು ಅವರನ್ನ ಒಂದೆ ಸೂರಿನಡಿಯಲ್ಲಿ ಸೇರಿಸುವ ಪ್ರಯತ್ನವಾಗಿದೆ. ಆಸಕ್ತರು ಈ ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣವಿವರದೊಂದಿಗೆ ಅರ್ಜಿ ಸಲ್ಲಿಸುವುದು.

**Phone : 080/3539555**
**Mobile : 98441/72183**

ವಿಳಾಸ : ಮೊಟ್ಟನ ರವಿಕುಮಾರ್,
Secretary, C/o 156/1B, I Floor, R.V. Road,
Near Minerva Circle
Opp. Hero Honda Show Room, Bangalore - 4

**Chapter II** ಇಂಜನಿಯರ್ಸ್
**III** ವಕೀಲರು
**IV** ಸರ್ಕಾರಿ ಉದ್ಯೋಗಸ್ತರು.

**26-1-2002** ರಂದು ಈ ಮೇಲ್ಕಂಡ ಶಾಲೆಯಲ್ಲಿ ಉಚಿತ ವೈದ್ಯಕೀಯ ಸೌಲಭ್ಯವನ್ನು ಶಾಲಾ ಮಕ್ಕಳು ಪಡೆದುಕೊಳ್ಳುವಂತೆ ಕೋರಲಾಗಿದೆ.

## ಕಾವೇರಿ ಸ್ವಸಹಾಯ ಸಂಘ, ಅವಂದೂರು

ದಿನಾಂಕ 8-10-2002 ರಂದು ದಸರಾ ಉತ್ಸವದ 2ನೇ ದಿನವಾದ ಮಂಗಳವಾರದಂದು ಅವಂದೂರಿನ ಕಾವೇರಿ ಸ್ವಸಹಾಯ ಸಂಘದ ಮಹಿಳೆಯರು ಮಡಿಕೇರಿ ಪುರಭವನದಲ್ಲಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಇದು ಬೆಂಗಳೂರಿನ ಕಾವೇರಿನಾಡಿನ ಮತ್ತು ಅರೆಗನ್ನಡಭಾಷಾ ಧ್ವನಿ ಸುರುಳಿ ನಿರ್ಮಾಪಕ ಅಮ್ಮಾಜಿರ ಪೊನ್ನಪ್ಪ ನಿರ್ಮಿತ ಸುಗ್ಗಿ ಸುವ್ವಾಲೆ ಕುಣಿತ ಇದಕ್ಕೆ ಕೋಲಾಟ ಹಾಗೂ ಇತರೆ ಹಾಡಾದ ಮೂಡಲ್ ಕುಣಿಗಲ್ ಕೆರೆ ನೃತ್ಯ ಇವುಗಳನ್ನು ಪುರಭವನದಲ್ಲಿ ನಡೆಸಿ ಸೇರಿದ ಎಲ್ಲಾ ಪ್ರೇಕ್ಷಕರ ಮನಸೂರೆಗೊಳ್ಳುವಲ್ಲಿ ಸಫಲರಾದರು.

ಈ ನೃತ್ಯ ಮತ್ತು ಕೋಲಾಟ ಕಾರ್ಯಕ್ರಮದಲ್ಲಿ ಮಾಜಿ ಗ್ರಾಮ ಪಂಚಾಯಿತಿ ಸದಸ್ಯೆ ಕಡ್ಯದ ಪಾರ್ವತಿ, ಚೊಕ್ಕಾಡಿ ಪುಷ್ಪಲತಾ ಹರೀಶ್, ಪೊನ್ನಚನ ಸುಜಿತ ಚಂಗಪ್ಪ, ಕಾಳೇರಮ್ಮನ ಕಾವೇರಮ್ಮ ಪೂವಯ್ಯ, ಕಡ್ಯದ ಧನು ಈರಪ್ಪ, ಮಂದೋಡಿ ಅಮಿತ ಡಾಲು, ಎಡಿಕೇರಿ ಭವ್ಯ ಕುಶಾಲಪ್ಪ, ಹಾಗೂ ಪಟ್ಟಡ ಭವಾನಿ ಪೊನ್ನಪ್ಪನವರು ಭಾಗವಹಿಸಿದ್ದರು.

ಜಾನಪದ ಗೀತೆಯನ್ನು ಕಾಳೇರಮ್ಮನ ಶೋಭ ಮೇದಪ್ಪ, ಮಂದೋಡಿ ಭವಾನಿ ಕುಮಾರ್ ಹಾಡಿದರೆ, ನಿರೂಪಣೆಯನ್ನು ಪುದಿನೆರವನ ರೇವತಿಯವರು ನೀಡಿದರು. ಪ್ರಸ್ತುತಪಡಿಸಿದವರು ಕೊಡಗು ಗೌಡ ಮಹಿಳಾ ಒಕ್ಕೂಟದ ನಿರ್ದೇಶಕಿ ಬೈತಡ್ಕ ಜಾನಕಿ ಬೆಳ್ಯಪ್ಪನವರು. ಸುಂದರವಾಗಿ ಮೂಡಿ ಬಂದ ಈ ಕಾರ್ಯಕ್ರಮವು ನಿಜವಾಗಲೂ ಪ್ರಶಂಸನೀಯವಾದದು.

ವರದಿ : ಪಟ್ಟಡ ರೀನಾ, ಅವಂದೂರು.

## *"ತಿದ್ದುಪಡಿ"*

**"ಕೊಡಗು ಸಂಗಾತಿ" ಸಂಪುಟ 6, ಸಂಚಿಕೆ 15-16 ( ನವಂಬರ್ 1-30, 2002) ರಲ್ಲಿ** KODAGU Educational Academy (KEA) Bangalore ಈ ವಿಷಯವಾಗಿ ಪುಟ 17 ರಲ್ಲಿ ಪ್ರಕಟಗೊಂಡಿರುವುದು 1 ವರ್ಷದ ಹಿಂದಿನ ಪತ್ರದ ಸಾರಾಂಶವೆಂದು ಸಹೃದಯ ಓದುಗರು ಹಾಗೂ "ಮಹಾದಾನಿ"ಗಳು ತಿದ್ದಿ ಓದಿಕೊಳ್ಳುವುದು. ಪ್ರಮಾದಕ್ಕೆ ವಿಷಾದಿಸುತ್ತೇವೆ.

**- ಸಂಪಾದಕಿ.**



ಉಪ್ಪುಂಡಿರ ಗೌರಮ್ಮ (ಸಸಿ),

## ಪುಣ್ಯ ಸ್ಮರಣೆ

ನೀನು ನಮ್ಮನ್ನಗಲಿ 1 ವರ್ಷ ಕಳೆದರೂ ನೀನು ಉಳಿಸಿಹೋಗಿರುವ ಸವಿ ನೆನಪು ಹಚ್ಚ ಹಸಿರಾಗಿ ಮನದಾಳದಲ್ಲಿ ನಿಂತಿದೆ. ಕರುಣಾಮಯ ಭಗವಂತನು ನಿನ್ನ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ ಹಾಗೂ ಸದಾ ನಿನ್ನನ್ನು ಸ್ಮರಿಸುವ

ಜನನ : 14-2-1956,
ಮರಣ : 17-11-2001

ಪತಿ ಉಪ್ಪುಂಡಿರ ಬಿದ್ದಪ್ಪ, ಮಕ್ಕಳು
ಮತ್ತು ಕುಟುಂಬಸ್ಥರು.
ಪಾಲಿಬೆಟ್ಟ, ಭದ್ರಗೊಳ ಗ್ರಾಮ,
ಫೋ: 451013

Reg. No. KA/SK/MYS-88/2002 Registered : 10-01-96 TCI Kar. 09592

ಆಲ್‌ರೌಂಡರ್ ಆಟಗಾರ
ಪಟ್ಟಡ ದೀಪಕ್



## ದಕ್ಷಿಣ ವಲಯ ಅಂತರ ವಿಶ್ವವಿಧ್ಯಾಲಯ ಕ್ರಿಕೆಟ್‌ಗೆ ಆಯ್ಕೆ

ತಮಿಳು ನಾಡಿನ ಹೊಸೂರುನಲ್ಲಿ ತಾರೀಖು 14-11-2002 ರಿಂದ 25-11-2002 ರ ತನಕ ದಕ್ಷಿಣ ವಲಯ ವಿಶ್ವ ವಿದ್ಯಾಲಯ ಕ್ರಿಕೆಟ್ ಪಂದ್ಯಾಟ ನಡೆಯಿತು. ದಕ್ಷಿಣ ವಲಯದ ಸುಮಾರು 41 ತಂಡಗಳು ಭಾಗವಹಿಸಿದ್ದವು.

ಮೈಸೂರು ವಿ.ವಿ.ಯು 8 ರ ಘಟ್ಟಕ್ಕೆ ತಲಪಿದ್ದು, ಕ್ವಾರ್ಟರ್ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ಸ್ ಉಸ್ಮಾನಿಯಾ ಯೂನಿವರ್ಸಿಟಿಗೆ ಕೇವಲ 10 ರನ್ನ್‌ಗಳ ಅಂತರದಿಂದ ಸೋತು ನಿರ್ಗಮಿಸಿದರು.

50 ಓವರ್‌ನಲ್ಲಿ ಉಸ್ಮಾನಿಯಾ ಯೂನಿವರ್ಸಿಟಿ 272 ರನ್ನ್‌ಗಳನ್ನು ಬಾರಿಸಿದ್ದರೆ ಮೈಸೂರು ವಿ. ವಿ. ಯು 262 ರನ್ನ್ ಗಳಿಸಿತು. ಈ ಹಿಂದೆ ಬೌಲರ್, ಬ್ಯಾಟ್ಸ್‌ಮನ್ ಆಗಿ ಆಡಿದರೂ ಈ ಸರ್ತಿ ವಿಕೇಟ್ ಕೀಪರ್ ಆಗಿ ಕಾರ್ಯ ನಿರ್ವಹಿಸಿದ ಕೀರ್ತಿ ಶ್ರೀಯುತರದು.

ಪಟ್ಟಡ ದೀಪಕ್ ಮೈಸೂರು ಮಹಾರಾಜ ಕಾಲೇಜಿನ ಪ್ರಥಮ ಜರ್ನಲಿಸಂ ವಿದ್ಯಾರ್ಥಿಯಾಗಿದ್ದು, ಇವರು ಕೊಡಗು ಸಂಗಾತಿ ಪತ್ರಿಕೆಯ ಗೌರವ ಸಂಪಾದಕರಾದ ಪಟ್ಟಡ ಪ್ರಭಾಕರ ಮತ್ತು ಶೀಲಾಮಣಿ ದಂಪತಿಗಳ ಪುತ್ರರಾಗಿರುತ್ತಾರೆ. ಇವರ ಉಜ್ವಲ ಭವಿಷ್ಯಕ್ಕೆ ಸಂಗಾತಿ ಶುಭ ಹಾರೈಸುತ್ತದೆ.

-ಸಂಗಾತಿ

## ಚಿನ್ನದ ಪದಕ ವಿಜೇತ : ಪೂಳಕಂಡ ಪ್ರದೀಪ್



ಪೂಳಕಂಡ ಪ್ರದೀಪ್

ಪೂಳಕಂಡ ಪ್ರದೀಪ್‌ನವರು ಪೂಳಕಂಡ ಮುತ್ತಪ್ಪ ಮತ್ತು ದಮಯಂತಿ ದಂಪತಿಗಳ ಪ್ರಥಮ ಪುತ್ರ. 2002 ನೇ ಸಾಲಿನ ಎಲ್. ಎಲ್. ಎಂ. ಪದವಿಯನ್ನು ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ನಡೆದ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದು ಮೂರು ಚಿನ್ನದ ಪದಕವನ್ನು ಮತ್ತು ನಗದು ಬಹುಮಾನವನ್ನು ಪಡೆದಿರುತ್ತಾರೆ. 2002 ರ ಅಕ್ಟೋಬರ್ ತಿಂಗಳಲ್ಲಿ, ಬೆಂಗಳೂರಿನಲ್ಲಿ ನಡೆದ ಕೈಲು ಮೂಹೂರ್ತ ಹಬ್ಬದ ಸಮಾರಂಭದಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದವರು ಸನ್ಮಾನಿಸಿ ಪ್ರಶಸ್ತಿಯನ್ನು ಪ್ರಧಾನ ಮಾಡಿರುತ್ತಾರೆ. ಅದು ಅಲ್ಲದೆ ಕಳೆದ ಅಕ್ಟೋಬರ್ ತಿಂಗಳಲ್ಲಿ ಮರಗೋಡು ಗೌಡ ಸಮಾಜದ ಸಂತೋಷ ಕೂಟದ ಸಮಾರಂಭದಲ್ಲಿ ಸನ್ಮಾನಿಸಿ ಪ್ರಶಸ್ತಿಯನ್ನು ನೀಡಿರುತ್ತಾರೆ. ಮೈಸೂರು ವಿಶ್ವ ವಿದ್ಯಾಲಯದ ಯು. ಜಿ. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರ ಉತ್ತಮ ಭವಿಷ್ಯಕ್ಕೆ ಶುಭ ಹಾರೈಕೆ.

- ಸಂಗಾತಿ

**Kodagu Sangathi** Kannada Fortnightly Edited, Published, Printed by **Pattada Sheelamani, 1055c, Doddanna Buildings, Hunsur Road, Hinkal Post, Mysore-570017. ☎ : 0821/404290.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/431792.